Swabhimani Sahakari

Pages : 28 / 12₹

# ಸ್ವಾಭಿಮಾನಿ ಸಹಕಾರಿ

Volume - 20
Issue - 03
March - 2023

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಬಂದ ಚೈತ್ರದ ಹಾದಿ ತೆರೆದಿದೆ
ಬಣ್ಣ-ಬೆಡಗಿನ ಮೋಡಿಗೆ
ಹೊಸತು ವರ್ಷದ ಹೊಸತು ಹರ್ಷದ
ಬೇವು-ಬೆಲ್ಲದ ಬೀಡಿಗೆ!

ಕೊಂಬೆ ಕೊಂಬೆಯ ತುಂಬ ಪುಟಿದಿದೆ
ಅಂತರಂಗದ ನಂಬಿಕೆ
ಚಿಗುರು ಹೂವಿನ ಬಣ್ಣದಾರತಿ
ಯಾವುದೋ ಆನಂದಕೆ!

-ಜಿ.ಎಸ್.ಶಿವರುದ್ರಪ್ಪ

ಮಾರ್ಚ್ 22
ಚಾಂದ್ರಮಾನ
ಯುಗಾದಿ





ಮಾರ್ಚ್ 26
ದೇವರ ದಾಸಿಮಯ್ಯ
ಜಯಂತಿ

ಮಾರ್ಚ್ 8
ಅಂತರರಾಷ್ಟ್ರೀಯ ಮಹಿಳಾ ದಿನ ಹಾಗೂ ಹೋಳಿ ಹಬ್ಬ



2023ರ ಧ್ಯೇಯ:
ಲಿಂಗ ಸಮಾನತೆಗಾಗಿ
ನಾವೀನ್ಯತೆ ಹಾಗೂ ಮಹಿಳೆಯರ
ಸಬಲೀಕರಣಕ್ಕಾಗಿ ಡಿಜಿಟಲ್
ಯುಗದಲ್ಲಿ ಶಿಕ್ಷಣ



ಸೌಹಾರ್ದ ಸಹಕಾರಿಗಳ
ಸಂಖ್ಯೆ : 5809

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1610



ಜಿ. ನಂಜನಗೌಡ

ಆತ್ಮೀಯ ಸಹಕಾರಿ ಬಂಧುಗಳಿಗೆ ಯುಗಾದಿ ಹಬ್ಬದ ಹಾಗೂ ಶೋಭನ ನಾಮ ಸಂವತ್ಸರದ ಹಾರ್ದಿಕ ಶುಭಾಶಯಗಳು. ಯುಗಾದಿ ಹಬ್ಬವು ಪ್ರತಿಯೊಬ್ಬರ ಬಾಳಿನಲ್ಲಿ ಹೊಸತನವನ್ನು ತರಲಿ. ಜೀವನಕ್ಕೆ ಹೊಸ ಚೈತನ್ಯವನ್ನು ನೀಡಲಿ ಸುಖ ಶಾಂತಿ ನೆಮ್ಮದಿಯನ್ನು ಕರುಣಿಸಲಿ ಎಂದು ಹಾರೈಸುತ್ತೇನೆ.

# ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗೆ ಯುವಕರ ಪಾಲಗಾರಿಕೆ ಹೆಚ್ಚಿಸುವುದಕ್ಕಾಗಿ ಸಹಕಾರ ಕುರಿತು ಸಂವಾದ ಕಾರ್ಯಕ್ರಮವು ಸಾರ್ಥಕ.

ಆತ್ಮೀಯ ಸಹಕಾರಿ ಬಂಧುಗಳಿಗೆ ಯುಗಾದಿ ಹಬ್ಬದ ಹಾಗೂ ಶೋಭನ ನಾಮ ಸಂವತ್ಸರದ ಹಾರ್ದಿಕ ಶುಭಾಶಯಗಳು. ಯುಗಾದಿ ಹಬ್ಬವು ಪ್ರತಿಯೊಬ್ಬರ ಬಾಳಿನಲ್ಲಿ ಹೊಸತನವನ್ನು ತರಲಿ. ಜೀವನಕ್ಕೆ ಹೊಸ ಚೈತನ್ಯವನ್ನು ನೀಡಲಿ ಸುಖ ಶಾಂತಿ ನೆಮ್ಮದಿಯನ್ನು ಕರುಣಿಸಲಿ ಎಂದು ಹಾರೈಸುತ್ತೇನೆ. ಅದರಂತೆ ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿಯೂ ಸಹ ಸಹಕಾರ ಕ್ಷೇತ್ರವನ್ನು ಹೊಸ ಚೈತನ್ಯದೊಂದಿಗೆ ನಡೆಸುವಂತಹ ಶಕ್ತಿ ಸಾಮರ್ಥವನ್ನು ಭಗವಂತನು ತಮ್ಮೆಲ್ಲರಿಗೂ ದಯಪಾಲಿಸಲಿ ಎಂದು ಹಾರೈಸುತ್ತೇನೆ.

ಸಂಯುಕ್ತ ಸಹಕಾರಿಯ ವತಿಯಿಂದ ದಿನಾಂಕ 23.02.2023 ರಂದು ಗದಗನಲ್ಲಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ವಿಶ್ವವಿದ್ಯಾಲಯದವರ ಸಹಯೋಗದೊಂದಿಗೆ ಯುವಕರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ಮಾಹಿತಿ ನೀಡುವ ಹಾಗೂ ಯುವಕರಿಗೆ ಸಹಕಾರ ಕ್ಷೇತ್ರದ ಬಗ್ಗೆ ಆಸಕ್ತಿ ಮೂಡಿಸುವ ದೃಷ್ಟಿಯಿಂದ ಯುವಕರು ಹಾಗೂ ಸಹಕಾರ ಸಂವಾದ ಕಾರ್ಯಕ್ರಮ ಸಾರ್ಥಕ ಕಾರ್ಯಕ್ರಮವೆಂದು ಭಾವಿಸುತ್ತೇನೆ. ಈ ಸಹಕಾರಿ ರಥವನ್ನು ಅತ್ಯಂತ ಗುಣಾತ್ಮಕವಾಗಿ ಭದ್ರತೆಯಿಂದ ಮುನ್ನಡೆಸುವ ಜವಾಬ್ದಾರಿ ಯುವಕರ ಮೇಲೆ ಅವಲಂಬಿತವಾಗಿದೆ. ಯುವಕರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ಆಸಕ್ತಿ ಇರದಿರುವುದಕ್ಕೆ ಕಾರಣ ಅವರಿಗೆ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಇಲ್ಲದಿರುವುದರಿಂದ ಮತ್ತು ಸಹಕಾರ ಕ್ಷೇತ್ರದ ಬಗ್ಗೆ ಅವರು ಪಡೆಯಬಹುದಾದ ಲಾಭಗಳ ಬಗ್ಗೆ ಅವರಿಗೆ ಮಾಹಿತಿ ಇಲ್ಲದಿರುವುದರಿಂದ ಅವರು ಅವಕಾಶ ವಂಚಿತರಾಗಬಹುದು.

ಯುವಕರಿಗಾಗಿ ಸಹಕಾರ ಕ್ಷೇತ್ರದ ವಿವಿಧ ಚಟುವಟಿಕೆಗಳ, ವಿವಿಧ ಆಯಾಮಗಳ ಸಾಧನೆಗಳ ಶಕ್ತಿ ಸಾಮರ್ಥ್ಯಗಳ ಅವಕಾಶಗಳ ದೌರ್ಬಲ್ಯಗಳ ಸವಾಲುಗಳ ಬಗ್ಗೆ ಜ್ಞಾನವನ್ನು ನೀಡುವ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕಳೆದ ಹಲವು ವರ್ಷಗಳಿಂದ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಬಂದಿದೆ. ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ ವಿಶ್ವವಿದ್ಯಾಲಯ ಗದಗ ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ 205 ವಿದ್ಯಾರ್ಥಿಗಳು ಹಾಗು ವಿವಿಧ ಸಹಕಾರಿ ಸಂಸ್ಥೆಗಳಿಂದ 32 ಯುವಕರು ಸಕ್ರೀಯವಾಗಿ ಭಾಗವಹಿಸಿ ಸಹಕಾರ ಕ್ಷೇತ್ರದ ವಿವಿಧ ವಿಭಾಗಗಳ ಮಾಹಿತಿ ಪಡೆದುಕೊಳ್ಳುವುದರ ಜೊತೆಗೆ ವಿಶ್ವವಿದ್ಯಾಲಯದಲ್ಲಿ ಸ್ಟುಡೆಂಟ್ಸ್ ಕೋ-ಆಪರೇಟಿವ್ ಸೊಸೈಟಿ ಹಾಗೂ ಶಿಕ್ಷಕರಿಗಾಗಿ ಕ್ರೆಡಿಟ್ ಸಹಕಾರ ಸಂಘಗಳನ್ನು ಪ್ರಾರಂಭಿಸಲು ತೀರ್ಮಾನಿಸಿರುವುದು ಶ್ಲಾಘನೀಯ ಹಾಗೂ ಸ್ವಾಗತಾರ್ಹ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ........................................... 2
ಸಂಪಾದಕೀಯ........................................... 3
ಜ್ಞಾನ ಜ್ಯೋತಿ........................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................... 05–12
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................... 13–16
**ಲೇಖನಗಳು :**
ಸೌಹಾರ್ದ ಸಹಕಾರಿ ಕಾಯಿದೆ ಪ್ರಸ್ತುತತೆ ........ ........................................... 17–20
ಶತಾಯುರ್ವಜ್ರದೇಹಾಯ ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ– ಶೋಭನನಾಮ ಸಂವತ್ಸರ ............... 21–22
ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಲೇಖನಗಳು ........................................... 24–28

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ಸಮಗ್ರ ಅಭಿವೃದ್ಧಿಯತ್ತ ಬೇಕು ಸಹಕಾರಿಗಳ ಚಿತ್ತ.

**ಆತ್ಮೀಯ ಸಹಕಾರಿ ಬಂಧುಗಳೇ,**

ಶೋಭನ ನಾಮ ಸಂವತ್ಸರ ಹಾಗೂ ಯುಗಾದಿಯ ಈ ಪರ್ವಕಾಲದಲ್ಲಿ ರಾಜ್ಯದ ಎಲ್ಲ ಸಹಕಾರಿಗಳಿಗೆ ಶುಭ ಹಾರೈಕೆಗಳು. ದೇವರು ನಿಮ್ಮೆಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ಪ್ರಾರ್ಥಿಸುತ್ತೇನೆ. ಪ್ರಸ್ತುತ ತಮೆಲ್ಲ ತಿಳಿದಂತೆ ಸಹಕಾರಿ ಕ್ಷೇತ್ರಕ್ಕೆ 119 ವರ್ಷಗಳ ಇತಿಹಾಸ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ 22 ವರ್ಷಗಳ ಇತಿಹಾಸವಿದೆ. ಸಹಕಾರಿ ಅಂದೋಲನ ಯಾವುದೇ ಒಂದು ವಿಷಯದ ಅಭಿವೃದ್ಧಿಯ ಅಥವಾ ಸಾಧನೆಯ ಅಂದೋಲನವಾಗದೆ ಮಾನವನ ಸಮಗ್ರ ಚಟುವಟಿಕೆಗಳ ಅಭಿವೃದ್ಧಿಯ ಗುರಿಯನ್ನು ಹೊಂದಿದೆ ಎಂಬ ಬಗ್ಗೆ ಸಹಕಾರಿಗಳಲ್ಲಿ ಅರಿವು ಮೂಡಿಸುವ ಪ್ರಯತ್ನವಾಗಬೇಕಿದೆ.

ಸಹಕಾರ ಕ್ಷೇತ್ರದ ವಿರಾಟ ಸ್ವರೂಪದ ಬಗ್ಗೆ ಸಹಕಾರಿ ಕಾರ್ಯಕರ್ತರುಗಳು ಸಂಪೂರ್ಣ ಜ್ಞಾನ ಹೊಂದಿರಬೇಕು. ದೇಶದಲ್ಲಿ 8.5 ಲಕ್ಷ ಸಹಕಾರಿಗಳು ರಾಜ್ಯದಲ್ಲಿ 45000 ಸಹಕಾರಿ ಸಂಸ್ಥೆಗಳು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 5700 ಕ್ಕೂ ಹೆಚ್ಚು ಸಹಕಾರಿಗಳು ಕಾರ್ಯನಿರ್ವಹಿಸುತ್ತೀವೆ. ಈ ದೇಶದ ಮುಖ್ಯವಾಹಿನಿಯಲ್ಲಿ ಸಹಕಾರಿ ಕ್ಷೇತ್ರವನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುವಂತೆ ಕೇಂದ್ರ ಸಹಕಾರ ಸಚಿವಾಲಯದ ಮೂಲಕ ದೇಶದಾದ್ಯಂತ ಸಹಕಾರಿಗಳಲ್ಲಿ ಸಂಚಲನ ಮೂಡಿಸುವಂತಹ ಕಾರ್ಯಗಳು ನಡೆಯುತ್ತಿರುವುದನ್ನು ಸಹಕಾರಿಗಳು ಗಮನಿಸಬೇಕು. ದೇಶಕ್ಕೆ ಒಂದು ಸಹಕಾರ ನೀತಿ, ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆ, ರಾಷ್ಟ್ರ ಮಟ್ಟದ ಬಹು ರಾಜ್ಯ ಬೀಜಗಳ ಸಹಕಾರ ಸೊಸೈಟಿ, ರಾಷ್ಟ್ರೀಯ ಬಹು ರಾಜ್ಯ ಸಾವಯವ ಸಹಕಾರ ಸಂಘ, ರಾಷ್ಟ್ರೀಯ ಮಟ್ಟದ ಬಹು ರಾಜ್ಯ ಸಹಕಾರ ರಫ್ತು ಸೊಸೈಟಿಗಳ ರಚನೆ ಮುಂತಾದ ಚಟುವಟಿಕೆಗಳ ಬಗ್ಗೆ ಅಧ್ಯಯನ ಹಾಗೂ ಅವುಗಳಲ್ಲಿ ಸೌಹಾರ್ದ ಸಹಕಾರಿಗಳಿಗೆ ಇರುವ ಅವಕಾಶಗಳ ಅನ್ವೇಷಣೆ ಸೌಹಾರ್ದ ಸಹಕಾರಿಗಳ ಕಾರ್ಯವಾಗಬೇಕು.

ಸೌಹಾರ್ದ ಸಹಕಾರಿ ಕ್ಷೇತ್ರದ ಸಹಕಾರಿ ನಾಯಕರು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೇ ಮುಖ್ಯವಾಹಿನಿಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವಂತೆ ಅನೇಕ ಚಟುವಟಿಕೆಗಳನ್ನು ತಮ್ಮ ಸಹಕಾರಿಗಳಲ್ಲಿ ಹಮ್ಮಿಕೊಳ್ಳಬಹುದಾಗಿದೆ ಎಂಬ ಬಗ್ಗೆ ಸಂಯುಕ್ತ ಸಹಕಾರಿಯ ಹಲವಾರು ತರಬೇತಿ ಕಾರ್ಯಕ್ರಮಗಳ ಮೂಲಕ ತಿಳಿಸುವ ಪ್ರಯತ್ನ ಮಾಡಲಾಗಿದೆ. ಈ ಬಗ್ಗೆ ಸಹಕಾರಿ ಕಾರ್ಯಕತ್ರರುಗಳು ಜಾಗೃತರಾಗಿ ವಿಷಯಗಳ ಅಧ್ಯಯನ ಮಾಡಿ ಸಾಂಪ್ರದಾಯಿಕ ಠೇವಣಿ ಸಂಗ್ರಹಿಸುವ ಹಾಗೂ ಸಾಲ ನೀಡುವ ಕಾರ್ಯಚಟುವಟಿಕೆಗಳ ಜೊತೆಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಮುನ್ನಡೆಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ.



## ಜ್ಞಾನ ಜ್ಯೋತಿ

– ಶ್ರೀ ಸಿದ್ಧೇಶ್ವರ ಸ್ವಾಮೀಜಿ. ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಸಂತಸದ ಬದುಕು"

ನಮ್ಮಲ್ಲಿ ಮೂರು ಬಗೆಯ ಶಕ್ತಿಗಳಿವೆ. ದೈಹಿಕ, ಮಾನಸಿಕ ಹಾಗೂ ಬೌದ್ಧಿಕ, ದೇಹದ ಶಕ್ತಿಯನ್ನು ನಾವು ಬಳಸುವಂತೆ ಮನಸ್ಸಿಗೆ ಹಾಗೂ ಬುದ್ಧಿಯ ಶಕ್ತಿಗಳನ್ನು ಬಳಸುತ್ತಿರುತ್ತೇವೆ. ಏಕೆಂದರೆ ಅದರಲ್ಲಿಯೇ ಬದುಕಿದೆ. ಶಕ್ತಿ ಇರುವುದು ಬರೀ ಸಂಗ್ರಹಕ್ಕಾಗಿ ಅಲ್ಲ. ಬಳಕೆಗಾಗಿ, ಅದನ್ನು ಬಳಸಿದಾಗ ಬಾಹ್ಯ ಹಾಗೂ ಆಂತರಿಕ ಬದುಕು ಸಮೃದ್ಧವಾಗುತ್ತದೆ. ಎಷ್ಟೋ ಸಲ ನಾವು ಬರೀ ಸಂಗ್ರಹ ಮಾಡುತ್ತೇವೆ. ಧನಶಕ್ತಿಯನ್ನು ಸಂಗ್ರಹ ಮಾಡಿದ ಮಾತ್ರಕ್ಕೆ ಅದು ಜೀವನದಲ್ಲಿ ಸಮೃದ್ಧಗೊಳಿಸುವುದಿಲ್ಲ. ನಮ್ಮ ಬಳಿ ಎಷ್ಟು ಧಾನ್ಯ ಇದೆ ಅನ್ನುವದಕ್ಕಿಂತ ನಾವು ಎಷ್ಟನ್ನು ಅರಗಿಸಿಕೊಳ್ಳಬಲ್ಲೆವು ಎನ್ನುವುದು ಮಹತ್ವದ್ದು.

ಶಕ್ತಿಯನ್ನು ಎರಡು ರೂಪದಲ್ಲಿ ಬಳಸುತ್ತೇವೆ – ನಾಶಮಾಡಲು ಹಾಗೂ ನಿರ್ಮಾಣ ಮಾಡಲು, ಸಂತೋಷಕ್ಕಾಗಿಯೂ ಶಕ್ತಿಯನ್ನು ಬಳಸಬಹುದು. ದುಃಖಕ್ಕಾಗಿಯೂ ಶಕ್ತಿಯನ್ನು ಬಳಸಬಹುದು. ಆದ್ದರಿಂದ ಶಕ್ತಿಯನ್ನು ವಿವೇಕಯುತವಾಗಿ ಬಳಸಬೇಕು. ಶಕ್ತಿಯ ಬಳಕೆ ಸಂತಸವನ್ನುಂಟು ಮಾಡಬೇಕು. ವಿಶ್ವೇಶ್ವರಯ್ಯ ಒಬ್ಬ ಮಹಾನ್ ವ್ಯಕ್ತಿ. ಎಂತಹ ಉನ್ನತ ಹುದ್ದೆಯಲ್ಲಿದ್ದರೂ ಎಂದೂ ತಮ್ಮ ಅಧಿಕಾರದ ದುರ್ಬಳಕೆ ಮಾಡಿದವರಲ್ಲ. ಒಂದು ಜಲಪಾತವನ್ನು ನೋಡಲು ಹೋದಾಗ ಅವರು, "ಎಷ್ಟೊಂದು ಶಕ್ತಿ ಅಪವ್ಯಯವಾಗುತ್ತಿದೆಯಲ್ಲ !" ಎಂದು ಉದ್ಗರಿಸಿದರು. ಆ ಜಲಪಾತದಲ್ಲಿ ಅವರು ಬರೀ ಸೌಂದಯ್ಯವನ್ನು ಕಾಣದೆ ಅದರಲ್ಲಿ ಅದ್ಭುತ ಶಕ್ತಿಯನ್ನು ಕಂಡರು. ಆ ಶಕ್ತಿಯನ್ನು ಉಪಯೋಗಿಸಿ ಇಡೀ ಮೈಸೂರು ಪ್ರಾಂತವನ್ನೇ ಝಗಮಗಿಸುವಂತೆ ಮಾಡಿದರು. ಮನುಷ್ಯ ತನ್ನ ಶಕ್ತಿ ಸಾಮರ್ಥ್ಯಗಳನ್ನುಪಯೋಗಿಸಿ ಜೀವನವನ್ನು ಸಮೃದ್ಧ ಮಾಡಿಕೊಳ್ಳುವುದನ್ನು ಮರೆತಿದ್ದಾನೆ. ದೇವರು ಶಕ್ತಿ ಕೊಟ್ಟಿರುವುದು ಸಂಗ್ರಹಕ್ಕಾಗಿ ಅಲ್ಲ ಬಳಸುವುದಕ್ಕಾಗಿ, ಹೇಗೋ ಬಳಸುವುದಕ್ಕಾಗಿ ಅಲ್ಲ ಚೆನ್ನಾಗಿ ಬಳಸುವುದಕ್ಕಾಗಿ, ಯಾರು ಸಂಪತ್ತನ್ನು ಬಳಸಿ ಜಗತ್ತನ್ನು ಶ್ರೀಮಂತಗೊಳಿಸುತ್ತಾರೋ ಅಂಥವರ ಕೈಯಲ್ಲಿ ಸಂಪತ್ತು ಸಿಗಬೇಕು.

ಎರಡನೆಯದಾಗಿ ಮಾನಸಿಕ ಸಾಮರ್ಥ್ಯ. ಜೀವನಕ್ಕೆ ಕಳೆ ತರುವುದು ಮನಸ್ಸಿನ ಸಾಮರ್ಥ್ಯ. ಒಳ್ಳೆಯ ಭಾವನಗೆಳನ್ನು ಸುಂದರ ವಿಚಾರಗಳನ್ನು ಬಿತ್ತಿದರೆ ಈ ಜಗತ್ತು ಸುಂದರವಾಗುತ್ತದೆ. ಒಳ್ಳೆಯ ಮಾತು ಪ್ರಸನ್ನತೆಗಳ ಮೂಲಕ ಈ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಇರಬೇಕು. ಕಷ್ಟದ ಜೀವನದಲ್ಲಿ ಸುಖದ ಹೂವನ್ನು ಅರಳಿಸುವುದು ಮಧುರ ಭಾವನ ಸಾಮರ್ಥ್ಯ!.

ಮೂರನೇಯದು ವಿಚಾರಶಕ್ತಿ. ಬುದ್ಧಿ ಬಹಳ ಮಹತ್ವದ್ದು, ಅದನ್ನು ಬಹಳ ಬುದ್ಧಿವಂತಿಕೆಯಿಂದ ಬಳಸಬೇಕು. ಅದು ಒಂದು ಆಯುಧ, ಅದನ್ನು ಬಳಸುವ ಕಲೆ ಗೊತ್ತಿರಬೇಕು. ಆ ಬುದ್ಧಿಯನ್ನು ಬಳಸಿ ದೇಶವನ್ನು ಕಟ್ಟಬೇಕು. ಲಾಲ್ ಬಹದ್ದೂರ್ ಶಾಸ್ತ್ರಿ ಒಬ್ಬ ಜಾಣ ಮನುಷ್ಯ. ಒಮ್ಮೆ ಇಂಗ್ಲೆಂಡಿನವರೊಬ್ಬರು ತಮ್ಮಲ್ಲಿಗೆ ಬರಬೇಕೆಂದು ಶಾಸ್ತ್ರೀಯವರನ್ನು ಆಹ್ವಾನಿಸಿದರು. ಆಗ ಅವರು, "ನಿಮ್ಮ ದೇಶ ಬಹಳ ದೊಡ್ಡದು, ನಾನು ಬಹಳ ಚಿಕ್ಕವ" ಎಂದರು. ಆಗ ಬಂದವರು, "ನಾವು ಶರೀರದಿಂದ ಸಾಮರ್ಥ್ಯವನ್ನು ಅಳೆಯುವುದಿಲ್ಲ. ಬುದ್ಧಿಯಿಂದ ಅಳೆಯುತ್ತೇವೆ" ಎಂದರು ವ್ಯಕ್ತಿಯ ಹಿರಿಮೆ ಗರಿಮೆಗಳು ಭಾವ–ಬುದ್ಧಿಯನ್ನು ಅವಲಂಬಿಸಿರುತ್ತೇವೆ.

ಮನಸ್ಸಿನಲ್ಲಿರುವ ಅದ್ಭುತ ಸಾಮರ್ಥ್ಯವನ್ನು ವಿಶಾಲಗೊಳಿಸುವುದು ಯೌಗಿಕ ಸಾಮರ್ಥ್ಯ. ಯೌಗಿಕ ಎಂದರೆ ಇಂದ್ರಿಯಗಳನ್ನು ನಿಯಂತ್ರಿಸುವುದು. ಮನಸ್ಸನ್ನು ವಿಕಾಶಗೊಳಿಸುವುದು. ಮನಸ್ಸು ವಿಕಾಶಗೊಂಡಾಗ ಒಂದು ಬಗೆಯ ಶಕ್ತಿ ಹೊರಹೊಮ್ಮುತ್ತದೆ: ಒಂದು ರೀತಿಯ ಚೈತನ್ಯ ಅದರಿಂದ ಹೊರಹೊಮ್ಮುತ್ತದೆ. ಅಂತಹವರಿದ್ದಲ್ಲಿ ಒಂದು ಬಗೆಯ ಶಕ್ತಿ ಹೊರಹೊಮ್ಮುತ್ತದೆ. ಒಂದು ರೀತಿಯ ಚೈತನ್ಯ ಅದರಿಂದ ಹೊರಹೊಮ್ಮುತ್ತದೆ. ಅಂತಹವರಿದ್ದಲ್ಲಿ ಒಂದು ಬಗೆಯ ಪವಿತ್ರ ವಾತಾವರಣ ನಿರ್ಮಾಣವಾಗುತ್ತದೆ.

ಲೌಕಿಕ ಸಾಧನೆ. ಯೌಗಿಕ ಸಾಧನೆಗಳಿದ್ದರಷ್ಟೇ ಸಾಲದು. ಪಾರಮಾರ್ಥಿಕ ಸಾಧನೆಯೂ ಬೇಕು. ಪಾರಮಾರ್ಥಿಕ ಸಾಧನೆಯಿಂದ ಪರಮಾರ್ಥ ಉಂಟಾಗುತ್ತದೆ. ಈ ಮೂರು ಇದ್ದಾಗ ಮಾತ್ರ ಅದೊಂದು ಪೂರ್ಣ ಬದುಕಾಗುತ್ತದೆ. ಇವುಗಳಲ್ಲಿ ಒಂದಿಲ್ಲದಿದ್ದರೂ ಅದು ವ್ಯರ್ಥ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 26,661 ಆಗಿರುತ್ತದೆ. ಇವುಗಳ ಪೈಕಿ 14,729 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 11932.

**ಜನವರಿ ತಿಂಗಳ ಪ್ರಕರಣಗಳು :** ದಾವಾಪ್ರಕರಣ 554 ಇತ್ಯರ್ಥಗೊಂಡ ಪ್ರಕರಣಗಳು 196.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 5,635 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1041 ಪ್ರಕರಣಗಳು ಇತ್ಯರ್ಥಗೊಂಡಿದ್ದು, 4594 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1026 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 445 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಫೆಬ್ರವರಿ ತಿಂಗಳಿನಲ್ಲಿ 197 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

## ಮಾನ್ಯ ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರ್ ಭೇಟಿ



**ಬೆಂಗಳೂರು** : ದಿನಾಂಕ 16.02.2023 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ್ ಇವರನ್ನು ಭೇಟಿ ಮಾಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಕುರಿತು ಚರ್ಚೆ ನಡೆಸಿದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ರವರು ಹಾಗೂ ಹಿರಿಯ ಸಹಕಾರಿ ಧುರೀಣರಾದ ಶ್ರೀ ಜಿ. ರಮೇಶ್ ವೈದ್ಯ ಇವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸದಸ್ಯರ ಠೇವಣಾತಿಗಳನ್ನು ಸಕಾಲದಲ್ಲಿ ಹಿಂದುರುಗಿಸಲು ವಿಫಲವಾಗಿರುವ ಸೌಹಾರ್ದ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿ ಮೇಲೆ ನಿರ್ದಾಕ್ಷಣ್ಯವಾಗಿ ಕ್ರಮ ವಿಡಲಾಗುತ್ತದೆ. ಸೌಹಾರ್ದ ಸಹಕಾರಿ ಕ್ಷೇತ್ರದ ವಿಶ್ವಸಾರ್ಹತೆಯನ್ನು ಹೆಚ್ಚಿಸುವ ಕ್ರಮವಿಡಲಾಗುತ್ತಿದೆ ಎಂದು ಸಹಕಾರ ಸಚಿವರ ಗಮನಕ್ಕೆ ತರಲಾಯಿತು.

## ಯುವ ಸಹಕಾರಿಗಳಿಗಾಗಿ ಸಹಕಾರ ಕುರಿತು ಸಂವಾದ ಕಾರ್ಯಕ್ರಮ.



ಉದ್ಘಾಟನೆ



ಡಿ.ಸಿ.ಬಿ.ಎಮ್ ಅಧ್ಯಯನ ಸಾಹಿತ್ಯ ಬಿಡುಗಡೆ

### ಯುವಕರಲ್ಲಿ ಸಹಕಾರಿ ಪ್ರಜ್ಞೆ ಮೂಡಿಸುವ ಈ ಸಂವಾದ ಕಾರ್ಯಕ್ರಮ ಸ್ವಾಗತಾರ್ಹ : ಶ್ರೀ ವಿಷ್ಣುಕಾಂತ ಚಟಪಲ್ಲಿ



ಸಂಯುಕ್ತ ಸಹಕಾರಿಯ ವತಿಯಿಂದ ದಿನಾಂಕ 23.02.2023 ರಂದು ಗದಗನಲ್ಲಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ವಿಶ್ವವಿದ್ಯಾಯದವರ ಸಹಯೋಗದೊಂದಿಗೆ ಯುವಕರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ಮಾಹಿತಿ ನೀಡುವ ಹಾಗೂ ಯುವಕರಿಗೆ ಸಹಕಾರ ಕ್ಷೇತ್ರದ ಬಗ್ಗೆ ಆಸಕ್ತಿ ಮೂಡಿಸುವ ದೃಷ್ಟಿಯಿಂದ ಯುವಕರು ಹಾಗೂ ಸಹಕಾರ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ ವಿಶ್ವವಿದ್ಯಾಲಯ ಗದಗ ಕುಲಪತಿಗಳಾದ ಶ್ರೀ ವಿಷ್ಣುಕಾಂತ ಚಟಪಲ್ಲಿಯವರು ನೇರವೇರಿಸಿ ಮಾತನಾಡುತ್ತ ಸಹಕಾರ ತತ್ವ ಉತ್ತಮ ಸಂಸ್ಕಾರದ ಬುನಾದಿ. ವಿಶೇಷವಾಗಿ ಯುವಕರಲ್ಲಿ ಸಹಕಾರ ಸಂಸ್ಕಾರ ಒದಗಿಸುವ ಪ್ರಯತ್ನವಾಗಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿ ಮತ್ತು ಸಹಕಾರ ಕ್ಷೇತ್ರದಲ್ಲಿ ಯುವಕರು ಉದ್ಯೋಗ ಪಡೆದುಕೊಳ್ಳಲು ಸಾಧ್ಯವಾಗುವಂತೆ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷದ ಡಿಪ್ಲೋಮಾ ಇನ್ ಕೋ-ಆಪರೇಶನ್ ಅಂಡ ಬ್ಯಾಂಕಿಂಗ ಮೇನೇಜಮೆಂಟ ಕೋರ್ಸನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಕೋರ್ಸ ಪ್ರಾರಂಭಿಸಲಾಗಿದೆ. ಈ ಕೋರ್ಸನಲ್ಲಿ 638 ಯುವ ಅಭ್ಯರ್ಥಿಗಳು ನೊಂದಾಯಿಸಿಕೊಂಡಿದ್ದಾರೆ. ಯುವಕರಲ್ಲಿ ಸಹಕಾರಿ ಪ್ರಜ್ಞೆ ಮೂಡಿಸುವ ಈ ಕಾರ್ಯಕ್ರಮ ಸ್ವಾಗತಾರ್ಹ ಎಂದು ತಿಳಿಸಿದರು.



### ಯುವಕರಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಇದೊಂದು ಸಾರ್ಥಕ ಕಾರ್ಯಕ್ರಮ : ಶ್ರೀ ಜಿ. ನಂಜನಗೌಡ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಜಿ. ನಂಜನಗೌಡರವರು ಯುವಕರಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಇದೊಂದು ಸಾರ್ಥಕ ಕಾರ್ಯಕ್ರಮವೆಂದು

ಭಾವಿಸುತ್ತೇನೆ. ಈ ಸಹಕಾರಿ ರಥವನ್ನು ಅತ್ಯಂತ ಗುಣಾತ್ಮಕವಾಗಿ ಭದ್ರತೆಯಿಂದ ಮುನ್ನಡೆಸುವ ಜವಾಬ್ದಾರಿ ಯುವಕರ ಮೇಲೆ ಅವಲಂಬಿತವಾಗಿದೆ. ಯುವಕರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ಆಸಕ್ತಿ ಇರದಿರುವುದಕ್ಕೆ ಕಾರಣ ಅವರಿಗೆ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಇಲ್ಲದಿರುವುದರಿಂದ ಮತ್ತು ಸಹಕಾರ ಕ್ಷೇತ್ರದ ಬಗ್ಗೆ ಅವರು ಪಡೆಯಬಹುದಾದ ಲಾಭಗಳ ಬಗ್ಗೆ ಅವರಿಗೆ ಮಾಹಿತಿ ಇಲ್ಲದಿರುವುದರಿಂದ ಅವರು ಅವಕಾಶ ವಂಚಿತರಾಗವಹುದು.

ಯುವಕರಿಗಾಗಿ ಸಹಕಾರ ಕ್ಷೇತ್ರದ ವಿವಿಧ ಚಟುವಟಿಕೆಗಳ, ವಿವಿಧ ಆಯಾಮಗಳ ಸಾಧನೆಗಳ ಶಕ್ತಿ ಸಾಮರ್ಥ್ಯಗಳ ಅವಕಾಶಗಳ ದೌರ್ಬಲ್ಯಗಳ ಸವಾಲುಗಳ ಬಗ್ಗೆ ಜ್ಞಾನವನ್ನು ನೀಡುವ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕಳೆದ ಹಲವು ವರ್ಷಗಳಿಂದ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಬಂದಿದೆ. ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ 205 ವಿದ್ಯಾರ್ಥಿಗಳು ಹಾಗು ವಿವಿಧ ಸಹಕಾರಿ ಸಂಸ್ಥೆಗಳಿಂದ 32 ಯುವಕರು ಸಕ್ರೀಯವಾಗಿ ಭಾಗವಹಿಸಿ ಸಹಕಾರ ಕ್ಷೇತ್ರದ ವಿವಿಧ ವಿಭಾಗಗಳ ಮಾಹಿತಿ ಪಡೆದುಕೊಳ್ಳುವುದರ ಜೊತೆಗೆ ವಿಶ್ವವಿದ್ಯಾಲಯದಲ್ಲಿ ಸ್ಟುಡೆಂಟ್ಸ್ ಕೋ–ಆಪರೇಟಿವ್ ಸೊಸಾಯಿಟಿ ಹಾಗೂ ಶಿಕ್ಷಕರಿಗಾಗಿ ಕ್ರೆಡಿಟ್ ಸಹಕಾರ ಸಂಘಗಳನ್ನು ಪ್ರಾರಂಭಿಸಲು ತೀರ್ಮಾನಿಸಿರುವುದು ಶ್ಲಾಘನೀಯ ಹಾಗೂ ಸ್ವಾಗತಾರ್ಹ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿಯವರು, ನಾಗರಾಜ ದೇಶಪಾಂಡೆ, ಧಾರವಾಡ ಗದಗ ಹಾಗು ಉತ್ತರ ಕನ್ನಡ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಶಂಕರ ಮುಗದರವರು, ಡಾ. ಎಸ್.ಎ. ಸಿದ್ದಾಂತಿಯವರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಅಭಯ ಗಸ್ತಿ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ರಘುನಂದನ, ತರಬೇತಿ ಅಧಿಕಾರಿ ಶ್ರೀ ವಿ.ಜೆ. ಕಾರಕೂನರವರು ಭಾಗವಹಿಸಿದ್ದರು. ಶ್ರೀಮತಿ ಎನ್ ಸವಿತಾ ಕಾರ್ಯಕ್ರಮ ನಿರೂಪಣೆ ಮಾಡಿದರು ಶ್ರೀ ರಘುನಂದನ್‌ರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು.

## ಉಪನ್ಯಾಸ ಕಾರ್ಯಕ್ರಮ

### ಯುವ ಶಕ್ತಿಯ ಸದುಪಯೋಗಕ್ಕೆ ಸಹಕಾರ ಕ್ಷೇತ್ರ ಬದ್ಧವಾಗಿದೆ. - ಶ್ರೀ ಎಸ್. ಎ ಸಿದ್ದಾಂತಿ



ಯುವಕರು ಹಾಗೂ ಸಹಕಾರ ಸಂವಾದ ಕಾರ್ಯಕ್ರಮದ ವಿಷಯ ಪ್ರಸ್ತಾವನೆಯನ್ನು ಮಾಡಿದ ಡಾ. ಎಸ್.ಎ. ಸಿದ್ದಾಂತಿ ಯವರು ಸಹಕಾರ ಕ್ಷೇತ್ರದ ವಿರಾಟ ಸ್ವರೂಪವನ್ನು ವಿವರಿಸುತ್ತ ಯುವಕರಿಗೆ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಮಾಹಿತಿ ದೊರೆತಾಗ ಅವರು ಈ ಕ್ಷೇತ್ರದತ್ತ ಆಕರ್ಷಿತರಾಗಲು ಸಾಧ್ಯವಾಗುತ್ತದೆ. ಕಾರ್ಪೋರೇಟ್ ಕಂಪನಿಗಳ ಚಟುವಟಿಕೆಗಳ ಬಗ್ಗೆ ಮಾಹಿತಿ ಹೊಂದುವುದರ ಜೊತೆಗೆ ಸಹಕಾರಿ ಕ್ಷೇತ್ರದ ಬಗ್ಗೆಯೂ ಸಹ ಮಾಹಿತಿಯನ್ನು ಹೊಂದಿ ಜೀವನ ರೂಪಿಸಿಕೊಳ್ಳಲು ಸಾಧ್ಯ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ ವಿಶ್ವವಿದ್ಯಾಲಯದ ಕುಲ ಸಚಿವರಾದ ಶ್ರೀ ಬಸವರಾಜ ಲಕ್ಕಣ್ಣನವರು ಅಧ್ಯಕ್ಷತೆ ವಹಿಸಿ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಮಾಹಿತಿ ಯುವಕರಿಗೆ ಅತ್ಯಂತ ಮಹತ್ವದ್ದು. ಈ ಕಾರ್ಯಕ್ರಮ ಅದಕ್ಕೆ ಪೂರಕವಾಗಿದೆ ಎಂದು ತಿಳಿಸಿದರು.

## ಸಂವಾದ ಕಾರ್ಯಕ್ರಮ




ಸಂವಾದ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಧಾರವಾಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಮುನಿಯಪ್ಪ ಕೋಲೂರ ರವರು, ಧಾರವಾಡ, ಗದಗ ಉತ್ತರ ಕನ್ನಡ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಲೋಹಿತೇಶ್ವರರವರು, ಪತ್ರಕರ್ತ ಶ್ರೀ ರಾಜು, ಹೆಬ್ಬಾರ ಆಡಿಟ್ ಇಲಾಖೆಯ ಪರವಾಗಿ ಹಿರಿಯ ಲೆಕ್ಕಪರಿಶೋಧಕ ಶ್ರೀ ಚಡಚಿಹಾಳ, ಸಂಯುಕ್ತ ಸಹಕಾರಿಯ ಪರವಾಗಿ ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನ, ವಿಶ್ವವಿದ್ಯಾಲಯದ ಪರವಾಗಿ ಎಮ್.ಕಾಮ್ ವಿಭಾಗದ ಕೋ–ಆರ್ಡಿನೇಟರ್ ಡಾ. ಅಭಯಕುಮಾರ ಗಸ್ತಿ ಯವರು ಭಾಗವಹಿಸಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿದರು.

ಸಂಯುಕ್ತ ಸಹಕಾರಿಯ ಉಪವ್ಯವಸ್ಥಾಪಕರಾದ ಶ್ರೀ ರಘುನಂದನ ನವರು ಸಂವಾದ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಸ್.ಎ.ಸಿದ್ದಾಂತಿಯವರು ವಹಿಸಿದ್ದರು.

# ಸಹಕಾರಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಬಳಕೆ ಹಾಗೂ ವ್ಯವಹಾರ ಅಭಿವೃದ್ಧಿ ಯೋಜನೆ ಕಾರ್ಯಗಾರ



**ಬೆಂಗಳೂರು :** ದಿನಾಂಕ 27.02.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಬಳಕೆ ಹಾಗೂ ವ್ಯವಹಾರ ಅಭಿವೃದ್ಧಿ ಯೋಜನೆ ಕಾರ್ಯಗಾರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಎಸ್. ಗುಂಡೂರಾವ್, ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಪ್ರಾಸ್ತಾವಿಕ ನುಡಿಯನ್ನು ಶ್ರೀ ಶರಣಗೌಡ ಜಿ ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಮನೋಹರ್ ಮಸ್ಕಿ, ಮಾನ್ಯ ಸಂಸ್ಥಾಪಕ ಅಧ್ಯಕ್ಷರು ಸುಕೋ ಸಹಕಾರ ಬ್ಯಾಂಕ್ ಬಳ್ಳಾರಿ. ಹಾಗೂ ಶ್ರೀ ಎ.ಆರ್.ಪ್ರಸನ್ನಕುಮಾರ್ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರು ಕಾರ್ಯಕ್ರಮದ ವಿಷಯಗಳು ಅದರಲ್ಲಿ ಉಪಯೋಗವಾಗುವಂತಹ ಅನುಕೂಲಗಳನ್ನು ವಿಸ್ತಾರವಾಗಿ ಮಾಹಿತಿಗಳನ್ನು ನೀಡಿದರು. ತಂತ್ರಜ್ಞಾನದಲ್ಲಿನ ಉಪಯೋಗಗಳು ತಂತ್ರಜ್ಞಾನ ಇಂದಿನ ವ್ಯವಹಾರ ಮಾಡಲು ಆಗುವಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿಗಳು ತಂತ್ರಜ್ಞಾನ ಉಪಯೋಗಿಸಿಕೊಂಡು ಪಡೆದುಕೊಂಡು ಮಾಹಿತಿಯನ್ನು ಸಹಕಾರಿಗಳಲ್ಲಿ ಅಳವಡಿಸಿಕೊಳ್ಳಲು ಹೇಳಿದರು. ಇದರಿಂದ ಆಗುವ ಉಪಯೋಗಗಳು ಯಾವ ರೀತಿಯಲ್ಲಿ ಅನುಕೂಲವಾಗುತ್ತದೆ ಎಂದು ಹೇಳಿದರು. ಯು.ಪಿ.ಐ ಪೇಮೆಂಟ್ ಮುಖಾಂತರ ಹಣವನ್ನು ವರ್ಗಾವಣೆ ಮಾಡುವ ವಿಧಾನ ತಿಳಿಸಿದರು.

ಶ್ರೀ ಮನೋಹರ್ ಮಸ್ಕಿಯವರು ಮಾತನಾಡಿ ಜೆಮ್ ಪೋರ್ಟಲ್ ಸೋಲಾರ್ ಕ್ಲೀನಿಂಗ್ ವ್ಯವಹಾರಗಳ ತೆಗೆದುಕೊಳ್ಳುವಿಕೆ ಯು.ಪಿ.ಐ ಸೌಲಭ್ಯಗಳನ್ನು ಕುರಿತು ಸಹಕಾರಿಗಳ ಬೆಳವಣಿಗೆಗೆ ಇದು ಸೂಕ್ತವಾದ ವಿಷಯ ಮತ್ತು ಸಕಾಲವೆಂಬ ಮಾತನ್ನು ಹೇಳಿದರು.

ಶ್ರೀ ಗುರುನಾಥ್ ಜಾಂತಿಕರ್‌ರವರು ಮಾತನಾಡಿ ಸಂಯುಕ್ತ ಸಹಕಾರಿ ಪ್ರಾರಂಭದಿಂದ ಹೊಸ ವಿಷಯಗಳ ಪರಿಚಯವನ್ನು ಮಾಡಿದೆ. ಹೊಸತನ್ನು ಅಳವಡಿಸಿಕೊಂಡು ಸೂಕ್ತವಾದ ಸವಲತ್ತುಗಳನ್ನು ನೀಡಬೇಕು. ನುಡಿದಂತೆ ನಡೆಯಬೇಕು ತಂತ್ರಜ್ಞಾನವನ್ನು ಮೋಸ ಹೋಗುವ ಸಂಧರ್ಭವಿರುತ್ತದೆ ಎಲ್ಲರೂ ಜಾಗರೂಕರಾಗಬೇಕು ಎಂಬ ಸಲಹೆಗಳನ್ನು ನೀಡಿದರು.

ಶ್ರೀ ಗುಂಡೂರಾವ್‌ರವರು ಮಾತನಾಡಿ ಕ್ರೆಡಿಟ್ ಇನ್‌ಕಮ್ ಜೊತೆಗೆ ಬಗ್ಗೆ ಗಮನ ಹರಿಸುವುದು ತಂತ್ರಜ್ಞಾನ ಬಳಕೆಗೆ ಅಭಿವೃದ್ಧಿ ಆಗೋಣವೆಂದು ಸಲಹೆಗಳನ್ನು ನೀಡಿದರು.

ಶ್ರೀ ನಾರಾಯಣ ಹೆಗಡೆಯವರು ಸ್ವಾಗತವನ್ನು ಕೋರಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ರಘುನಂದನ್‌ರವರು ಮಾಡಿದರು ಶ್ರೀ ಸಂಜಯ್‌ಕೊರಟಕರ್‌ರವರು ವಂದನಾರ್ಪಣೆಯನ್ನು ಕೋರಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತ ಗಣ್ಯರು ಹಾಗೂ ಸಂಪನ್ಮೂಲ ವ್ಯಕ್ತಿಗಳು ಶ್ರೀ ಸಿ.ಸೋಮಸುಂದರಂ ಮಾನ್ಯ ಸಿಪಿಆರ್‌ಐ ವಿಜ್ಞಾನಿ ನಿರ್ದೇಶಕರು(ನಿ) ಸನ್‌ಎನರ್ಜಿ ಸೋಲಾರ್ ಇಂಡಸ್ಟ್ರೀಸ್ ಮತ್ತು ಪವರ್ ಪ್ರಾಜೆಕ್ಟ್, ಬೆಂಗಳೂರು ಇವರು ಸೌರ ಶಕ್ತಿ ಕ್ಷೇತ್ರದಲ್ಲಿನ ಅವಕಾಶಗಳು ಕುರಿತು ಶ್ರೀ ಸುಮಿತ ಪಡ್ನಿಸರವರು ಸಿಇಓ,(ಸಿಟಿಓ) ಸರ್ವತ್ರ ಟೆಕ್ನಾಲಜಿ ಪುಣೆ ಇವರು ಯುಪಿಐ ಪೇಮೆಂಟ್ ಗೇಟ್‌ವೇ ಬಳಕೆಯ ಅವಕಾಶಗಳು ಕು–ರಿತು. ಶ್ರೀ ಎ ಪಿ ರಾಜು ಪಿಳ್ಳೆ ಮುಖ್ಯಕಾರ್ಯನಿರ್ವಾಹಕರು ಕೆಮಿಕಲ್ ಇಂಜಿನಿಯರ್, ಲಿಯೋಕೆಮ್ ಇಂಡಿಯಾ ಇವರು ಶುಚಿ ಮತ್ತು ನೈರ್ಮಲ್ಯ ಉತ್ಪನ್ನಗಳ ಪ್ರಾಂಚೈಸಿ ಹಾಗೂ ಮಾರಾಟ ವ್ಯವಸ್ಥೆ ಕುರಿತು. ಶ್ರೀ ವಿಜಯಕುಮಾರ್ ಬಿ. ಮಾನ್ಯ ಎಲೆಕ್ಟ್ರಿಕಲ್ ಇಂಜಿನಿಯರ್ ಮ್ಯಾನೇ–ಜಿಂಗ್ ಪಾರ್ಟ್ನರ್, ಮಾಸ್ಟರ್‌ಆಫ್ ದಿ ಒಬ್ವಿಯಸ್ ಎಲ್‌ಎಲ್ ಪಿ, ಶಿವಮೊಗ್ಗ ವಿದ್ಯುತ್ ಚಾಲಿತ ವಾಹನಗಳ ರಿಚಾರ್ಜ್ ಸ್ಟೇಷನ್ ಪ್ರಾರಂಭಿಸಲು ಇರುವ ಅವಕಾಶಗಳು, ಶ್ರೀ ಗೌತಮ ಹೆಚ್.ಎಸ್. ಮುಖ್ಯ ತರಬೇತುದಾರರು ಕರ್ನಾಟಕ ಮತ್ತು ಗೋವಾ ಗೌರ್ವನಮೆಂಟ್ ಇ–ಮಾರ್ಕೆಟ್ ಪ್ಲೇಸ್ Gem Portal ಮೂಲಕ ಖರೀದಿ ಹಾಗೂ ಮಾರಾಟ ಅವಕಾಶಗಳು ಈ ಕುರಿತು. ಶ್ರೀ ಎಂ ಎಸ್. ಚೈತ್ರ ಅಸೋಸಿಯಟ್ ಪ್ರೊಫೆಸರ್, ಚಾಣಕ್ಯ ವಿಶ್ವವಿದ್ಯಾಲಯ ಬೆಂಗಳೂರು ಸ್ವಗ್ರಾಮ ಯೋಜನೆ ಪರಿಚಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಸಹಕಾರಿಗಳಿಂದ ಒಟ್ಟು 65 ಪ್ರತಿನಿಧಿಗಳು ಭಾಗವಹಿಸಿದ್ದರು ಕಾರ್ಯಕ್ರಮವು ಅರ್ಥ ಪೂರ್ಣವಾಗಿ ಮೂಡಿ ಬಂದಿದೆ ಎಂಬ ಅಭಿಪ್ರಾಯವನ್ನು ಪ್ರತಿನಿಧಿಗಳು ವ್ಯಕ್ತಪಡಿಸಿದರು.

# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಮಾಹಿತಿಗಳು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಇವರುಗಳು ಜಂಟಿಯಾಗಿ ಪ್ರಾರಂಭಿಸಿರುವ ಒಂದು ವರ್ಷದ "ಸಹಕಾರಿ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್" ಡಿಪ್ಲೋಮಾ ಕೋರ್ಸಿನ ವಿವರಗಳು ಈ ಕೆಳಕಂಡಂತೆ ಇರುತ್ತವೆ.

ದಿನಾಂಕ 10–2–2023ರಂದು ಕಾರ್ಯಕ್ರಮದ ಉದ್ಘಾಟನೆಯನ್ನು ಚಾಣಕ್ಯ ವಿಶ್ವವಿದ್ಯಾಲಯದ ಕುಲಪತಿ **ಶ್ರೀ ಯಶವಂತ ಡೋಂಗ್ರೆಯವರು** ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ **ಶ್ರೀ ವಿಷ್ಣುಕಾಂತ ಚಟಪಲ್ಲಿಯವರು** ಅಧ್ಯಕ್ಷತೆ ವಹಿಸಿದ್ದರು. ಸಂಯುಕ್ತ ಸಹಕಾರಿಯ **ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು** ಉಪಸ್ಥಿತರಿದ್ದರು.

## ಕೋರ್ಸ್‌ನ ವಿವರ ಹಾಗೂ ಅಭ್ಯರ್ಥಿಗಳಿಗೆ ಸೂಚನೆಗಳು :

**ಈ ಕೋರ್ಸಿಗೆ ಒಟ್ಟು 8 ವಿಷಯಗಳಿರುತ್ತವೆ. ಪ್ರತಿ ವಿಷಯಕ್ಕೂ 100 ಅಂಕಗಳಿರುತ್ತವೆ. ಪ್ರತಿ ವಿಷಯಕ್ಕೆ 40 ಅಂಕಗಳು ಅಂತರಿಕ ಅಸೆಸ್‌ಮೆಂಟ್ 60 ಅಂಕಗಳಿಗೆ ಪರೀಕ್ಷೆ ಇರುತ್ತದೆ.**

- 6 ವಿಷಯಗಳ ಅಧ್ಯಯನ ಸಾಹಿತ್ಯಗಳನ್ನು ಸಂಯುಕ್ತ ಸಹಕಾರಿಯ ವತಿಯಿಂದ ಎಲ್ಲಾ ಅಭ್ಯರ್ಥಿಗಳಿಗೂ ಅಂಚೆ ಮೂಲಕ ಹಾಗೂ ಕೊರಿಯರ್ ಮೂಲಕ ಕಳುಹಿಸಿದೆ.
- 2 ವಿಷಯಗಳು ಸಾಂಸ್ಥಿಕ ಅಧ್ಯಯನ ಹಾಗೂ ಪ್ರಾಜೆಕ್ಟ ವರದಿ ಸಿದ್ಧಪಡಿಸುವ ಬಗ್ಗೆ ವಿಶ್ವವಿದ್ಯಾಲಯದ ವತಿಯಿಂದ ವಿವರಣೆ ಕಳುಹಿಸಲಾಗುತ್ತದೆ.
- 638 ಅಭ್ಯರ್ಥಿಗಳು ನೊಂದಾಯಿಸಿಕೊಂಡಿದ್ದಾರೆ. 614 ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರು. 24 ಯುವಕರು ನೊಂದಾಯಿತರಾಗಿದ್ದಾರೆ.

**1ನೇ ಸೆಮಿಸ್ಟರ್‌ನಲ್ಲಿ 4 ವಿಷಯಗಳು :**

**ವಿಷಯಗಳು :** 1. ಸಹಕಾರಿ ಪರಿಸರ 2. ಸಹಕಾರಿ ಪತ್ತು 3. ಸಹಕಾರಿ ಕಾನೂನುಗಳು 4. ಸಾಂಸ್ಥಿಕ ಅಧ್ಯಯನ

- ದಿನಾಂಕ 11–2–2023 ರಿಂದ ಆನ್‌ಲೈನ್ ಕ್ಲಾಸ್‌ಗಳು ಪ್ರಾರಂಭವಾಗಿವೆ.
- ಪ್ರತಿನಿಧಿಗಳ ಹಾಜರಾತಿಯನ್ನು ಆನ್‌ಲೈನ್ ಮೂಲಕವೇ ಸಂಗ್ರಹಿಸಲಾಗುವುದು. ಆನ್‌ಲೈನ್ ತರಗತಿಗೆ ಪ್ರತಿನಿಧಿಗಳ ಹಾಜರಾತಿ ಅವಶ್ಯಕ.
- ಆಂತರಿಕ ಅಂಕಗಳನ್ನು ನೀಡುವಾಗ ಪ್ರತಿನಿಧಿಗಳ ಆನ್‌ಲೈನ್ ತರಗತಿಗಳಿಗೆ ಹಾಜರಾತಿಯನ್ನು ಮತ್ತು 1ನೇ ಹಾಗೂ 2ನೇ ಟೆಸ್ಟ್‌ಗಳ ಹಾಜರಾತಿಯನ್ನು ಪರಿಗಣಿಸಲಾಗುತ್ತದೆ.
- ಪ್ರತಿ ಶನಿವಾರ ಹಾಗೂ ಭಾನುವಾರ ಆನ್‌ಲೈನ್ ತರಗತಿಗಳು ನಡೆಯುತ್ತವೆ.
- ತರಗತಿಗಳ ಸಮಯ ಮಧ್ಯಾಹ್ನ 3–00 ರಿಂದ 4–00 ಹಾಗೂ 4–00 ರಿಂದ 5–00 ವರೆಗೆ 2 ದಿನಗಳು ಸೇರಿ ಒಟ್ಟಾರೆ 4 ತರಗತಿಗಳು.

**ಕಂಟ್ಯಾಕ್ಟ್ ಕ್ಲಾಸ್‌ಗಳು :** ಮೇ ತಿಂಗಳು 2ನೇ ಶನಿವಾರ ಹಾಗೂ ಭಾನುವಾರ & 4ನೇ ಶನಿವಾರ ಹಾಗೂ ಭಾನುವಾರ ಕಂಟ್ಯಾಕ್ಟ್ ಕ್ಲಾಸ್‌ಗಳು ನಡೆಯುತ್ತವೆ. ಕಂಟ್ಯಾಕ್ಟ್ ಕ್ಲಾಸ್‌ಗಳು ನಡೆಯುವ 11 ಕೇಂದ್ರಗಳು.

| ವಿಭಾಗಗಳು | ಕೇಂದ್ರಗಳು |
|---|---|
| ಬೆಂಗಳೂರು ವಿಭಾಗ | ಬೆಂಗಳೂರು, ಶಿವಮೊಗ್ಗ, |
| ಮೈಸೂರು ವಿಭಾಗ | ಉಡುಪಿ, |
| ಬೆಳಗಾವಿ ವಿಭಾಗ | ಹುಬ್ಬಳ್ಳಿ, ಬಾಗಲಕೋಟೆ, ಜಮಖಂಡಿ. ಬೆಲ್ಲದ ಬಾಗೇವಾಡಿ, ಶಿರಸಿ, |
| ಕಲಬುರಗಿ ವಿಭಾಗ | ಹೊಸಪೇಟೆ, ಸಿಂಧನೂರ, ವಿಜಯನಗರ |

ತರಗತಿಗಳಲ್ಲಿ ಭಾಗವಹಿಸುವುದು ನಿಮ್ಮ ಹಾಜರಾತಿಯನ್ನು ದೃಢಪಡಿಸುತ್ತದೆ. ಮತ್ತು ಇಂಟರನಲ್ ಅಸ್ಸೆಸ್‌ಮೆಂಟ್ ಪ್ರತಿ ವಿಷಯಕ್ಕೆ 40 ಅಂಕಗಳಿರುತ್ತವೆ. ಜೂನ್ ತಿಂಗಳಿನಲ್ಲಿ 4 ವಿಷಯಗಳ ಪರೀಕ್ಷೆ ನಂತರದಲ್ಲಿ 1ನೇ ಸೆಮಿಸ್ಟರ್‌ನ ಫಲಿತಾಂಶ.

**ಪ್ರಥಮ ಟೆಸ್ಟ್** : 1-4-2023 ಅಸೈನ್‌ಮೆಂಟ್ ಮೂಲಕ ನಡೆಸಲಾಗುವುದು. ಅಸೈನ್‌ಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು.

**ದ್ವಿತೀಯ ಟೆಸ್ಟ್** : 13-5-2023

**ಪ್ರಥಮ ಟೆಸ್ಟಿನ ಅಂತಿಮ ಪರೀಕ್ಷೆಗಳು** : 10-6-2023 ಶನಿವಾರ 11-6-2023 ಭಾನುವಾರ, ಪ್ರತಿದಿನ 2 ಪರೀಕ್ಷೆಗಳು.

**2ನೇ ಸೆಮಿಸ್ಟರ್ ಜುಲೈನಲ್ಲಿ ಪ್ರಾರಂಭ :**

**ವಿಷಯಗಳು** : 1. ಬೇಸಿಕ್ಸ್ ಆಫ್ ಬ್ಯಾಂಕಿಂಗ್ 2. ಸಹಕಾರಿ ಲೆಕ್ಕ ಪತ್ರಗಳ ನಿರ್ವಹಣೆ ಮತ್ತು ಲೆಕ್ಕ ಪರಿಶೋಧನೆ 3. ಮಾಹಿತಿ ಮತ್ತು ತಂತ್ರಜ್ಞಾನ 4. ಪ್ರಾಜೆಕ್ಟ ರಿಪೋರ್ಟ

- ಪ್ರತಿ ಶನಿವಾರ ಹಾಗೂ ಭಾನುವಾರ ಆನ್‌ಲೈನ್ ಕ್ಲಾಸುಗಳು ನಡೆಯುತ್ತವೆ.
- ಸೆಪ್ಟೆಂಬರ್‌ನಲ್ಲಿ ಕಂಟ್ಯಾಕ್ಟ್ ಕ್ಲಾಸ್‌ಗಳು 2ನೇ ಶನಿವಾರ ಹಾಗೂ ಭಾನುವಾರ ಮತ್ತು 4ನೇ ಶನಿವಾರ ಹಾಗೂ ಭಾನುವಾರ ನಡೆಯುತ್ತವೆ.

**ಅಕ್ಟೋಬರ್‌ನಲ್ಲಿ ಪರೀಕ್ಷೆ :**

- ಪ್ರವೇಶ ಪತ್ರವನ್ನು ವಿಶ್ವವಿದ್ಯಾಲಯದಿಂದ ನೇರವಾಗಿ ಅಭ್ಯರ್ಥಿಗಳಿಗೆ ಪರೀಕ್ಷೆಯ ಮೊದಲ ವಾರದಲ್ಲಿ ಕಳುಹಿಸಲಾಗುತ್ತದೆ.
- ಅಕ್ಟೋಬರ್‌ನಲ್ಲಿ ಪರೀಕ್ಷೆ ಹಾಗೂ 2ನೇ ಸೆಮಿಸ್ಟರ್ ಫಲಿತಾಂಶ. ನಂತರದಲ್ಲಿ ಅಂಕ ಪಟ್ಟಿಗಳು ಹಾಗು ಸರ್ಟಿಫಿಕೇಟ್‌ಗಳ ವಿತರಣೆ

**ವಿಶೇಷ ಸೂಚನೆ** : ಇದುವರೆಗೆ ನಡೆದ ಆನ್‌ಲೈನ್ ಕೋರ್ಸ್‌ನ ತರಗತಿಗಳಿಗೆ ಅಭ್ಯರ್ಥಿಗಳ ಹಾಜರಾತಿ ಸಮಾಧಾನಕರವಾಗಿದೆ. ಇದು ಇನ್ನೂ ಉತ್ತಮವಾಗುವಂತೆ ಅಭ್ಯರ್ಥಿಗಳು ಪ್ರಯತ್ನಿಸಬೇಕು.

## ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ

## ಸಂಯುಕ್ತ ಸಹಕಾರಿಯ ಮಹಿಳಾ ಸಿಬ್ಬಂದಿಗಳಿಗೆ ವಿವಿಧ ಸ್ಪರ್ಧೆಗಳು

## ದಿನಾಂಕ 01.03.2023 ಹಾಗೂ 02.03.2023

### ಮಹಿಳೆಗೆ ವೇದಕಾಲದಿಂದಲೂ ಸಮಾನತೆ ಇದೆ. ಆದರೆ ಅವಕಾಶಗಳ ಪೂರ್ಣ ಪ್ರಮಾಣದ ಬಳಕೆ ಆಗುತ್ತಿಲ್ಲ

### - ಶ್ರೀ ಪ್ರಸಾದ ರೆಡ್ಡಿ



ಉದ್ಘಾಟನೆ



ರಂಗೋಲಿ ಸ್ಪರ್ಧೆ

**ಬೆಂಗಳೂರು** : ದಿನಾಂಕ 01.03.2023 ರಂದು ಸಂಯುಕ್ತ ಸಹಕಾರಿಯ ಮಹಿಳಾ ಸಿಬ್ಬಂದಿಯವರಿಗಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳನ್ನು ಉದ್ಘಾಟನೆ ಮಾಡಿ ಮಾತನಾಡಿದ ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಪ್ರಸಾದ ರೆಡ್ಡಿಯವರು ಮಹಿಳೆಗೆ ಅನಾದಿಕಾಲದಿಂದಲೂ ಸ್ವಾತಂತ್ರ ಇದೆ. ಸಮಾಜದಲ್ಲಿ ಕುಟುಂಬದಲ್ಲಿ ಸಮಾನತೆ ಇದೆ. ಮಹಿಳೆ ಇಂದಿನ ಪೈಪೋಟಿ ಯುಗದಲ್ಲೂ ಸಹ ಜೀವನದ ಎಲ್ಲಾ ಆಯಾಮಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿರುವುದನ್ನು ನಾವು ನೋಡುತ್ತಲಿದ್ದೇವೆ. ಆದರೆ ಇದು ಸಮಾಜದ ಮೇಲ್ಪದರಿನಲ್ಲಿ ಮಾತ್ರ ಇರುವುದು. ಗ್ರಾಮೀಣ ಪ್ರದೇಶಗಳಿಗೂ ವಿಸ್ತೃತವಾಗಿ ಹರಡಬೇಕು. ಈ ರೀತಿಯ ಪ್ರೇರಣಾತ್ಮಕ ಸ್ಪರ್ಧೆಗಳು ಮಹಿಳೆಯರನ್ನು ಹೆಚ್ಚು ಕ್ರೀಯಾಶೀಲರನ್ನಾಗಿಸುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣವನ್ನು ಶ್ರೀಮತಿ ಶೋಭಾ ಆರ್. ಇವರು ನಡೆಸಿಕೊಟ್ಟರು. ಸ್ವಾಗತ ಶ್ರೀಮತಿ ರೇಣುಕಾ ರವರು, ವಂದನಾರ್ಪಣೆಯನ್ನು ಶ್ರೀಮತಿ ವಿಜಯಶ್ರೀ ಯವರು, ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಸವಿತಾರವರು ನಡೆಸಿಕೊಟ್ಟರು.

# ಪ್ರವೇಶ ತರಬೇತಿ ಕಾರ್ಯಕ್ರಮ



**ಕಲಬುರಗಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ: 03 & 04 ಫೆಬ್ರವರಿ 2023 ದಂದು ಕಲಬುರಗಿ, ಬೀದರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 2019 ರಿಂದ 2022 ಸಾಲಿನವರೆಗೆ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳಿಗೆ 2 ದಿನದ ವಿಶೇಷ ಪ್ರವೇಶ ತರಬೇತಿಯನ್ನು 2 ದಿನದ ವಿಶೇಷ ಪ್ರವೇಶ ತರಬೇತಿಯನ್ನು ಮೈರಾಡ ಶಿಡಾರ, ಪ್ರಕೃತಿ ಜ್ಞಾನ ತರಬೇತಿ ಕೇಂದ್ರ, ರಾಜನಾಳ ರಸ್ತೆ, ಕಮಲಾಪುರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ನೆರವೇರಿಸಿದರು. ಮೊದಲನೇಯದಾಗಿ ಶ್ರೀ ಮಲ್ಲಿಕಾರ್ಜುನ ಮಹಾಂತಗೋಳ ಮಾನ್ಯ ಲೆಕ್ಕಪರಿಶೋಧಕರು ಇವರು "ಸಹಕಾರಿಗಳು ನಿರ್ವಹಿಸಬೇಕಾದ ಲೆಕ್ಕಪತ್ರಗಳು ಮತ್ತು ಸಹಕಾರಿಗಳಿಗೆ ಅನ್ವಯಿಸುವ ಇತರೇ ಕಾಯ್ದೆಗಳು ಮೊದಲನೆಯ ಅವಧಿಯಲ್ಲಿ ಉಪನ್ಯಾಸ ನೀಡಿದರು. ನಂತರ ಮದ್ಯಾಹ್ನದ ಅವಧಿಯಲ್ಲಿ ಶ್ರೀ ಟಿ ಗುರುಬಸಪ್ಪ ಮಾನ್ಯ ಪ್ರಾಧ್ಯಾಪಕರು ಸರಕಾರಿ ಮಹಾವಿದ್ಯಾಲಯ ಕಲಬುರಗಿ ಇವರು ಸಮಯ ಮತ್ತು ಒತ್ತಡ ನಿರ್ವಹಣೆಯ ಬಗ್ಗೆ ಉಪನ್ಯಾಸ ನೀಡಿದರು. ದಿನಾಂಕ 04.02.2023 ರಂದು ಶ್ರೀ ಸೂರ್ಯಕಾಂತ ರ‍್ಯಾಕಲೆ ಇವರು ಗುಣಮಟ್ಟ ಸಾಲ ವಿತರಣೆಯ ಬಗ್ಗೆ, ನಂತರ ಶ್ರೀ ರಾಜಶೇಖರ ಹೆಚ್ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಸಹಕಾರಿಗಳು ಜರುಗಿಸಬೇಕಾದ ಸಭೆಗಳ ಕುರಿತು ಶ್ರೀ ಓಂಕಾರ ರವರು ಸಹಕಾರಿಗಳು ನಿರ್ವಹಿಸಬೇಕಾದ ಶಾಸನಾತ್ಮಕ ಕಾರ್ಯಗಳ ಕುರಿತು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ 3 ಜಿಲ್ಲೆಗಳಿಂದ 45 ಪ್ರತಿನಿಧಿಗಳು ಭಾಗವಹಿಸಿದ್ದರು.



**ಹಾಸನ :** ದಿನಾಂಕ 24.02.2023ರಂದು ಶ್ರವಣಬೆಳಗೊಳದ ಪಂಪಾ ಸಭಾಂಗಣದಲ್ಲಿ ನಡೆದ ಹಾಸನ ಜಿಲ್ಲೆ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು & ಮುಖ್ಯಕಾರ್ಯನಿರ್ವಹಕರಿಗಾಗಿ 2 ದಿನಗಳ "ಪ್ರವೇಶ ತರಬೇತಿ" ಉದ್ಘಾಟನೆಯನ್ನು ಡಾ. ಯುವರಾಜ್ ಬಿ.ಆರ್, ವೈದ್ಯಾಧಿಕಾ–ರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಶ್ರವಣಬೆಳಗೊಳ ಇವರು ನೆರವೇ–ರಿಸಿದರು. ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ ಎಸ್.ಕೆ, ಮಾನ್ಯ ಪ್ರಾಂತೀಯ ನಿರ್ದೇಶಕರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ .ಜಿ ಭಟ್, ಮಾನ್ಯ ಪ್ರಾಂತೀಯ ನಿರ್ದೇಶಕರು, ಶ್ರೀ ಯೋಗಣ್ಣ ಜಿ.ಎನ್, ಮಾನ್ಯ ಅಧ್ಯಕ್ಷರು, ಶ್ರೀ ಮಂಜುನಾಥಸ್ವಾಮಿ ಸೌಹಾರ್ದ ಸಹಕಾರಿ ನಿ., ಉಪಸ್ಥಿತರಿದ್ದರು. ಸ್ವಾಗತ – ಪರಿಚಯ & ಪ್ರಾಸ್ತಾವಿಕ ಶ್ರೀ ಶಿವಕುಮಾರ ಬಿರಾದಾರ, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು, ಪ್ರಾರ್ಥನೆ– ಶ್ರೀಮತಿ ಸುಜಾತ ರವರು, ವಂದನಾರ್ಪಣೆ – ಶ್ರೀ ಮಧುಸೂದನ್, ಅಧ್ಯಕ್ಷರು, ಬಿ.ಜಿ. ಎಸ್ ಸೌಹಾರ್ದ ಸಹಕಾರಿ ನಿ., ಇವರು ನಿರೂಪಣೆ ಶ್ರೀ ಎಂ. ಚಂದ್ರಶೇಖರಯ್ಯ, ಸೌಹಾರ್ದ ಜಿಲ್ಲಾ ಸಂಯೋಜಕರು ಮಾಡಿದರು.

1ನೇ ಅವಧಿ ವಿಷಯ – "ಆಡಳಿತ ಮಂಡಳಿ ಕಾರ್ಯಚಟುವಟಿಕೆಗಳು" ಸಂಪನ್ಮೂಲ ವ್ಯಕ್ತಿಗಳು – ಶ್ರೀ ಮಂಜುನಾಥ ಎಸ್.ಕೆ ರವರು, ಮಾನ್ಯ ಪ್ರಾಂತೀಯ ನಿರ್ದೇಶಕರು ನಡೆಸಿಕೊಟ್ಟರು. 2ನೇ ಅವಧಿ ವಿಷಯ:– " ಸೌಹಾರ್ದ ಸಹಕಾರಿ ಕಾಯ್ದೆ ಆಶಯ, ಮುಖ್ಯಾಂಶಗಳು ಮತ್ತು ಸಂಯುಕ್ತ ಸಹಕಾರಿ ಪ್ರಕಾರ್ಯಗಳು" ಸಂಪನ್ಮೂಲ ವ್ಯಕ್ತಿಗಳು– ಶ್ರೀ ಶಿವಕುಮಾರ ಬಿರಾದಾರ ರವರು, ಪ್ರಾಂತೀಯ ವ್ಯವಸ್ಥಾಪಕರು ನಡೆಸಿಕೊಟ್ಟರು. 3ನೇ ಅವಧಿ ವಿಷಯ:– " ಸಂವಹನ ಕಲೆ & ಸಹಕಾರಿಗಳಲ್ಲಿ ಸಾಮಾಜಿಕ ಕಳಕಳಿಯ ಕಾರ್ಯಗಳು " ಸಂಪನ್ಮೂಲ ವ್ಯಕ್ತಿಗಳು– ಶ್ರೀ ಕುಮಾರ್ ರವರು, ಹಾಸನ ಇವರು ನಡೆಸಿಕೊಟ್ಟರು. 4ನೇ ಅವಧಿ ವಿಷಯ:– "ಮಾನವ ಸಂಪನ್ಮೂಲ ಅಭಿವೃದ್ಧಿ & ಬಳಕೆ ಮತ್ತು ಬಡ್ಡಿಯೇತರ ಆದಾಯದ ಚಟುವಟಿಕೆಗಳು" ಸಂಪನ್ಮೂಲ ವ್ಯಕ್ತಿಗಳು– ಶ್ರೀ ರಮೇಶ್ ಕುಮಾರ್, ಮೈಸೂರು ಇವರು ನಡೆಸಿಕೊಟ್ಟರು. ಜಿಲ್ಲೆಯ 29 ಸಹಕಾರಿಗಳಿಂದ 88 ಪ್ರತಿನಿಧಿಗಳು ಮತ್ತು ಇತರೇ ಸೇರಿ ಒಟ್ಟು 95 ಜನರು ಹಾಜರಿದ್ದರು.

## ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮ



**ಶಿವಮೊಗ್ಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತದ ವತಿಯಿಂದ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ ಎರಡು ದಿನದ "ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು" ದಿನಾಂಕ 4 & 5 ಫೆಬ್ರವರಿ 2023 ರಂದು ಶ್ರೀ ಪದ್ಮಾಂಬ ಪ್ರೌಢಶಾಲೆಯ ಸಭಾಂಗಣ, ಶ್ರೀ ಕ್ಷೇತ್ರ ಹೊಂಬುಜ, ಹುಂಚ, ಹೊಸನಗರ ತಾಲೂಕಿನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ನೆರವೇರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕಿರಣ್, ಜೆ.ಪಿ. ನಿರ್ದೇಶಕರು, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ, ಶಿವಮೊಗ್ಗ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ್ ಕೋರಟಕರ್‌ರವರು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿ ಗಣ್ಯರನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ಲಿಲ್ಲಿ ಲೋಪೇಸ್ ರವರು & ಶ್ರೀಮತಿ ಜಯಲಕ್ಷ್ಮಿ ರವರ ಪ್ರಾರ್ಥನೆಯ ಮೂಲಕ ಪ್ರಾರಂಭಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ಸೌಹಾರ್ದ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್ ನೆರವೇರಿಸಿದರು. ಈ ಎರಡು ದಿನದ ತರಬೇತಿ ಶಿಬಿರದಲ್ಲಿ 46 ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ

ಮೈಸೂರು ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು/ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸಾಲ ಮಂಜೂರಾತಿ ವಿಧಾನಗಳು ಮತ್ತು ಸಾಲ ವಸೂಲಾತಿ ಕ್ರಮಗಳು ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 16.02.2023 ಗುರುವಾರ ಬೆಳಿಗ್ಗೆ 11:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು ಭಾಗವಹಿಸಿದ್ದರು. ಶ್ರೀ ನಾಗರಾಜು ಭಟ್, ಮಾನ್ಯ ಮುಖ್ಯಕಾರ್ಯನಿರ್ವಾಹಕರು, ಕದಂಬ ಸೌಹಾರ್ದ ಸಹಕಾರಿ ಸಂಘ ನಿ., ಶಿರಸಿ ಇವರು ಸಾಲ ಮಂಜೂರಾತಿ ವಿಧಾನಗಳು ಮತ್ತು ಸಾಲ ವಸೂಲಾತಿ ಕ್ರಮಗಳು ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 35 ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 25.02.2023 ರಂದು ಉಡುಪಿ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆನ್‌ಲೈನ್ ಮೂಲಕ ದಾವಾ ದಾಖಲಾತಿ ಪ್ರಕ್ರೀಯೆಗಳ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಗಾರದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್, ಕೆ, ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ ಜಿ ಭಟ್ ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ರವರು ನೇರವೇರಿಸಿದರು, ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀ ಶ್ರೀದರ್ ಮಟ್ಟೊಳ್ಳಿ ರವರು ಸೌಹಾರ್ದ ದಾವಾ ಪಂಚಾಯತ್ ನ್ಯಾಯಾಲದಲ್ಲಿ ದಾವೆಗಳನ್ನು ದಾಖಲಿಸುವ ವಿಧಾನಗಳ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ನೇರವೇರಿಸಿದರು. ಸದರಿ ಸಭೆಯಲ್ಲಿ ಮೂರು ಜಿಲ್ಲೆಗಳಿಂದ 270 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 27.02.2023 ರಂದು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆನ್‌ಲೈನ್ ಮೂಲಕ ಸಾಲ ಮಂಜೂರಾತಿ ಕಡತಗಳ ನಿರ್ವಹಣೆ ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಗಾರದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್, ಕೆ, ವಹಿಸಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ರವರು ನೇರವೇರಿಸಿದರು, ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಶ್ರೀಧರ ಸೋಮಯಾಜಿ, ಮುಖ್ಯಕಾರ್ಯನಿರ್ವಾಹಕರು, ಶ್ರೀ ಗುರುನರಸಿಂಹ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಸಾಲ ಮಂಜೂರಾತಿ ಕಡತಗಳ ನಿರ್ವಹಣೆ ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಚಂದ್ರಶೇಖರಯ್ಯ ನೇರವೇರಿಸಿದರು. ಸದರಿ ಸಭೆಯಲ್ಲಿ 16 ಸೌಹಾರ್ದ ಸಹಕಾರಿಗಳಿಂದ 34 ಜನ ಪ್ರತಿನಿಧಿಗಳು ಭಾಗವಹಿಸಿದ್ದರು

## ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾಗಿ ಶ್ರೀ ಹೆಚ್.ವಿ ರಾಜೀವ್ ಆಯ್ಕೆ - ಅಭಿನಂದನೆ



**ಮೈಸೂರು :** ದಿನಾಂಕ 01.03.2023 ಬುಧವಾರ ರಂದು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಹಾಗೂ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿರುವ ಶ್ರೀ ಹೆಚ್.ವಿ ರಾಜೀವ್ ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ಜಿ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ ಎ.ಆರ್, ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ, ಶ್ರೀಮತಿ ಭಾರತೀ ಜಿ. ಭಟ್ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭೇಟಿ ನೀಡಿ ಸನ್ಮಾನಿಸಿದರು.



**ಬೆಂಗಳೂರು :** ದಿನಾಂಕ 03.03.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಶಾಂತಿನಾಥ ಪಂಡಿತ್ ರವರು ಕೇಂದ್ರ ಕಚೇರಿಗೆ ಮೊದಲನೇ ಬಾರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪರವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ಅತೀ ಜರೂರು ಓಟಿಪಿ ಆಧಾರಿತ ಇ–ಸ್ಟಾಂಪಿಂಗ್ ಲಾಗಿನ್ ವ್ಯವಸ್ಥೆಯ ಕುರಿತು,

ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಇವರು ಓಟಿಪಿ ಆಧಾರಿತ ಇ–ಸ್ಟಾಂಪಿಂಗ್ ಲಾಗಿನ್ ವ್ಯವಸ್ಥೆಯನ್ನು ಜಾರಿ ಮಾಡುವವರಿದ್ದಾರೆ. ಈ ವ್ಯವಸ್ಥೆ ಜಾರಿಯಾದ ನಂತರ, ಇ–ಸ್ಟಾಂಪಿಂಗ್ ವಿಭಾಗದ ಸಿಬ್ಬಂದಿಗಳ ತಮ್ಮ ಮೊಬೈಲ್ ಸಂಖ್ಯೆಗೆ ಸ್ವೀಕರಿಸುವ ಓಟಿಪಿ ನಮೂದಿಸುವ ಮೂಲಕವೇ ಇ–ಸ್ಟಾಂಪ್ ವೆಬ್‌ಸೈಟ್‌ನಲ್ಲಿ ಲಾಗಿನ್ ಮಾಡಬೇಕಾಗುತ್ತದೆ. ಸದರಿ ವಿಷಯದ ಕುರಿತು ಸಹಕಾರಿಗಳ ಎಸಿಸಿಗಳಿಗೆ ದಿನಾಂಕ 02.02.2023ರ ನಂತರ 3 ಬಾರಿ ಇ–ಮೇಲ್ ಕಳುಹಿಸುವ ಮೂಲಕ ಮಾಹಿತಿ ಕೋರಲಾಗಿದೆ. ಕೆಲವು ಸಹಕಾರಿಗಳು ಮಾಹಿತಿ ನೀಡಿದ್ದು, ಇನ್ನು ಬಹಳಷ್ಟು ಸಹಕಾರಿಗಳು ಮಾಹಿತಿ ನೀಡಬೇಕಿದೆ. ಓಟಿಪಿ ಆಧಾರಿತ ಇ–ಸ್ಟಾಂಪಿಂಗ್ ಲಾಗಿನ್ ವ್ಯವಸ್ಥೆ ಜಾರಿಯಾದ ನಂತರ, ಮಾಹಿತಿಗಳನ್ನು ನೀಡದ ಸಹಕಾರಿಗಳು ಇ–ಸ್ಟಾಂಪ್ ವಿತರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇ–ಸ್ಟಾಂಪಿಂಗ್ ವ್ಯವಸ್ಥೆ ಹೊಂದಿರುವ ಎಲ್ಲ ಸಹಹಕಾರಿಗಳು ತಪ್ಪದೇ ಸದರಿ ಮಾಹಿತಿಯನ್ನು ನೀಡಲು ಕೋರಿದೆ. ಸದರಿ ಮಾಹಿತಿಯನ್ನು ದಿನಾಂಕ 20.03.2023 ರೊಳಗೆ vijayashrip@souharda.coop ಈ ಇಮೇಲ್ ಐಡಿ ಗೆ ಕಳುಹಿಸಲು ಕೋರಿದೆ

## ನವನಿಧಿ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸದಸ್ಯರೊಂದಿಗೆ ಸಭೆ

ದಿನಾಂಕ 02.02.2023 ರಂದು ತುಮಕೂರು ನವನಿಧಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ,. ತುಮಕೂರು ಸಹಕಾರಿಯ ಆಡಳಿತ ಮಂಡಳಿ ಸದಸ್ಯರೊಂದಿಗೆ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ಇವರು ವಹಿಸಿದ್ದರು. ದಿನಾಂಕ 11.11.2022 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ನಡೆದ ವಿಶೇಷ ಸಭೆ ನಿರ್ಣಯಗಳ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಇವರು ಸಭೆಗೆ ಮಾಹಿತಿ ನೀಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿನು ಎ.ಕೆ. ಇವರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.

**ಸಮನ್ವಯ ಸಮಿತಿ ಸಭೆ :** ದಿನಾಂಕ 10.02.2023 ರಂದು ತುಮಕೂರು ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ವತಿಯಿಂದ ತುಮಕೂರು ಜಿಲ್ಲೆಯ ಸಮನ್ವಯ ಸಮಿತಿ ಸಭೆಯನ್ನು ತುಮಕೂರು ಉಪನಿಬಂಧಕರ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿ ನಿಬಂಧಕರಾದ ಶ್ರೀ ಎನ್. ವೆಂಕಟೇಶ್ ರವರು ಹಾಗೂ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರಾದ ಶ್ರೀ ರಂಗಸ್ವಾಮಿ ರವರು ಜಂಟಿಯಾಗಿ ವಹಿಸಿದ್ದರು. ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಇವರು ಭಾಗವಹಿಸಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ ನೀಡಿದರು.

## ಉದ್ಘಾಟನೆ



**ತುಮಕೂರು :** ದಿನಾಂಕ 08.02.2023 ರಂದು ಶ್ರೀ ರಾಮಾನುಜ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ತುಮಕೂರು ಸಹಕಾರಿಯ ನೆಲಮಂಗಲ ಶಾಖೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪೂಜ್ಯ ಶ್ರೀಗಳಾದ ಶ್ರೀ ಸಿದ್ದಲಿಂಗ ಮಾಹಾಸ್ವಾಮಿಗಳು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಸಹಕಾರಿಯ 10ನೇ ವಾರ್ಷಿಕೋತ್ಸವ



ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿರುವ ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಇದರ 10ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವು ಸೋಮವಾರ ದಿನಾಂಕ 16.01.2023 ರಂದು ಮುಂಜಾನೆ 9.00 ಗಂಟೆಗೆ ಸಹಕಾರಿಯ ಮಾರ್ಗದರ್ಶಕರಾದ ಮಾನ್ಯ ಶ್ರೀ ಮಹಾಂತೇಶ ಮ ಕವಟಗಿಮಠ, ಮಾಜಿ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನ ಪರಿಷತ್, ಬೆಂಗಳೂರು, ಇವರು ಪೂಜಾ ಕಾರ್ಯಕ್ರಮ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ ಎಮ್ ಕವಟಗಿಮಠ ಹಾಗೂ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಬಿ ಮೂಗೇರಿ, ನಿರ್ದೇಶಕರುಗಳಾದ ಶ್ರೀ ಸಂಜಯ ಗಿಡವೀರ, ಶ್ರೀ ಲೋಕಪ್ಪಾ ದುಂಬಾಳಿ, ಶ್ರೀ ಹೇಮಂತ ಹಂಪಣ್ಣವರ, ಶ್ರೀ ಪ್ರವೀಣ ಕಾಂಬಳೆ, ಶ್ರೀ ಶ್ರೀಧರ ದಿಕ್ಷೀತ, ಶ್ರೀ ರಾಜಕುಮಾರ ಹಿರೇಮಠ, ಶ್ರೀ ಚಂದ್ರಕಾಂತ ಬುರಡ, ಶ್ರೀ ರಮೇಶ ಕುಡತರಕರ, ಶ್ರೀ ಮನೋಜಕುಮಾರ ಸಮ್ಮತಶೆಟ್ಟಿ, ಶ್ರೀ ಸಂಜಯ ಶಿಂತ್ರೆ, ಶ್ರೀ ಯರ್ರಿಸ್ವಾಮಿ ಗೌಡ ಇಟಗೌನಿ ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ನಾಗರಾಜ ಎಡಳ್ಳಿ ಹಾಗೂ ಸಹಕಾರಿಯ ಎಲ್ಲಾ ಶಾಖಾ ಸಲಹಾ ಸಮಿತಿ ಸದಸ್ಯರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರ ಉಪಸ್ಥಿತಿಯಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು.

## ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ಸಂಸ್ಥೆಯ ಶಾಖೆ ಉದ್ಘಾಟನೆ



ಉತ್ತರ ಕನ್ನಡ ಜಿಲ್ಲೆಯ ಜನಪ್ರಿಯ ಸಹಕಾರಿ ಸಂಸ್ಥೆಯಾದ ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ 13ನೇ ಶಾಖೆಯನ್ನು ಭಟ್ಕಳದ ಮಣ್ಕುಳಿಯಲ್ಲಿ ಶುಭಾರಂಭಗೊಳಿಸಲಾಯಿತು. ಸಹಕಾರಿಯ 13ನೇ ಶಾಖೆಯನ್ನು ಶಾಖಾ ಕಟ್ಟಡದ ಮಾಲಿಕರಾದ ರಾಜಶೇಖರ ಶೇಟ್ ಮತ್ತು ಭದ್ರತಾ ಕೊಠಡಿಯನ್ನು ಉತ್ತರಕನ್ನಡ ಜಿಲ್ಲಾ ಪಂಚಾಯತ್‌ನ ಮಾಜಿ ಉಪಾಧ್ಯಕ್ಷರಾದ ರಾಮ ಮೊಗೇರ ಇವರು ಉದ್ಘಾಟಿಸಿದರು. ಲಕ್ಷ್ಮೀ ಪೂಜೆ ಮಾಡುವುದರ ಮೂಲಕ ವ್ಯವಹಾರಕ್ಕೆ ಚಾಲನೆ ನೀಡಲಾಯಿತು. 14ನೇ ಶಾಖೆಯನ್ನು ಮುರ್ಡೇಶ್ವರದಲ್ಲಿ ದಿನಾಂಕ 28–01–2023, ಶನಿವಾರ ರಥಸಪ್ತಮಿಯ ಶುಭದಿನದಂದು ಶುಭಾರಂಭಗೊಳಿಸಲಾಯಿತು. ಸಹಕಾರಿಯ 14ನೇ ಶಾಖೆಯನ್ನು ಕಾಯ್ಕಿಣಿ ಪಂಚಾಯತ ಉಪಾಧ್ಯಕ್ಷರಾದ ಶ್ರೀ ಶ್ರೀಧರ ನಾಯ್ಕ ಮತ್ತು ಭದ್ರತಾ ಕೊಠಡಿಯನ್ನು ಕಟ್ಟಡದ ಮಾಲಿಕರಾದ ಶ್ರೀ ಎನ್. ಎಸ್. ಕಾಮತ ಉದ್ಘಾಟಿಸಿದರು. ಲಕ್ಷ್ಮಿ ಪೂಜೆಯೊಂದಿಗೆ ವ್ಯವಹಾರಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಜಿ. ಜಿ. ಶಂಕರ ಆಗಮಿಸಿದ ಶೇರು ಸದಸ್ಯರು ಮತ್ತು ಸಾರ್ವಜನಿಕರನ್ನುದ್ದೇಶಿಸಿ 2011ರಲ್ಲಿ ಆರಂಭವಾದ ಸಹಕಾರಿಯು ಗ್ರಾಮೀಣ ಭಾಗದ ಮೂಲೆ ಮೂಲೆಗೂ ಸೇವೆ ನೀಡುವದರ ಮೂಲಕ ಸದಸ್ಯರ ವಿಶ್ವಾಸಕ್ಕೆ ಪಾತ್ರವಾಗಿದೆ. ಇಂದು ಶ್ರೀ ಮುರುಡೇಶ್ವರನ ಸನ್ನಿಧಿಯಲ್ಲಿ ರಥಸಪ್ತಮಿಯ ದಿನದಂದು 14ನೇ ಶಾಖೆ ವಿದ್ಯುಕ್ತವಾಗಿ ಆರಂಭಗೊಂಡಿದೆ. ಇದಕ್ಕೆ ಎಲ್ಲಾ ಸದಸ್ಯ ಗ್ರಾಹಕರ ಸಹಕಾರ, ಸಿಬ್ಬಂದಿ ಮತ್ತು ಫೀಲ್ಡ್ ಎಕ್ಸಿಕ್ಯೂಟಿವ್‌ಗಳ ಪರಿಶ್ರಮ ಹಾಗೂ ಬಿಡಿಸಿ ಮತ್ತು ಆಡಳಿತ ಮಂಡಳಿಯ ನಿರ್ದೇಶಕರುಗಳ ನಿಸ್ವಾರ್ಥ ಸೇವೆಯೇ ಕಾರಣ ಎಂದು ಅಭಿನಂದಿಸಿದರು. ನೂರಕ್ಕೆ ನೂರು ಸಹಕಾರಿ ತತ್ವ ಪಾಲಿಸುವದರೊಂದಿಗೆ ಸೌಹಾರ್ದ ಕಾಯ್ದೆಯ ತತ್ವಗಳಿಗೆ ಬದ್ಧವಾಗಿದೆ. ಈ ಶುಭ ಸಂದರ್ಭದಲ್ಲಿ ಭಟ್ಕಳ-ಹೊನ್ನಾವರ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ಸುನೀಲ್ ನಾಯ್ಕ ಆಗಮಿಸಿ ಶುಭ ಕೋರಿದರು. ಮಾನ್ಯ ಶಾಸಕರಿಗೆ ಅಧ್ಯಕ್ಷರು ಶಾಲು-ಹಾರ-ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

## ಶ್ರೀ ಗುರು ನಿರಂಜನ ಸೌಹಾರ್ದ ಸಹಕಾರಿಯ ಉದ್ಘಾಟನೆ



**ಬೀದರ :** ಭಾಲ್ಕಿ ನಗರದ ಬೀದರ ರಸ್ತೆಯ ಪಾಪ್ಪ ಚೌಕ ಹತ್ತಿರ ನೂತನ ಶ್ರೀ ಗುರು ನಿರಂಜನ ಸೌಹಾರ್ದ ಸಹಕಾರಿ ಸಂಘ ನಿ., ದ ಕಛೇರಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಇದರ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ಇವರು ಉದ್ಘಾಟಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷರಾದ ಡಾ. ಬಸವಲಿಂಗ ಪಟ್ಟದೇವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಒಕ್ಕೂಟದ ನಿರ್ದೇಶಕ ಶ್ರೀ ಜಗನಾಥ ಕರಂಜೆ, ಯುವ ಮುಖಂಡರಾದ ಶ್ರೀ ಸಾಗರ ಈಶ್ವರ ಖಂಡ್ರೆ, ಸಹಕಾರಿಗಳಾದ ಮಹಾದೇವ ಅಷ್ಟೂರೆ, ಜಿಲ್ಲಾ ಒಕ್ಕೂಟ ಸಿ.ಇ.ಓ ಅಮೃತ ಹೊಸಮನಿ, ಶ್ರೀ ಶೇಖರ ವಗ್ಗೆ, ವೀಜಕುಮಾರ ಬಿರಾದರ, ರಾಜಕುಮಾರ ಮಾಳಗೆ, ಸಹಕಾರ ನೀರಿಕ್ಷಕ ಸೋಮಶೇಖರ ಚಿದ್ರಿ, ಅಂಕುಶ ಹಣಮಶೆಟ್ಟಿ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷರಾದ ಲೋಕೇಶ ಹಣಮಶೆಟ್ಟಿ ವಹಿಸಿಕೊಂಡಿದರು.

## ಪ್ರವರ್ತಕರ ಸಭೆ

ದಿನಾಂಕ 24.02.2023 ರಂದು ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ಇವರು ಸಾಮರ್ಥ್ಯ ಮಹಿಳಾ ಟ್ರಸ್ಟ್ , ಚನ್ನಪಟ್ಟಣ ಇದರ ಸದಸ್ಯರನ್ನು ಭೇಟಿ ಮಾಡಿ ನೂತನ ಸೌಹಾರ್ದ ಸಹಕಾರಿಯನ್ನು ನೋಂದಣಿ ಮಾಡಲು ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ನ್ಯೂ ಬಸವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ನಿ., ವಿಜಯಪುರ**



ಶ್ರೀ ಶಾಂತನಂದ ಗು.ದೇವೂರ್
ಅಧ್ಯಕ್ಷರು



ಶ್ರೀ ಭರಮು ಸಾ. ಚೌಗಲೆ
ಉಪಾಧ್ಯಕ್ಷರು

**ಸ್ನೇಹ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬಸವಕಲ್ಯಾಣ, ಬೀದರ್.**



ಶ್ರೀ ಶಿವಬಸಪ್ಪ ತಂದೆ ವೈಜೀನಾಥ, ಚೆನ್ನಾಮಲ್ಲೇ.
ಅಧ್ಯಕ್ಷರು



ಶ್ರೀ ಬಸವರಾಜ ತಂದೆ ಕಾಶೇಪ್ಪ ಬಾಲಕಿಲ್ಲೆ.
ಉಪಾಧ್ಯಕ್ಷರು

## ಸಹಕಾರ ಸಂಘಗಳಿಗೆ ಸ್ಥಿರಾಸ್ಥಿ ಹಕ್ಕು ಪತ್ರಗಳ ದಸ್ತಾವೇಜು ನೋಂದಣಿ ಸವಲತ್ತು ವಿಸ್ತರಣೆ (Deposit of Title Deeds)

**ಸಾಲಿಗ್ರಾಮ** : ಸಹಕಾರ ಸಂಘಗಳ ಸದಸ್ಯರಿಗೆ ನೀಡುವ ಸ್ಥಿರಾಸ್ತಿ ಅಡಮಾನ ಸಾಲಗಳಿಗೆ ವತ್ತೆಯಿಟ್ಟುಕೊಳ್ಳುವ ಸ್ಥಿರಾಸ್ಥಿ ಹಕ್ಕು ಪತ್ರಗಳ ದಸ್ತಾವೇಜನ್ನು (ಡೆಪೋಸಿಟ್ ಆಫ್ ಟೈಟಲ್ ಡೀಡ್ಸ್) ರಾಜ್ಯದ ಎಲ್ಲಾ ಉಪ ನೋಂದಾವಣಾಧಿಕಾರಿಗಳ ಕಛೇರಿಯ ನೋಂದಣಿ ಮಾಡುವಂತೆ ನೋಂದಣಿ ಮಹಾಪರೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಬೆಂಗಳೂರು ಇವರು ನಿರ್ದೇಶಿಸಿರುವುದಾಗಿ ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ (ನಿ) ಸಾಲಿಗ್ರಾಮ ಇದರ ಪ್ರಧಾನ ವ್ಯವಸ್ಥಾಪಕರು ತಿಳಿಸಿರುತ್ತಾರೆ. ಎಲ್ಲಾ ಸಹಕಾರಿ ಸಂಘಗಳು ಕನಿಷ್ಠ ಶುಲ್ಕದ ಸವಲತ್ತಿನ ಸದುಯೋಗಪಡಿಸಿ ಪಡಕೊಳ್ಳಬಹುದಾಗಿದೆ. ಇದು ತನಕ ಜಮೀನು ಅಡಮಾನ ಸಾಲಗಳಿಗೆ ಸದಸ್ಯರು ದುಬಾರಿ ನೋಂದಾಣಿ ಶುಲ್ಕ ತೆರಬೇಕಾಗಿತ್ತು, ಆದರೆ ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ (ನಿ) ಸಾಲಿಗ್ರಾಮ ಇದರ ಕಳೆದ ಒಂದು ವರ್ಷದ ಸತತ ಹೋರಾಟದಿಂದ ಈ ಸವಲತ್ತನ್ನು ಪಡಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ.

## ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ – ಗ್ರಾಮೀಣ ನಿಧಿ ಸೌಹಾರ್ದ ಸಹಕಾರಿ ಸಹಯೋಗದೊಂದಿಗೆ



**ಮೈಸೂರು** : ಪ್ರತಿಯೊಬ್ಬರಿಗೂ ಕೂಡ ಕಣ್ಣು ಅತಿ ಮುಖ್ಯವಾದ ಅಂಗವಾಗಿದೆ ಎಂದು ತಹಶೀಲ್ದಾರ್ ಕೆ.ಎನ್.ಮೋಹನ್ ಕುಮಾರ್ ಹೇಳಿದರು. ಅವರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರ್ನಾಟಕ ಪ್ರೆಸ್ ಕ್ಲಬ್ ಕೆ.ಆರ್.ನಗರ ತಾಲೂಕು ಘಟಕ, ಸಾಲಿಗ್ರಾಮದ ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಲಿಮಿಟೆಡ್, ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ, ಜಿಲ್ಲಾ ಅಂದತ್ವ ನಿಯಂತ್ರಣ ವಿಭಾಗ, ಸಾಲಿಗ್ರಾಮದ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ನೇತ್ರಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಆರೋಗ್ಯಕ್ಕೆ ಸಂಬಂಧಿಸಿದಂತಹ ಇಂಥಹ ಶಿಬಿರಗಳನ್ನು ಎಲ್ಲಾ ಸಂಘ ಸಂಸ್ಥೆಗಳು ನಡೆಸುವಂತಾಗಬೇಕು. ನಮ್ಮ ನಡುವೆ ಇದ್ದು ಬೆಳಕನ್ನು ನೋಡಲಾಗದಂತಹ ವ್ಯಕ್ತಿಗಳಿಗೆ ನೇತ್ರದಾನವನ್ನು ಮಾಡುವ ಮೂಲಕ ಸರ್ವರ ಬಾಳಿಗೆ ಬೆಳಕಾಗುವಂತೆ ನಾವು ನೀವು ಎಲ್ಲರೂ ಮಾಡಬೇಕು ಎಂದು ಹೇಳಿದರು.

ಪೊಲೀಸ್ ಇನ್ಸೆಕ್ಟರ್ ಕೃಷ್ಣರಾಜು ಮಾತನಾಡಿ ಗ್ರಾಮೀಣ ಭಾಗದಲ್ಲಿ ದಿನನಿತ್ಯ ತಮ್ಮ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ರೈತರುಗಳು, ಅಲ್ಲಲ್ಲಿ ಆಟವಾಡುವ ಮಕ್ಕಳು ತಮ್ಮ ಅರಿವಿಗೆ ಬಾರದೆ ಕಣ್ಣಿಗೆ ತೊಂದರೆ ಆಗುವ ಸಂಭವ ಇರುತ್ತದೆ. ಆದ್ದರಿಂದ ಎಲ್ಲರೂ ಎಚ್ಚರಿಕೆಯಿಂದ ತಮ್ಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಉಚಿತ ನೇತ್ರ ತಪಾಸಣಾ ಶಿಬಿರಗಳನ್ನು ಕರ್ನಾಟಕ ಪ್ರೆಸ್ ಕ್ಲಬ್ ಇತರ ಸಂಘ–ಸಂಸ್ಥೆಗಳ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ನಡೆಸುತ್ತಿರುವುದು ನಿಜಕ್ಕೂ ಮಾದರಿಯಾದ ಕಾರ್ಯವಾಗಿದೆ ಎಂದು ಶ್ಲಾಘಿಸಿದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ



**ಮೈಸೂರು** ; ಮಲ್ಲುಂಡಿ ಗ್ರಾಮದ ಸರ್ಕಾರಿ ಶಾಲೆಯ ಆವರಣದಲ್ಲಿ ಶ್ರೀ ಗುರುಮಲ್ಲೇಶ್ವರ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ನಂದಿನಿ ಮಹೇಶ್ ಉದ್ಘಾಟಿಸಿದರು. ನಂತರ ಮಾತನಾಡಿ ಬದಲಾದ ಜೀವನ ಶೈಲಿಯಿಂದಾಗಿ ಆರೋಗ್ಯ ಹಾಗೂ ನೆಮ್ಮದಿಗಾಗಿ ಪರಿತಪಿಸುವಂತಾಗಿದ್ದು, ನಮ್ಮ ಪೂರ್ವಿಕರು ಹಾಕಿಕೊಟ್ಟ ಜೀವನ ಕ್ರಮವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಆರೋಗ್ಯ ತಪಾಸಣಾ ಶಿಬಿರದಲ್ಲಿ ಮೈಸೂರಿನ ಬೃಂದಾವನ ಆಸ್ಪತ್ರೆಯ ಡಾ. ಮನು. ಡಾ.ಕೀರ್ತನಾ ತಂಡ ತಪಾಸಣೆ ನಡೆಸಿ ಅಗತ್ಯ ವೈದ್ಯಕೀಯ ಸಲಹೆ, ಮಾರ್ಗದರ್ಶನ ನೀಡಲಾಯಿತು. ಮಲ್ಲುಂಡಿ

ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ 150ಕ್ಕೂ ಹೆಚ್ಚು ಜನರು ಸದುಪಯೋಗ ಪಡೆದುಕೊಂಡುರ.

ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷೆ ಉಷಾ ನಾಗೇಂದ್ರ, ಕಾರ್ಯದರ್ಶಿ ನೇತ್ರಾವತಿ, ನಿರ್ದೇಶಕರಾದ ಕೋಮಲಾ ಮಹಾಲಿಂಗಸ್ವಾಮಿ, ಭ್ರಮರಾಂಬಿಕಾರ, ಚೈತ್ರಾ, ಶ್ರೀಧರಿ, ಮಲ್ಲಮಣಿ. ಗ್ರಾಮ ಪಂಚಾಯತಿ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಮಲ್ಕುಂಡಿ ಶಿವಕುಮಾರ್, ಮಾದಪ್ಪ, ಪುಟ್ಟಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ ಇದ್ದರು.

## ಭೇಟಿ





**ರಾಯಚೂರು :** ದಿನಾಂಕ 24.2.2023ರಂದು ಸಿಂಧನೂರಿನ ಶ್ರೀ ಮಹಾಲಕ್ಷ್ಮಿ ಸೌಹಾರ್ದ ಸಹಕಾರಿ ನಿ., ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಸಿಂಧು ಸೌಹಾರ್ದ ಸಹಕಾರಿ ನಿ., ಹಾಗೂ ಸಿಟಿ ಮರ್ಚೆಂಟ್ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ, ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಸಹಕಾರಿಗೆ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು ಮತ್ತು ಸಿಬ್ಬಂದಿಗಳು ಹಾಗೂ ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

## ನೇಕಾರ ಸಮುದಾಯಗಳ ಸೌಹಾರ್ದ ಸಹಕಾರಿ ಉದ್ಘಾಟನೆ



ದಿನಾಂಕ 24.02.2023 ರಂದು ನೇಕಾರ ಸಮುದಾಯಗಳ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಚಳ್ಳಕೆರೆ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಎಮ್.ಡಿ ಲಕ್ಷ್ಮೀನಾರಾಯಣ, ಮಾನ್ಯ ಮಾಜಿ ಶಾಸಕರು, ತುರುವೇಕೆರೆ ವಿಧಾನಸಭಾ ಕ್ಷೇತ್ರ, ಶ್ರೀ ಸೋಮಶೇಖರ್, ರಾಜ್ಯಾಧ್ಯಕ್ಷರು, ಕರ್ನಾಟಕ ತರಾಜ್ಯ ನೇಕಾರ ಸಮುದಾಯಗಳ ಒಕ್ಕೂಟ, ಶ್ರೀಮತಿ ಪ್ರತಿಭಾ ಆರ್. ಮಾನ್ಯ ತಹಶೀಲ್ದಾರರು, ಸಮುದಾಯದ ಮುಖಂಡರು, ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಶ್ರಿ ನಟರಾಜ ಇವರು ಆಡಳಿತ ಮಂಡಳಿಯವರ ಕರ್ತವ್ಯ ಹಗೂ ಜವಾಬ್ದಾರಿಗಳ ಕುರಿತು ಮಾತನಾಡಿದರು.

## ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಸಭೆ

**ಬೆಳಗಾವಿ :** ದಿನಾಂಕ 09 ಮತ್ತು 10 ಫೆಬ್ರವರಿ 2023 ರಂದು ಬೆಳಗಾವಿ ವಿಭಾಗದ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಸಭೆಯನ್ನು ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು ಹಾಗೂ ದಿನಾಂಕ 20 ಮತ್ತು 21 ಫೆಬ್ರುವರಿ 2023 ರಂದು ಬೆಳಗಾವಿ ವಿಭಾಗದ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರು, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್ ಇವರು ಬೆಳಗಾವಿಯಲ್ಲಿರುವ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಬಗ್ಗೆ ಸಮಾಲೋಚನೆ ಮಾಡಿದರು.



# ಸೌಹಾರ್ದ ಸಹಕಾರಿ ಕಾಯಿದೆ ಪ್ರಸ್ತುತತೆ

– ಶ್ರೀ ಸಿ.ಎನ್ ಪರಶಿವಮೂರ್ತಿ

ಇತ್ತೀಚೆಗೆ ಕೇಂದ್ರ ಸಹಕಾರ ಸಚಿವರು, ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಬಗ್ಗೆ ಸಂಯುಕ್ತ ಸಹಕಾರಿಗಳ ಒಂದು ಸಭೆಯಲ್ಲಿ ವಿಮರ್ಶೆ ಮಾಡುತ್ತಾ, ಕರ್ನಾಟಕ ರಾಜ್ಯಕ್ಕೆ ಎರಡು ಸಹಕಾರ ಕಾಯಿದೆಗಳು ಬೇಕೆ? ಎಂದು ಪ್ರಶ್ನಿಸಿ, ಅದರ ಜೊತೆಗೆ ಸೌಹಾರ್ದ ಕಾಯಿದೆ 1997ರಲ್ಲಿ ರಚನೆಯಾಗಿ 2001ರಿಂದ ಜಾರಿಗೆ ಬಂದಾಗಿನಿಂದ 5500 ಸಹಕಾರಿಗಳ ನೋಂದಾಣಿ ಸಾಕೇ? ಹಾಗೂ 1959ರ ಕಾಯಿದೆಯಡಿ ಸುಮಾರು 40000 ಸಹಕಾರ ಸಂಘಗಳನ್ನು ನೋಂದಾಯಿಸಿರುವುದಕ್ಕೆ ಹೋಲಿಕೆ ಮಾಡಿ, ಹೊಸ ಕಾಯಿದೆ ಪ್ರಸ್ತುತತೆ ಬಗ್ಗೆ ಕೇಳಿದರೆಂದು ತಿಳಿದಿದ್ದೇನೆ. ಸೌಹಾರ್ದ ಸಹಕಾರಿ ಕಾಯಿದೆ ರಚನೆ ಮಾಡಿದ ಸಂದರ್ಭದಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡ ತೀರ್ಮಾನದ ಬಗ್ಗೆ ಒಂದು ಪಕ್ಷಿನೋಟ ನೀಡುವುದು ಅವಶ್ಯಕ.

ಸಂವಿಧಾನದ 2ನೇ ಪಟ್ಟಿಯಲ್ಲಿ ಸಹಕಾರ ವಿಷಯ ಸೇರಿರುವುದರಿಂದ, ರಾಜ್ಯ ಸರ್ಕಾರಗಳು ಮಾತ್ರ ಸಹಕಾರ ವಿಷಯದ ಬಗ್ಗೆ ಕಾಯಿದೆ ರೂಪಿಸುವುದು ಸೇರಿದಂತೆ ಈ ಇಲಾಖೆ ನಿರ್ವಹಣೆ ಜವಾಬ್ದಾರಿ ಹೊತ್ತಿದೆ. ಕೇಂದ್ರ ಸರ್ಕಾರ 1991ರಲ್ಲಿ ಕೇಂದ್ರ ಯೋಜನಾ ಆಯೋಗದ ಮುಖಾಂತರ ಚೌದರಿ ಬ್ರಹ್ಮ ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ ಕರಡು ಸಹಕಾರ ಕಾಯಿದೆ ರಚಿಸಿ ರಾಜ್ಯ ಸರ್ಕಾರಕ್ಕೆ ರವಾನಿಸಿ ಅಳವಡಿಸಿಕೊಳ್ಳಲು ಸೂಚಿಸಿತು. ಈ ಕರಡು ಸಹಕಾರ ಕಾಯಿದೆಯ ಉದರೀಕರಣ ನೀತಿ ರೂಪಿಸಿತು. ಇದರ ಚರ್ಚೆ ಪ್ರಾರಂಭವಾದಾಗ ಕರ್ನಾಟಕ ಸರ್ಕಾರ, ಸಹಕಾರ ಸಚಿವರ ಮುಖಂಡತ್ವದಲ್ಲಿ ವಿಭಾಗ ಮಟ್ಟದಲ್ಲಿ ಈ ಹೊಸ ಸಹಕಾರ ಕಾಯಿದೆ ಬಗ್ಗೆ ಚರ್ಚೆ/ವಿಮರ್ಶೆಗಳನ್ನು ಪ್ರಾರಂಭಿಸಿತು. ಇದರ ಜೊತೆಗೆ ಅರ್ಧನಾರೀಶ್ವರನ್ ಸಮಿತಿ ವರದಿಯಲ್ಲಿಯೇ ಸಹಕಾರಿ ಸಂಸ್ಥೆಗಳನ್ನು ನಿಯಂತ್ರಿಸುವ ಬದಲು, ಸ್ವಯತತ್ತೆ ಮತ್ತ ವ್ಯವಹಾರಿಕ ಸ್ವಾಂತಂತ್ರ್ಯ ನೀಡುವುದನ್ನು ಗುರಿತಿಸಿತ್ತು. ಸ್ವಪ್ರೇರಣೆ ಸಹಕಾರಿ ಗುಂಪು (Co-Operative insivative group) ಅಂದರೆ ಹಾಲಿನ ಆಂದೋಲನದ ಮುಖಂಡ ಶ್ರೀ ಕುರಿಯನ್‌ರವರ ಅಧ್ಯಕ್ಷತೆಯಲ್ಲಿ ಎಲ್ ಸಿ ಜೈನ್ ಮತ್ತು ಮೋಹನ್‌ಧಾರಿಯ ರವರ ಸದಸ್ಯತ್ವದ ಸಮಿತಿ ಜೊತೆ, ರಾಜ್ಯ ಸರ್ಕಾರ ಸಮಗ್ರ ಚಿಂತನೆ ನಡೆಸಿತು. ಆ ಗುಂಪಿನ ಪ್ರಮುಖ ಆಶಯವೇ ಸಹಕಾರ ಸಂಸ್ಥೆಗಳಲ್ಲಿ ಸ್ವಯತತ್ತೆ, ಸ್ವಾತ್ತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ಸಂಸ್ಥೆಯಾಗಿ ಗುರುತಿಸಬೇಕು ಮತ್ತು ನಿಬಂಧಕರ ನಿಯಂತ್ರಣದಿಂದ ಮುಕ್ತಿ ನೀಡಬೇಕೆಂಬ ಅಭಿಪ್ರಾಯಕ್ಕೆ ರಾಜ್ಯ ಸರ್ಕಾರ ಮನ್ನಣೆ ನೀಡಿತ್ತು.

ಇದರ ಜೊತೆಗೆ ರಾಜ್ಯ ಸರ್ಕಾರ, ರಾಜ್ಯಕ್ಕೆ ಒಂದು ಸಹಕಾರ ನೀತಿ ಇರಬೇಕೆಂದು ಅದಕ್ಕಾಗಿ ನೀತಿ ರೂಪಿಸಲು ಒಂದು ಸಮಿತಿ ರಚಿಸಿ, ಆ ಸಮಿತಿ ವರದಿಯನ್ನು ರಾಜ್ಯ ಯೋಜನಾ ಆಯೋಗದ ಅಧ್ಯಕ್ಷರಾದ ಡಾ. ಡಿ ಎಂ ನಂಜುಂಡಪ್ಪರವರು ಪರಿಶೀಲಿಸಿದ ನಂತರ, ರಾಜ್ಯ ಸಂಪುಟದ ಒಪ್ಪಿಗೆ ನೀಡಿದ ನಂತರ, ಸಹಕಾರ ನೀತಿಯನ್ನು 30.06.1999 ರಲ್ಲಿ ಪ್ರಕಟಿಸಿತು ಅದರಲ್ಲಿ ತೆಗೆದುಕೊಂಡ ರಾಜ್ಯದ ತೀರ್ಮಾನ ಎರಡು ಕಾಯಿದೆಗಳ ಇರತಕ್ಕದ್ದು ಮತ್ತು ಉದರೀಕೃತ ಸೌಹಾರ್ದ ಸಹಕಾರಿ ಕಾಯಿದೆಯನ್ನು ಪ್ರತ್ಯಾಕಿಸಿ ಶಾಸನಾತ್ಮಕ ಜವಾಬ್ದಾರಿಗಳನ್ನು ಆ ಕಾಯಿದೆಯಲ್ಲಿ 'ಸಂಯುಕ್ತ ಸಹಕಾರಿ' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ ಅದಕ್ಕೆ ನಿಬಂಧಕರು ನಿರ್ವಹಿಸುತ್ತಿರುವ ಹಲವು ಜವಾಬ್ದಾರಿಗಳನ್ನು ಈ ಸಂಯುಕ್ತ ಸಹಕಾರಿಗೆ ವಹಿಸಿ ಪ್ರಜಾಪ್ರಭುತ್ವದಡಿ ರಚನೆಯಾದ ಒಂದು ಚುನಾಯಿತ ಮಂಡಳಿ, ಸದಸ್ಯ ಸಹಕಾರಿಗಳಿಗೆ ಮಾರ್ಗದರ್ಶಕ, ಸ್ನೇಹಿತಿ ಮತ್ತು ತತ್ವಜ್ಞಾನಿ ಎಂದು ಕಾರ್ಯನಿರ್ವಹಿಸಲು ತೀರ್ಮಾನಿಸಿತು.

**ಸಂಬಂಧ ಪಟ್ಟ ಖಂಡಿಕೆ ಈ ಕೆಳಕಂಡಂತೆ ಇದೆ.**

1) ಪ್ರಚಲಿತ ಕಾನೂನಿನ ಅಡಿಯಲ್ಲಿ ವಿಧಿಸಿರುವ ನಿಯಮಗಳನ್ನು, ನಿಯಂತ್ರಣಗಳನ್ನು ಕಡಿತಗೊಳಿಸಲು ಶಾಸನ ತರುವುದು ಮತ್ತು ಮುಕ್ತ ಸಹಕಾರಿ ಕಾರ್ಯೋನ್ಮುಖತೆಗೆ ಅನುವು ಆಗಲು ಮುಕ್ತ ವಾತಾವರಣ ಕಲ್ಪಿಸುವುದು.

2) ಸದಸ್ಯರ ಸ್ವಂತ ಸಂಪನ್ಮೂಲಗಳ ಆಧಾರಗಳ ಮೇಲಷ್ಟೆ ಸ್ಥಾಪಿಸಲಾದ ಮತ್ತು ಯಾವುದೇ ಸರ್ಕಾರಿ ನೇರವನ್ನು ಕೋರದ ಸಹಕಾರಿ ಸಂಸ್ಥೆಗಳಿಗೆ, ಹೊಸ ಮತ್ತು ಪ್ರತ್ಯೇಕ ಕಾನೂನು ರಚಿಸುವುದು. ಈ ಹೊಸ ಕಾನೂನನ್ನು ಆಯ್ಕೆ ಮಾಡಿಕೊಳ್ಳಲು ಸಹಕಾರಿ ಸಂಸ್ಥೆಗಳಲ್ಲಿ ತಮ್ಮ ಸ್ವಂತ ಪ್ರಯತ್ನದಿಂದ ವ್ಯವಹಾರ ಮಾಡುತ್ತವೆಯೋ ಅಂತಹ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಯು ತನ್ನ ಸರ್ವ ಸದಸ್ಯರಿಗೆ ಉತ್ತರದಾಯಿಯಾಗಿರುತ್ತದೆ.

3) ಎಲ್ಲಾ ಸಹಕಾರಿ ಸಂಸ್ಥೆಗಳ ಆಡಳಿತ ನಿರ್ವಹಣೆಯಲ್ಲಿ ಅವಶ್ಯಕ ನಿಯಂತ್ರಣ ಮತ್ತು ಸಮತೋಲನವನ್ನು ಚಲಾಯಿಸುವ ಅಧಿಕಾರವುಳ್ಳ ಒಂದು ಪ್ರಜಾಪ್ರಭುತ್ವದ ಆಧಾರದ ಮೇಲೆ ರಚನೆಯಾಗಿರುವ ಪರಮೋಚ್ಚ ಸಂಘಟಣೆಯಾಗಿರು ಸಂಯುಕ್ತ ಸಹಕಾರಿ ಸಂಸ್ಥೆಯ ರಚನೆಗೆ ಅವಕಾಶ ಕಲ್ಪಿಸುವುದು.

4) ಎಲ್ಲಾ ಹಂತದ ಸಹಕಾರ ಸಂಸ್ಥೆಗಳಿಂದ ಸರ್ಕಾರದ ಪಾಲು ಬಂಡವಾಳ ಮತ್ತು ಸಿಬ್ಬಂದಿಯನ್ನು ಹಂತ ಹಂತವಾಗಿ ಕಡಿಮೆ ಮಾಡಲು ಮತ್ತು ಹಿಂತೆಗೆದುಕೊಳ್ಳಲು ಉತ್ತೇಜಿಸುವುದು.

5) ನಿಬಂಧಕರ ಪಾತ್ರ ಮತ್ತು ಪ್ರಕಾರ್ಯಗಳನ್ನು, ಒಬ್ಬ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕನಾಗಿ ಮಾತ್ರ ಸೀಮಿತಗೊಳಿಸತಕ್ಕದ್ದು. ಮಾನವ ಶಕ್ತಿ ಹಾಗೂ ತಾಂತ್ರಿಕ ಕಾರ್ಯತತ್ಪರತೆಯ ತರಬೇತಿಗೆ ಒಂದು

ಸಂಪನ್ಮೂಲ ಕೇಂದ್ರ ಎಂಬ ಮಟ್ಟಿಗೆ ನಿಬಂಧಕರ ಪಾತ್ರವನ್ನು ಸಮೀತಗೊಳಿಸುವುದು.

6) ಸ್ವಯಂ ರಚಿತ ಪ್ರಜಾಸತ್ತಾತ್ಮಕ ಮತ್ತು ಸ್ವಾಯತ್ತತೆಯಿಂದ ಕಾರ್ಯ ನಿರ್ವಹಿಸುವ ಸಹಕಾರಿ ಸಂಘಗಳು ಸಂಪೂರ್ಣವಾಗಿ ತಮ್ಮ ಸದಸ್ಯರಿಗೆ ಜವಾಬ್ದಾರರಿರುವಂತೆ, ಆರ್ಥಿಕ ಸಂಸ್ಥಗಳಾಗುವಂತೆ ಮಾಡುವುದು.

7) ತಮ್ಮ ಸದಸ್ಯರ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಗುಣಮಟ್ಟಗಳ ಸುಧಾರಣೆಯ ಸಾಧನೆಗಾಗಿ ಸಹಕಾರಿ ಸಂಸ್ಥೆಗಳು ಕೆಲಸ ನಿರ್ವಹಿಸುವಂತೆ ಸೌಹಾರ್ದಯುತ ವಾತವರಣ ನಿರ್ಮಾಣ ಮಾಡುವುದು.

8) ಸಹಕಾರ ತತ್ವಗಳು ಮತ್ತು ವೃತ್ತಿಪರ ನಿರ್ವಹಣಾ ಪದ್ದತಿಗಳನ್ನು ಆಧಾರಿಸಿ, ತಮ್ಮ ವ್ಯವಹಾರ ನಡೆಸುವ ಸಹಕಾರಿ ಸಂಸ್ಥೆಗಳಿಗೆ ಮಾನ್ಯತೆ ನೀಡಿ ಉತ್ತೇಜಿಸುವುದು.

9) ಸದಸ್ಯರ ಆರ್ಥಿಕ ಒಳಿತನ್ನು ದೃಷ್ಟಿಯಲ್ಲಿಟ್ಟುಕೊಂಡು ಬಹುಮುಖ ಚಟುವಟಿಕೆಯಲ್ಲಿ ತೊಡಗುವ ಸಹಕಾರ ಸಂಘಗಳನ್ನು ಗುರುತಿಸುವುದು ಮತ್ತು ಸಮರ್ಥ ಠೇವಣೆ ಸಂಗ್ರಹಕಾರಾಗಿ ಮತ್ತು ಮಾನವ ಸಂಪನ್ಮೂಲ ವರ್ಧಕರಾಗಿ ಕಾರ್ಯನಿರತರಾದ ಸಹಕಾರಿ ಸಂಸ್ಥೆಗಳನ್ನು ಮಾನ್ಯ ಮಾಡುವುದು.

10) ಸಹಕಾರಿ ಅಭಿವೃದ್ಧಿ ನಿಧಿ ಎಂದು ಕರೆಯಲಾಗುವ ಒಂದು ಮೂಲ ನಿಧಿಯನ್ನು ಸೃಷ್ಟಿಸುವುದು. ಈ ನಿಧಿಗೆ ಸರ್ಕಾರ ಮತ್ತು ಲಾಭಗಳಿಸುವ ಸಹಕಾರಿ ಸಂಸ್ಥೆಗಳು ಸಮನಾದ ವಂತಿಕೆಗಳನ್ನು ನೀಡುವುದು ಅಗತ್ಯವಿರುತ್ತದೆ. ಯಾವುದೇ ಸಹಕಾರಿ ಸಂಸ್ಥೆಯು ತನ್ನ ವಂತಿಕೆಯನ್ನು ತನ್ನ ಒಂದು ವರ್ಷದ ಲಾಭದ ಶೇ 15%ಕ್ಕೆ ಸಿಮೀತಗೊಳಿಸಬಹುದು.

11) ರಾಜ್ಯದಲ್ಲಿ ಸಹಕಾರ ಕಲ್ಪನೆಯನ್ನು ಪ್ರಚುರಪಡಿಸುವ ಉದ್ದೇಶಕ್ಕಾಗಿ ಸಂಶೋಧನೆ, ಅಭಿವೃದ್ಧಿ ಮಾಹಿತಿ, ಶಿಕ್ಷಣ ಮತ್ತು ಪ್ರಚಾರಕ್ಕಾಗಿ ಅಯವ್ಯಯದಲ್ಲಿ ಹಂಚಿಕೆ ಮಾಡುವುದು.

12) ಸಾಲ ನೀಡಿಕೆ, ಕೃಷಿ ಮತ್ತು ಕೃಷಿಯೇತರ ಹೂಡುವಳಿಗಳ, ಬೇಸಾಯ ಮತ್ತು ಸಂಬಂಧಿಸಿದ ಕಾರ್ಯಚಟುವಟಿಕೆಗಳಿಗೆ ಬೇಕಾದ ಪೂರೈಕೆಗಳು, ಗ್ರಾಹಕರ ವಸ್ತುಗಳ ಖರೀದಿ, ಸಂಗ್ರಹಣೆ ಮತ್ತು ಮಾರಾಟ, ಸಂಸ್ಕರಣೆ ಮತ್ತು ಸರಬರಾಜು, ಇಂಥ ಸೇವೆಗಳನ್ನು ಪಂಚಾಯತಿ ಮಟ್ಟದಲ್ಲಿ ಸಂಪೂರ್ಣವಾಗಿ ನಿರ್ವಹಿಸುವಂತೆ ಮಾಡಲು ಒಂದು ಪಂಚಾಯತಿ ಪ್ರದೇಶದಲ್ಲಿ ಸಹಕಾರಿ ಸಂಘಗಳನ್ನು ವಿವಿದೊದ್ದೇಶ ಘಟಕಗಳಾಗಿ ಅಭಿವೃದ್ಧಿ ಪಡಿಸಲು ಒಂದು ಪೂರಕ ಪರಿಸರ ಮೂಡಿಸುವುದು.

13) ಒಂದು ಪಂಚಾಯಿತಿ ಪ್ರದೇಶದಲ್ಲಿ, ಸಹಕಾರ ಸಂಸ್ಥಗಳು ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಪಂಚಾಯಿತಿಗಳೊಡನೆ ಅರ್ಥಪೂರ್ಣವಾಗಿ ಪರಸ್ಪರ ಕಾರ್ಯನಿರ್ವಹಿಸುವಂತಹ ಪರಿಸರ ಮೂಡಿಸುವುದು.

14) ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿರುವ ಆರ್ಥಿಕ ಸಂಪತ್ತನ್ನು ಬಳಸಿಕೊಳ್ಳಲು ಯೋಜಿಸುವುದರ ಜೊತೆಗೆ ವಿವಿಧ ಆರ್ಥಿಕ ಯೋಜನೆಗಳನ್ನು ಕೈಗೊಳ್ಳಲು ಸಹಕಾರಿ ಸಂಸ್ಥೆಗಳೊಡನೆ ಪರಿಣಾಮಕಾರಿಯಾಗಿ ಪರಸ್ಪರ ಕಾರ್ಯನಿರ್ವಹಿಸುವಂತಹ ವಾತಾವರಣ ಮೂಡಿಸುವುದು.

15) ಸರ್ವಾತೋಮುಖ ಗ್ರಾಮೀಣ ಅಭಿವೃದ್ಧಿಗಾಗಿ ಎಲ್ಲಾ ಹಂತದಲ್ಲಿಯೂ ಪಂಚಾಯಿತಿಗಳು ಮತ್ತು ಸಹಕಾರಿ ಸಂಸ್ಥೆಗಳ ನಡುವೆ ನಿಕಟ ಸಹಭಾಗಿತ್ವ ಅತ್ಯಗತ್ಯ ಎಂಬ ಅಂಶವನ್ನು ಗುರುತಿಸುವುದು.

ಈ ಮೇಲ್ಕಂಡ ರಾಜ್ಯ ಸಹಕಾರ ನೀತಿಯಲ್ಲಿ ಕ್ರಮಸಂಖ್ಯೆ 1,2,3,5,6,10ಗಳನ್ನು ಸೌಹಾರ್ದ ಸಹಕಾರಿ ಧ್ಯೇಯೋಧೇಶಗಳಿಗೆ ಅನ್ವಯವಾಗುತ್ತವೆ. ಈ ರಾಜ್ಯ ಸರ್ಕಾರ ಈ ನೀತಿಗೆ ಪೂರಕವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯಿದೆ 1997 ರೂಪಿತವಾಗಿದೆ. ಈ ಉದ್ದೇಶಕ್ಕೆ ಕಾಯಿದೆಯಲ್ಲಿಯೇ ಸೃಷ್ಟಿಸಿದ "ಸಂಯುಕ್ತ ಸಹಕಾರಿ" ಎಂಬ ಮಂಡಳಿ ರೂಪಿಸಿ ನಿರ್ದೇಶಕರು ಹೊಸ ಕಾಯಿದೆಯ ಧ್ಯೇಯೋದ್ದೇಶಗಳನ್ನು ಅರ್ಥೈಸಿಕೊಳ್ಳದೆ, ಇದು ಒಂದು ಮಹಾ ಮಂಡಲದಂತೆ ಎಂದು ತಿಳಿದು, ತಮ್ಮ ಸಿಮೀತ ತಿಳುವಳಿಕೆಯಿಂದ ಕಾರ್ಯನಿರ್ವಾಹಿಸಿದೆ. ಈ ಕಾಯಿದೆ ಜಾರಿಯಲ್ಲಿ ಎಡವಿದೆ ಪ್ರಾರಂಭಿಕ ಹಂತದಲ್ಲಿದ್ದ ಅಧಿಕಾರಿಗಳಲ್ಲೂ ಸಹ ಕಾಯಿದೆಯನ್ನು ಸಮರ್ಪಕವಾಗಿ ಜಾರಿ ಮಾಡುವ ಪ್ರಯತ್ನ ಮಾಡದೆ ಹಾಗೂ ಸಹಕಾರಿಗಳ ನೋಂದಾಣಿಗೆ ಸ್ವಯಂನಿಯಂತ್ರಣ ಸೂತ್ರವನ್ನು ಸರಿಯಾಗಿ ತರಬೇತಿ ನೀಡದೆ; ಸಂಕುಚಿತ ಭಾವನೆಯಿಂದ ಸದಸ್ಯ ಸಹಕಾರಿಗಳ ವಿಕಸನದತ್ತ ಗಮನಹರಿಸಲೇ ಇಲ್ಲ. ಈ ಕಾಯಿದೆಯಲ್ಲಿನ ಅವಶ್ಯಕತೆಗಳನ್ನು, ಆಶಯಗಳನ್ನು ಅರ್ಥೈಸಿಕೊಳ್ಳದೆ 1959ರ ಕಾಯಿದೆಯಲ್ಲಿನ ಮಂಡಲಿಯಂತೆ ಕೆಲಸಮಾಡಲು ರೂಡಿಸಿಕೊಂಡಿದ್ದಲ್ಲಿ, ಈ ಉದಾರಿಕೃತ ಕಾಯಿದೆ, ಸಮರ್ಪಕವಾಗಿ ಜಾರಿಯಾಗದಂತೆ ಮುಂದುವರಿಯಲು ಕಾರಣಕರ್ತರಾದರು. ಆದರೆ ಕಾಯಿದೆ ರಚನೆ ಮಾಡುವಾಗ ಸರ್ಕಾರದ ಧ್ಯೇಯೋದ್ದೇಶಗಳನ್ನು, ಸಂಯುಕ್ತ ಸಹಕಾರಿ ಮಂಡಳಿ ಜಾರಿ ಮಾಡಲು ಪ್ರಯತ್ನಿಸಲಿಲ್ಲ ಪ್ರಾರಂಭಿಕ ಸಂಯುಕ್ತ ಸಹಕಾರಿ ಮಂಡಳಿ ಸದಸ್ಯರು ಇಂದು ಸಂಘಟಣೆಯ ಆಶೋತ್ತರಗಳನ್ನು ಜಾರಿ ಮಾಡಲು ಪ್ರಯತ್ನಿಸಿದೆ. ಆದರೂ ಸಮರ್ಪಕ ಜಾರಿ ಮಾಡಲಾಗಲಿಲ್ಲ. ಅದಕ್ಕಾಗಿ ಕಾಯಿದೆ ರಚನಾಕಾರರನ್ನು ದೂಷಿಷತಕ್ಕದ್ದಲ್ಲ. ಏಕೆಂದರೆ ಸಹಕಾರಿ ಮುಖಂಡರು/ದುರುಣರು, ನಿಬಂಧಕರು/ಸರ್ಕಾರದ ನಿಯಂತ್ರಣದಿಂದ ಬಿಡುಗಡೆ ಬೇಕೆಂದು ಎಲ್ಲಾ ವೇದಿಕೆಗಳಲ್ಲಿ ದೊಡ್ಡ ಧ್ವನಿಯಿಂದ ಹೋರಾಡುತ್ತಿದ್ದರು, ಆದರ ಫಲವಾಗಿಯೇ ಈ ಕಾಯಿದೆ ರಚನೆಯಾಗಿದೆ. ಇದಕ್ಕೆ ಪೂರಕವಾಗಿ ಈ ನಿಲುವೂ ಡಾ. ವರ್ಗಿಸ್ ಕುರಿಯನ್ ಅಧ್ಯಕ್ಷತೆಯಲ್ಲಿ ರಚನೆಯಾದ "ಸಹಕಾರಿ ಸ್ವಯಂಪ್ರೇರಿತ ಗುಂಪು(Co-Operative insivative group) ಪ್ರತಿಪಾದಿಸಿದಂತೆ ಸ್ವಾಯತ್ತ, ಸ್ವಾತಂತ್ರ ಹಾಗೂ ಸ್ವಯಂ

ನಿಯಂತ್ರಕರ ಸಂಸ್ಥೆಯಾಗಲು, ಈ ಕಾಯಿದೆ ರಚನೆ ಮಾಡಿದೆ. ಇದಕ್ಕೂ ಪೂರ್ವದಲ್ಲಿ ಕೇಂದ್ರ ಸರ್ಕಾರದ ಉದರೀಕೃತ ಮಾದರಿ ಕಾಯಿದೆ ಅಳವಡಿಸಿಕೊಳ್ಳಲು ಚೌದರಿ ಬ್ರಹ್ಮಪ್ರಸಾದ್‌ರ ಕರಡು ಕಾಯಿದೆ.(ಯೋಜನಾ ಆಯೋಗಕ್ಕೆ ರಚಿಸಿದ ವರದಿ) ಅನುಸರಿಸಿ ರಾಜ್ಯಕ್ಕೆ ಸಂಬಂಧ ಪಟ್ಟಂತೆ ಎರಡು ಸಹಕಾರಿ ಕಾಯಿದೆ ಇರಬೇಕೆಂದು ಸಹಕಾರ ನೀತಿಯತೆ ರಾಜ್ಯಸಕಾರದ ತೀರ್ಮಾನ. ಇದರ ಜೊತೆಗೆ ಅರ್ಧನರೀಷ್ವರನ್‌ರವರ ಉದರೀಕರಣ ನೀತಿ ಅನುಸರಿಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ರಚನೆಯಾಗಿದೆ. ಈ ಕಾಯಿದೆಯಲ್ಲಿ ವಿಶೇಷತೆ ಎಂದರೆ

1) ಪ್ರತಿಯೊಂದು ನೋಂದಾಯಿತ ಸಹಕಾರಿಯೂ ಸಂಯುಕ್ತ ಸಹಕಾರಿ ಸದಸ್ಯತ್ವ ತನ್‌ತಾನೇ ಪ್ರಾಪ್ತವಾಗುತ್ತದೆ. ಈ ರೀತಿ ಅವಕಾಶ ಕಲ್ಪಿಸಲು ಪ್ರಮುಖ ಕಾರಣವೆಂದರೆ 1959ರ ಕಾಯಿದೆಯಲ್ಲಿ ನೋಂಧಾಯಿಸಿದ ಜಿಲ್ಲಾ ಸಹಕಾರ ಒಕ್ಕೂಟಗಳು, ಆ ಜಿಲ್ಲೆಯಲ್ಲಿರುವ ಎಲ್ಲಾ ಸಹಕಾರ ಸಂಸ್ಥೆಗಳಿಗೂ ಸದಸ್ಯತ್ವ ನೀಡದೆ, ಚುನಾವಣೆ ದೃಷ್ಟಿಯಿಂದ ಅಗತ್ಯವಾದ ಸ್ವಹಿತಾಸಕ್ತಿಯಿಂದ ಕೂಡಿದ, ಸದಸ್ಯರ ಸೇರ್ಪಡೆಗೆ, ನಿರ್ಭಂಧ ವಿಧಿಸುತ್ತಿದ್ದುದರಿಂದ. ಉದಾಹರಣೆಗೆ ಒಂದು ಜಿಲ್ಲೆಯಲ್ಲಿ ಒಂದು ಸಾವಿರ ನೋಂದಾಯಿತ ಸಂಸ್ಥೆಗಳಲ್ಲಿ ಒಕ್ಕೂಟದ ಸದಸ್ಯರ ಸಂಖ್ಯೆ 200ರಿಂದ 250ಕ್ಕೆ ಸಿಮೀತವಾಗುತ್ತಿತ್ತು. ಇದರಿಂದ ಜಿಲ್ಲೆಯ ಎಲ್ಲಾ ಸಹಕಾರಿ ಸಂಸ್ಥೆಗಳು ಸದಸ್ಯತ್ವದಿಂದ ವಂಚಿತರಾಗುತ್ತಿದ್ದರು. ಈ ಉದ್ದೇಶದಿಂದ ನೋಂದಾಣಿಯಾದ ದಿನಾಂಕದಂದೇ ಸೌಹಾರ್ದ ಸಹಕಾರಿಗಳು, ಸಂಯುಕ್ತ ಸಹಕಾರಿ ಸದಸ್ಯತ್ವ ಪಡೆಯಲು ಅವಕಾಶ ಕಲ್ಪಿಸಿದೆ.

2) ಸರ್ಕಾರದಿಂದ ಸಹಾಯಧನ ಪಡೆದರೆ ಆದರ ನಿಯಂತ್ರಣದಲ್ಲಿರಬೇಕಾಗುತ್ತದೆ ಎಂದು ಸೌಹಾರ್ದ ಕಾಯಿದೆಯಡಿ ಸರ್ಕಾರದ ಸಹಾಯಧನ ಪಡೆದಿಲ್ಲ/ಪಡೆಯುವುದಿಲ್ಲವೆಂದು ಪ್ರಮಾಣ ಪತ್ರ ಸಲ್ಲಿಸುವ ಶರತ್ತು ವಿಧಿಸುವುದು. 1959ರ ಕಾಯಿದೆಯಲ್ಲಿ ಸರ್ಕಾರ ತೀರ್ಮಾನಿಸಿದರೆ ಅದು ಷೇರು ಬಂಡವಾಳ ಮಂಜೂರು ಮಾಡಿದ ದಿನಾಂಕದಂದೇ ಸದಸ್ಯತ್ವಪಡೆದಿದೆ ಎಂದು ಭಾವಿಸಲು ಕಾಯಿದೆಯಲ್ಲಿಯೇ ಅವಕಾಶವಿರುವುದರಿಂದ, ಈ ಸೇರ್ಪಡೆ ಮಾಡಲಾಯಿತು. ಹಾಗೂ ಸದಸ್ಯರೇ ನಿಯಂತ್ರಿಸಲು ತೊಡಕಾಗಬಾರದೆಂದು, ಈ ಕಾಯಿದೆಯಲ್ಲಿ ಸೇರಿಸಿದೆ.

3) ಸೌಹಾರ್ದ ಸಹಕಾರಿ ಕಾಯಿದೆಯಲ್ಲಿ ಲೆಕ್ಕ ತಪಾಸಣೆಗಾಗಿ ಸನ್ನಿದ್ದ ಲೆಕ್ಕಿಗರ ಪಟ್ಟಿ ತಯಾರಿಸಿ, ಆ ಪಟ್ಟಿಯಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಲು ಸದಸ್ಯ ಸಹಕಾರಿ ಆಡಳಿತ ಮಂಡಳಿಗೆ ಅಧಿಕಾರ ನೀಡಲಾಗಿತ್ತು, ಅದನ್ನು ಸರ್ಕಾರ ವಾಪಾಸ್ ಪಡೆದಿತ್ತು. ಈ ಪಟ್ಟಿ ತಯಾರಿಸುವ ಪರಿಕಲ್ಪನೆ 1959ರ ಕಾಯಿದೆಯಲ್ಲಿ 97ನೇ ಸಂವಿಧಾನ ತಿದ್ದುಪಡಿ ಆಗುವ ತನಕ ಸಹಕಾರ ಇಲಾಖೆಗೆ ಇರಲಿಲ್ಲ ಮತ್ತು ಎಲ್ಲಾ ಸಹಕಾರ ಸಂಸ್ಥೆಗಳ ಲೆಕ್ಕ ತಪಾಸಣೆಯನ್ನು ಆಡಿಟ್ ಇಲಾಖೆಯಲ್ಲೆ ನಡೆಸುತ್ತಿತ್ತು. ಅಂದರೆ ಸಂವಿಧಾನ ತಿದ್ದುಪಡಿಗೆ ಪೂರ್ವದಲ್ಲಿಯೇ ಸಂಯುಕ್ತ ಸಹಕಾರಿಗೆ ಸನ್ನಿದ್ದ ಲೆಕ್ಕಿಗರ ಪಟ್ಟಿ ತಯಾರಿಸುವ ಅಧಿಕಾರ ನೀಡಲಾಗಿತ್ತು.

4) ಸದಸ್ಯ ಸಹಕಾರಿಗಳ ಮಂಡಳಿಗಳು ತಪ್ಪು ಮಾಡಿದಾಗ ಅವುಗಳನ್ನು ರದ್ದುಪಡಿಸಿ ಆಡಳಿತಾಧಿಕಾರಿ ನೇಮಿಸಲು ನಿಬಂಧಕರ ಅಧಿಕಾರವನ್ನು ಸಂಯುಕ್ತ ಸಹಕಾರಿಗೆ ನೀಡಲಾಯಿತು. ಸಂವಿಧಾನ ತಿದ್ದುಪಡಿ ನಂತರ ಅಮಾನತ್ತು ಎಂಬ ಪದ ಸೇರ್ಪಡೆಯದ್ದರಿಂದ ಈ ಅಧಿಕಾರವನ್ನು ಸಂಯುಕ್ತ ಸಹಕಾರಿ ನಿರ್ವಹಿಸುತ್ತಿದೆ.

5) ಸಮಾಪನೆ ಮಾಡುವ ಅಧಿಕಾರವನ್ನು ಸಂಯುಕ್ತ ಸಹಕಾರಿಗೆ ನೀಡಲಾಗಿತ್ತು ಈಗ ಅದನ್ನು ನಿಬಂಧಕರು ನಿರ್ವಹಿಸುತ್ತಿದ್ದಾರೆ. ಸರ್ಕಾರದ ಪ್ರಾರಂಭಿಕ ಚಿಂತನೆ ಇದ್ದುದ್ದು ಸಹಕಾರಿಯ ನೋಂಧಾಣಿ/ರದ್ದಾತಿ ಹೊರತು ಪಡಿಸಿ, ಉಳಿದ ಎಲ್ಲಾ ಕರ್ತವ್ಯಗಳನ್ನು ಸಂಯುಕ್ತ ಸಹಕಾರಿ ನಿರ್ವಹಿಸಬೇಕೆಂದು. ಆದರೆ ಸಂಯುಕ್ತ ಸಹಕಾರಿ ರಚನೆಯಾದ ನಂತರ ಮಂಡಳಿಗೆ ಆಯ್ಕೆಯಾದ ನಿರ್ದೇಶಕರು ಜಾಗೃತರಾಗದೇ, ಸದಸ್ಯ ಸಹಕಾರಿಗಳಿಗೆ ಸಮರ್ಪಕ ಮಾರ್ಗದರ್ಶನ ನೀಡದೆ ಇದ್ದುದು ಸಹಕಾರಿ ಕಾರ್ಯ ನಿರ್ವಹಣೆಯಲ್ಲಿ ಚುರುಕುತನವಾಗಲಿಲ್ಲ. ಸಮರ್ಪಕ ತರಬೇತಿ ನೀಡಿದ್ದರೆ, ಸದಸ್ಯ ಸಹಕಾರಿಗಳು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿ ಅವರ ಸಂಸ್ಥೆಗಳನ್ನು ಸ್ವಾಯತ್ತ, ಸ್ವಾತಂತ್ರ ಹಾಗೂ ಸ್ವಯಂ ನಿಯಂತ್ರಕ ಸಂಸ್ಥೆಗಳನ್ನಾಗಿಸಲು ಅವಕಾಶವನ್ನು ನಿರರ್ಥಕಗೊಳಿಸಿದರು. ಇದಕ್ಕೆ ಕ್ಷೇತ್ರ ಸಿಬ್ಬಂದಿಯೂ ಒಂದು ಮುಖ್ಯ ಕಾರಣ. ಏಕೆಂದರೆ ಸೌಹಾರ್ದ ಕಾಯಿದೆ ರಚನೆಯಾದ ನಂತರ ನೇಮಕವಾದ ಸಿಬ್ಬಂದಿ, ಕಾಯಿದೆ ಆಶಯಗಳ ಬಗ್ಗೆ ಮಾರ್ಗದರ್ಶನ ನೀಡಲು ಅವರಿಗೆ ತರಬೇತಿ ವ್ಯವಸ್ಥೆ ಆಗಲೇಇಲ್ಲ. ರಾಜ್ಯ ಮಟ್ಟದಲ್ಲಿ ಮಾತ್ರ ಸಿಬ್ಬಂದಿ ನೇಮಕ ಮಾಡಲಾಯಿತೇ ಹೊರತು ಜಿಲ್ಲಾವಾರು ಕಛೇರಿಗಳು ಪ್ರಾರಂಭವಾಗಲಿಲ್ಲ.

6) ಸೌಹಾರ್ದ ಕಾಯಿದೆ ರಚನೆಯಾದಾಗ ಸರ್ಕಾರದ ಆಶಯವಿದ್ದದ್ದು 1959ರ ಕಾಯಿದೆಯಲ್ಲಿರುವ ಶೇ50ರಷಾದ್ದರೂ ಸೌಹಾರ್ದ ಕಾಯಿದೆಗೆ ವರ್ಗಾವಣೆಯಾಗಬೇಕೆಂಬ ಧೃಡನಿಲುವು ಕಾರ್ಯರೂಪಕ್ಕೆ ಬರಲಿಲ್ಲ, ಆಂದರೆ ಸಹಕಾರ ಸಂಸ್ಥೆಗಳು ನಿಬಂಧಕರ ನಿಯಂತ್ರಣದಲ್ಲಿ ಇರುವುದೇ ಕ್ಷೇಮವೆಂದು ಅಥವಾ ಮುಂದುವರೆದರೆ ರಾಜಕೀಯವಾಗಿ ಹಲವಾರು ಸವಾಲತ್ತುಗಳನ್ನು ಪಡೆಯಬಹುದೆಂಬ ನಂಬಿಕೆಯೋ. ಈಗಾಗಲೇ ತಿಳಿಸಿದಂತೆ ಸಹಕಾರಿ ಮುಖಂಡರು/ದುರೀಣರು, ನಿಭಂಧಕರ/ಸರ್ಕಾರದ ನಿಯಂತ್ರಣದಿಂದ ಮುಕ್ತಿ ನೀಡಬೇಕೆಂದು ಪ್ರತಿಪಾದಿಸುತ್ತಿದ್ದರು. ಆದರೆ ಆ ನಿಯಂತ್ರಣ ತೆಗೆದಾಗ ಏಕೆ ವರ್ಗಾವಣೆಯಾಗಲಿಲ್ಲ ಎಂಬುದೇ ಒಂದು ವಿಡಂಬಣೆ. ಉದಾಹರಣೆಗೆ ರಾಜ್ಯದಲ್ಲಿ ಈಗ ಸುಮಾರು 15000 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ ಅವುಗಳಿಗೆ ಸರ್ಕಾರದಿಂದ ಯಾವುದೇ ಪಾಲು ಬಂಡವಾಳ ಪಡೆಯುತ್ತಿಲ್ಲ ಸಹಾಯಧನ ಪರೋಕ್ಷವಾಗಿ ರಾಷ್ಟ್ರ ಕ್ಷೇಮಭಿವೃದ್ಧಿ ಮಂಡಳಿ ಮುಖಾಂತರ ಮೂಲ

ಸೌಲಭ್ಯ ಕಲ್ಪಿಸಲಾಗುತ್ತಿದೆ. ಈ ಸೌಲಭ್ಯವಾದರೂ ಎಲ್ಲಾ ಮೂಲ ಸೌಕರ್ಯವನ್ನು ಕ್ಷೀರ ಅಭಿವೃದ್ಧಿ ಮಂಡಳಿಯೇ ನಿರ್ವಹಿಸುತ್ತಿದೆ. ಈ ಎಲ್ಲಾ ಸಹಕಾರ ಸಂಘಗಳು ಸೌಹಾರ್ದ ಕಾಯಿದೆಗೆ ಬರಬೇಕಿತ್ತು. ಇತ್ತೀಚಿಗೆ ಪ್ರಾಥಮಿಕ ಹಾಲು ಉತ್ಪಾದಕರ ಸದಸ್ಯರಿಗೆ ಸರ್ಕಾರ ಪ್ರತಿ ಲೀಟರ್ ಹಾಲಿಗೆ ರೂ 5ನ್ನು ಸಹಾಯ ಧನ ನೀಡುತ್ತಿದ್ದರೂ (ಮಂಜೂರು/ಮಾಡುತ್ತಿದ್ದರೂ) ಜಿಲ್ಲಾ ಹಾಲು ಒಕ್ಕೂಟಗಳು ಸರ್ಕಾರದಿಂದ ನೇರ ಸಹಾಯಧನ ಪಡೆಯುತ್ತಿಲ್ಲ (ಪ್ರತಿ ಲೀಟರ್ ಹಾಲಿಗೆ ಸಂಸ್ಕರಣ ವೆಚ್ಚವೆಂದು ಬರಿಸುತ್ತಿತ್ತು.) ಈಗ ಹಾಲಿನ ದರ ಹೆಚ್ಚಿಸಲು ಸರ್ಕಾರದ ಒಪ್ಪಿಗೆ ಬೇಕೆಂಬ ಭಾವನೆ ಬೆಳೆಸಿಕೊಂಡಿದ್ದಾರೆ ಸೌಹಾರ್ದ ಕಾಯಿದೆಗೆ ವರ್ಗಾವಣೆ ಹೊಂದಿದರೆ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ದರ ನಿಗದಿ ಪಡಿಸುವ ಅಧಿಕಾರ ಮಂಡಳಿಗೆ ಒಳಪಡುತ್ತಿತ್ತು. ಅದೇ ರೀತಿ ಪಟ್ಟಣ ಸಹಕಾರ ಬ್ಯಾಂಕ್‌ಗಳಿಗೆ ಸರ್ಕಾರದ ನೆರವು ಇಲ್ಲ, ಅದರೂ 20ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಬ್ಯಾಂಕ್‌ಗಳು ಸೌಹಾರ್ದ ಕಾಯಿದೆಗೆ ವರ್ಗಾವಣೆ ಹೊಂದಿದೆ.

ಈ ಕಾಯಿದೆ ರಚನೆ ಮಾಡುವಾಗ ವಿಧಾನ ಮಂಡಳ ರೂಪಿಸಿದ ಧ್ಯೇಯೋಧೇಶಗಳು ಈ ಕೆಳಕಂಡಂತೆ ಇದೆ.

“ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಾಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೇರವಿನ ಆಧಾರಿತವಾಗಿ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವವಲಾಂಬಿ ಆರ್ಥಿಕ ಉದ್ದೇಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳು ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಈ ಮೇಲ್ಕಂಡ ಧ್ಯೇಯೋಧೇಶಗಳ ನೇರವೇರಿಸುವುದಕ್ಕಾಗಿ ಕಾಯಿದೆಯಲ್ಲಯೇ ಪ್ರಜಾಪ್ರಭುತ್ವದಡಿ ರಚನೆಯಾದ “ಸಂಯುಕ್ತ ಸಹಕಾರಿ” ಎಂಬ ಸಂಸ್ಥೆಯನ್ನು ಸದಸ್ಯ ಸಹಕಾರಿಗಳಿಗೆ ಮಾರ್ಗದರ್ಶಕ, ಸ್ನೇಹಿತ ಹಾಗೂ ತತ್ವಜ್ಞಾನಿ ಎಂಬ ಜವಾಬ್ದಾರಿ ನೀಡಿ ನಿಬಂಧಕರು ನಿರ್ವಹಿಸುತ್ತಿದ್ದ ಬಹಳಷ್ಟು ಶಾಸನತ್ಮಾಕ ಅಧಿಕಾರಗಳನ್ನು, ಈ ಸಂಯುಕ್ತ ಸಹಕಾರಿಗೆ ನೀಡಿದೆ. ಸರ್ಕಾರದ ಈ ಉದ್ದೇಶವನ್ನು ಅಲ್ಲಾಗಳೆಯಲಾಗದು. ಆದರೆ, ಚುನಾಯಿತ “ಸಂಯುಕ್ತ ಸಹಕಾರಿ” ಮಂಡಳಿ ಪ್ರಾರಂಭದಿಂದಲೇ ಈ ಜವಾದ್ದಾರಿಯನ್ನು ನಿರ್ವಹಿಸಿದ್ದರೆ, ಈ ಉದಾರೀಕೃತ ಕಾಯಿದೆಯ ಬೆಳವಣಿಗೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಆಗುತಿತ್ತು. ಇದರ ಜೊತೆಗೆ ಸದಸ್ಯ ಸಹಕಾರಿಗಳು ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿದ್ದರೆ, ದೊಡ್ಡಮಟ್ಟದ ಬೆಳವಣಿಗೆ ಆಗುತ್ತಿತ್ತು. ಕೇಲವು ಸಹಕಾರಿಗಳು ಈ ಕಾಯಿದೆಯಲ್ಲಿ ನೀಡಿದ ಸ್ವಾಯತತೆಯನ್ನು “ಸ್ವೇಚ್ಚತೆ” ಎಂದು ಭಾವಿಸಿ ಕಾರ್ಯನಿರ್ವಹಿಸಿದ್ದರಿಂದ ಕೆಟ್ಟ ಪ್ರಚಾರವನ್ನು ಪಡೆದಿದ್ದೆ. ಸದಸ್ಯರ ಆರ್ಥಿಕ ಬೆಳವಣಿಗೆಗೆ ಸಹಕಾರಿ ಯಾಗುವ ಕಾರ್ಯಕ್ರಮ ರೂಪಿಸಿಕೊಂಡಿದ್ದರೆ, ಮತ್ತು ಈ ಸ್ವೇಚ್ಚತೆ ಪ್ರದರ್ಶಿಸಿದ ಸದಸ್ಯ ಸಹಕಾರಿಗಳ ಮೇಲೆ ಸಂಯುಕ್ತ ಸಹಕಾರಿ ತುರ್ತು ಕ್ರಮ ಜರುಗಿಸಿದ್ದರೆ, ಈ ಕಾಯಿದೆ ಹೆಸರಿಗೆ ಚ್ಯುತಿ ಬರುತ್ತಿರಲಿಲ್ಲ. ಈಗಾಲೂ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳ ಕಾರ್ಯ ನಿರ್ವಹಣೆಯಲ್ಲಿ ಚ್ಯುತಿ ಕಂಡ ತಕ್ಷಣ ಅಂತಹ ನ್ಯೂನತೆ ಸಡಿಪಡೆಸಲು ಕ್ರಮ ಜರುಗಿಸಿದರೆ, ಈ ಕಾಯಿದೆಯ ಶ್ರೇಷ್ಠತೆಯನ್ನು ಕಾಣಬಹುದು.

ಚುನಾಯಿತ ಸಹಕಾರಿ ಮಂಡಳಿ ಸದಸ್ಯರು ಮತ್ತು ಸದಸ್ಯ ಸಹಕಾರಿ ಸಂಸ್ಥೆಗಳು ಜಾಗೃತರಾಗಿದ್ದರೆ ಈ ಸೌಹಾರ್ದ ಕಾಯಿದೆಯನ್ನು ಸದುಪಯೋಗ ಪಡಿಸಿಕೊಳ್ಳುವ ಅವಕಾಶವಿದೆ. ಏಕೆಂದರೆ, ವಿಧಾನ ಸಭೆ ಮತ್ತು ಲೋಕಸಭೆಗೆ ಆಯ್ಕೆಯಾದ ವ್ಯಕ್ತಿಗಳು ಚುನಾವಣೆ ಮೂಲಕ ಅವರ ಸ್ಥಾನ ಪಡೆಯುತ್ತಾರೆ ಆದರೂ, ರಾಜ್ಯ ಮತ್ತು ರಾಷ್ಟ್ರವನ್ನು ಮುನ್ನಡೆಸಲು ಅವಶ್ಯಕ ಮಾರ್ಗದರ್ಶನ ನೀಡಲು ನುರಿತ ಅಧಿಕಾರಿಗಳ ಮಾರ್ಗದರ್ಶನ ಸಿಗುತ್ತದೆ. ಆದರೆ ಸಂಯುಕ್ತ ಸಹಕಾರಿಗೆ ಪ್ರಾರಂಭಿಕ ಹಂತದಲ್ಲಿ ಇಂತಹ ಮಾರ್ಗದರ್ಶನ ನೀಡುವ ಸಿಬ್ಬಂದಿ ಸಿಗದೆ ಇದುದರಿಂದ, ಈ ಕಾಯಿದೆ ಯಸಶ್ವಿಗೆ ಶ್ರಮಿಸಲಿಲ್ಲ. ರಾಷ್ಟ್ರದಲ್ಲಿಯೇ ಈ ಸೌಹಾರ್ದ ಕಾಯಿದೆ ಮಾದರಿ ಕಾಯಿದೆ ಯಾಗುವುದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇರಲಾರದು. ಖಾಸಗಿಕರಣದತ್ತ ಕೇಂದ್ರ ಸರ್ಕಾರದ ನೀತಿಗೆ ಪೂರಕವಾಗಿ ಸ್ವಾಯತ್ತ ಸಹಕಾರಿ ಸಂಸ್ಥೆಗಳಿಗೆ ಉತ್ತೇಜನೆ ನೀಡಿದರೆ ರಾಷ್ಟ್ರ/ರಾಜ್ಯಕಟ್ಟುವ ಕೆಲಸವನ್ನು ಮಾಡಲು ಸಾಧ್ಯ.

ಚೌದರಿ ಬ್ರಹ್ಮಪ್ರಕಾಶ ವರದಿಯಲ್ಲಿ ಈ ಮೇಲ್ಕಂಡ ನೀತಿಗೆ ಪೂರಕವಾಗಿ ನಿಬಂಧಕರ ಅಧಿಕಾರವನ್ನು ಸೀಮೀತಗೊಳಿಸಿದರೆ. ಹಾಗೂ ನಿಬಂಧಕರಿಗೆ

1) ಆಡಳಿತ ಮಂಡಳಿ ರದ್ದತಿ 2) ಸಂಘಗಳ ಒಟ್ಟೂಗೂಡಿಸುವಿಕೆ 3) ಉಪವಿಧಿಗಳ ತಿದ್ದುಪಡಿ ಅಧಿಕಾರ 4) ಮಂಡಳಿ ತೀರ್ಮಾನಗಳನ್ನು ರದ್ದುಪಡಿಸುವುದು. 5) ಸಂಘಗಳಿಗೆ ನಿರ್ದೇಶನ ನೀಡುವ ಅಧಿಕಾರ ನಿಬಂಧಕರಿಗೆ ಇರತಕ್ಕದ್ದಲ್ಲವೆಂದು ಮತ್ತು ಈ ಎಲ್ಲಾ ಅಧಿಕಾರಗಳನ್ನು ರಾಜ್ಯ ಮಟ್ಟದ ಮಹಾಮಂಡಳಗಳು ನಿರ್ವಹಿಸುವಂತೆ ಶಿಫಾರಸ್ಸುಮಾಡಿದೆ. ಅಂದರೆ ಈ ಮೇಲಿನ ಅಂಶಗಳ ಆಧಾರದಲ್ಲಿಯೇ ಕರ್ನಾಟಕ ರಾಜ್ಯ ಸರ್ಕಾರ ರಾಜ್ಯ ಮಟ್ಟದಲ್ಲಿ ಕಾಯಿದೆಯಲ್ಲಿಯೇ ಸೃಷ್ಟಿಸಿದ “ಸಂಯುಕ್ತ ಸಹಕಾರಿ” ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಆ ಮಂಡಳಿಗೆ ನಿಬಂಧಕರು ನಿರ್ವಹಿಸುತ್ತಿದ್ದ ಶಾಸನಾತ್ಮಕ ಅಧಿಕಾರಗಳನ್ನು ನೀಡುವುದರ ಜೊತೆಗೆ, ಸಂಯುಕ್ತ ಸಹಕಾರಿಯನ್ನು ದಾರ್ಶನಿಕ ತತ್ವಜ್ಞಾನಿ ಹಾಗೂ ಸ್ನೇಹಿತನಂತೆ ಕಾರ್ಯನಿರ್ವಹಿಸುವ ಜವಾದ್ದಾರಿ ನೀಡಿದೆ. ಇದನ್ನು ಕೇಂದ್ರ ಸರ್ಕಾರದ ಸಹಕಾರಿ ಸಚಿವರಿಗೆ ತಿಳಿಸುವ ಪ್ರಯತ್ನ.

ಇದನ್ನು ಕೇಂದ್ರ ಸಹಕಾರ ಸಚಿವರಿಗೆ ತಿಳಿಸುವ ಪ್ರಯತ್ನ ಅವಶ್ಯಕ. ಕೇಂದ್ರ ಸಹಕಾರ ಸಚಿವರ ಅಭಿಪ್ರಾಯದಲ್ಲಿ ಸೌಹಾರ್ದ ಸಹಕಾರಿಗಳು ವಿಸ್ತೃತ ಚಟುವಟಿಕೆಗಳನ್ನು ಹಮ್ಮಿಕೊಂಡು ಸಹಕಾರ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಕಾರ್ಯನಿರ್ವಹಿಸಬೇಕೆಂಬ ಸಲಹೆ ಉತ್ತಮವಾಗಿದೆ.

# ಶತಾಯುರ್ವಜ್ರದೇಹಾಯ ಸರ್ವಾರಿಷ್ಟವಿನಾಶಾಯ ನಿಂಬಕಂದಳ ಭಕ್ಷಣಂ- ಶೋಭನನಾಮ ಸಂವತ್ಸರ

– ಶ್ರೀ ಪಾಲರಾಜ್ ಎ, ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಬದಲಾವಣೆ ಜಗದ ನಿಯಮ ಎಂಬ ಮಾತಿದೆ. ಬದಲಾವಣೆಯೊಂದೇ ಶಾಶ್ವತ ಎನ್ನುವ ಮಾತೂ ಉಂಟು. ಬದಲಾವಣೇ ನಮ್ಮ ಗಮನಕ್ಕೆ ಬರುತ್ತಿರುತ್ತದೆ. ಇದು ಭೌತಿಕ ಬದಲಾವಣೆಯೂ ಆಗಿರಬಹುದು; ಭಾವನಾತ್ಮಕ ಬದಲಾವಣೆಯೂ ಆಗಿರಬಹುದು; ಬೌದ್ಧಿಕ ಬದಲಾವಣೆಯೂ ಆಗಿರಬಹುದು. ಕೆಲವೊಂದು ಬದಲಾವಣೆಗಳನ್ನು ಸುಲಭವಾಗಿ ಗುರುತಿಸಬಹುದು; ಮತ್ತೆ ಕೆಲವೊಂದನ್ನು ಗುರುತಿಸಲು ಕಷ್ಟವಾಗಬಹುದು. ಆದರೆ ನಮಗೆ ಗುರುತಿಸಲು ಆಗಲೀ, ಆಗದಿರಲೀ ಬದಲಾವಣೆಯಂತೂ ನಡೆಯುತ್ತಲೇ ಇರುತ್ತದೆ. ನಮ್ಮ ಪ್ರಕೃತಿಯಲ್ಲಿ, ಎಂದರೆ ಸ್ವಭಾವದಲ್ಲಿ ನಡೆಯುವ ಬದಲಾವಣೆಯನ್ನು ಗುರುತಿಸಲು ಕಷ್ಟವಾಗಬಹುದು; ಆದರೆ ಪ್ರಕೃತಿಯಲ್ಲಿ, ಎಂದರೆ ಸೃಷ್ಟಿಯಲ್ಲಿ ನಡೆಯುವ ಬದಲಾವಣೆಗಳನ್ನು ಸುಲಭವಾಗಿ ಗಮನಿಸಬಹುದಾಗಿದೆ. ನಮ್ಮ ಪರಿಸರದಲ್ಲಿರುವ ಗಿಡ ಮರಗಳನ್ನು ನೋಡುತ್ತಿದ್ದರೆ ಪ್ರಕೃತಿಯಲ್ಲಿ ಎಷ್ಟೆಲ್ಲ ಬದಲಾವಣೆಗಳು ನಡೆಯುತ್ತಿರುತ್ತವೆ ಎನ್ನುವುದು ಸ್ವಲ್ಪವಾದರೂ ಅರ್ಥವಾಗಬಹುದು. ಯುಗಾದಿಯನ್ನು ಪ್ರಪಂಚದಾದ್ಯಂತ ಆಚರಣೆ ಮಾಡಲಾಗುತ್ತದೆ ಅದರಲ್ಲೂ ಆಂಧ್ರಪ್ರದೇಶ ಮತ್ತು ಕರ್ನಾಟಕದ ಜನರು ಹೊಸ ವರ್ಷವೆಂದು ನಂಬಿದ್ದಾರೆ. ಹಿಂದೂ ಕ್ಯಾಲೆಂಡರ್ನ ಪ್ರಕಾರ ತಿಂಗಳ ಚೈತ್ರದ ಆರಂಭವನ್ನು ಗುರುತಿಸುವುದರಿಂದ ಇದನ್ನು ಮಂಗಳಕರ ದಿನವೆಂದು ಪರಿಗಣಿಸಲಾಗುತ್ತದೆ. ಯುಗಾದಿಯ ತಯಾರಿಯು ಬಹಳ ಉತ್ಸಾಹದಿಂದ ಕೂಡಿರುತ್ತದೆ,

ಯುಗಾದಿ ಹಬ್ಬವನ್ನು ಪ್ರಪಂಚದಾದ್ಯಂತ ವಿವಿಧ ಹೆಸರುಗಳಲ್ಲಿ ಆಚರಣೆ ಮಾಡಲಾಗುತ್ತದೆ. ಈ ಹಬ್ಬವು ಹೊಸ ಯುಗದ ಆರಂಭ ಮತ್ತು ಸುಗ್ಗಿಯ ಸಮಯವನ್ನು ಸಂಕೇತಿಸುತ್ತದೆ. ಸಡಗರ ಮತ್ತು ಸಂಭ್ರಮವನ್ನು ಹೊತ್ತು ತರುವ ಹಬ್ಬ ಯುಗಾದಿ. ಯುಗಾದಿ ಅಂದರೆ ಹೊಸ ವರ್ಷದ ಮೊದಲ ದಿನ ಎಂದರ್ಥ. ಇಡೀ ವರ್ಷಕ್ಕೆ ಬೇಕಾದ ಯೋಜನೆಯನ್ನು ಹಾಕಿಕೊಂಡು ಅದಕ್ಕೆ ಅನುಗುಣವಾಗಿ ನಡೆಯುವ ಶುಭಸಂಕಲ್ಪವನ್ನು ಮಾಡಿಕೊಳ್ಳುವ ದಿನವೇ ಯುಗಾದಿ. ಹಿಂದಿನ ವರ್ಷದ ಸಾಧನೆಯನ್ನು ಪರಿಶೀಲಿಸಿ, ಈ ವರ್ಷಕ್ಕೆ ಬೇಕಾದ ಸಂವಿಧಾನನ್ನು ವಿಧಾಯ ಪೂರ್ವಕವಾಗಿ ಹಾಕಿಕೊಳ್ಳುವ ದಿನ. ವೇದಗಳ ಮಂತ್ರದಲ್ಲಿ ವರ್ಷವನ್ನು ರಥಕ್ಕೂ, ಉತ್ತರಾಯಣ, ದಕ್ಷಿಣಾಯಣಗಳನ್ನು ಅದರ ಚಕ್ರಗಳಿಗೂ ಹೋಲಿಸಲಾಗಿದೆ. ಆದ್ದರಿಂದ ವರ್ಷವನ್ನು ಯುಗ ಎಂದೂ, ಅದರ ಮೊದಲನೆಯ ದಿನವನ್ನು ಯುಗಾದಿ ಎಂದೂ ಕರೆಯಲಾಗುತ್ತದೆ.

ಸಂಸ್ಕೃತದ ಯುಗ ಮತ್ತು ಆದಿ ಎಂಬ ಎರಡು ಪದಗಳಿಂದ 'ಯುಗಾದಿ' ಎಂಬ ಪದ ವ್ಯುತ್ಪತ್ತಿಯಾಗಿದೆ. ಈ ಯುಗಾದಿ ಕೃತಯುಗದ ಚೈತ್ರ, ಶುದ್ಧ, ಪಾಡ್ಯ, ತಿಥಿ ದಿನದಂದು ಪ್ರಾರಂಭವಾಯಿತು ಎಂಬ ಪ್ರತೀತಿ ಇದೆ. ಜೊತೆಗೆ ಬ್ರಹ್ಮ ದೇವನು ಆ ದಿನದಿಂದಲೇ ಸೃಷ್ಟಿಯ ಕಾರ್ಯ ಆರಂಭಿಸಿದನೆಂಬ ನಂಬಿಕೆಯೂ ಇದೆ. ಋತುಗಳು, ಗ್ರಹಗಳು, ನಕ್ಷತ್ರಗಳು ಈ ದಿನ ಸೃಷ್ಟಿ ಆಯಿತು ಎನ್ನುವ ನಂಬಿಕೆಯೂ ಇದೆ. ಯುಗಾದಿ ಹಬ್ಬವನ್ನು ಆಯಾ ಪ್ರದೇಶಕ್ಕೆ ಅನುಗುಣವಾಗಿ ಜನ ಚಾಂದ್ರಮಾನ ಮತ್ತು ಸೌರಮಾನ ಯುಗಾದಿ ಆಚರಿಸುತ್ತಾರೆ. ಹುಣ್ಣಿಮೆ ದಿನ ಚಂದ್ರನು ಯಾವ ನಕ್ಷತ್ರದಲ್ಲಿ ಇರುವನೋ ಆ ನಕ್ಷತ್ರದ ಹೆಸರಿನಿಂದ ಆ ಮಾಸ ಆರಂಭವಾಗುತ್ತದೆ.

ಬೇವು ಬೆಲ್ಲ ಸೇವಿಸಬೇಕು ಯುಗಾದಿ ಹಬ್ಬದ ದಿನ ಬೇವು ಬೆಲ್ಲ ಸೇವಿಸಿ ಇತರರಿಗೆ ಹಂಚುವ ವಿಶೇಷ ಸಂಪ್ರದಾಯವಿದೆ. ಬೇವು ಬೆಲ್ಲ ಸೇವಿಸುವ ಆಚರಣೆಯು ಇಡೀ ಮನುಕುಲಕ್ಕೆ ಒಂದು ಪಾಠವನ್ನ ಹೇಳುತ್ತದೆ. ಜೀವನದಲ್ಲಿ ಎದುರಾಗುವ ಸುಖ ದುಃಖವನ್ನು, ನೋವು ನಲಿವನ್ನು ಸಮನಾಗಿ ಸ್ವೀಕರಿಸಬೇಕು. ಇದರ ಜೊತೆಗೆ ಬೇವು ಬೆಲ್ಲಕ್ಕೆ ವಿಶೇಷವಾದ ಔಷಧಿ ಗುಣಗಳು ಇರುವುದನ್ನು ಆಯುರ್ವೇದದಲ್ಲಿ ಉಲ್ಲೇಖಿಸಲಾಗಿದೆ. ಬೇವು ಬೆಲ್ಲ ಸ್ವೀಕರಿಸಿದರೆ ಶರೀರ ವಜ್ರಕಾಯವಾಗುತ್ತೆಂಬ ಮಾತನ್ನು ವೇದಗಳಲ್ಲಿ ಉಲ್ಲೇಖಿಸಲಾಗಿದೆ. ಆ ಕುರಿತಾದ ಒಂದು ಶ್ಲೋಕವು ಹೀಗಿದೆ. ಶತಾಯುರ್ವಜ್ರದೇಹಾಯ ಸರ್ವಾರಿಷ್ಟವಿನಾಶಾಯ ನಿಂಬಕಂದಳ ಭಕ್ಷಣಂ. ಈ ಶ್ಲೋಕವನ್ನ ಬೆವು ಬೆಲ್ಲ ಸೇವಿಸುವಾಗ ಹೇಳಿಕೊಳ್ಳಬೇಕೆಂಬ ಮಾತನ್ನು ಶಾಸ್ತ್ರಗಳಲ್ಲಿ ಉಲ್ಲೇಖಿಸಲಾಗಿದೆ.

## ಯುಗಾದಿಯ ಇತಿಹಾಸ :

ಯುಗಾದಿ ಎಂಬ ಪದವು ಸಂಸ್ಕೃತ ಪದಗಳಾದ ಯುಗ (ಯುಗ) ಮತ್ತು ಆದಿ (ಆರಂಭ) ಇಂದ ಬಂದಿದೆ, ಇದರರ್ಥ "ಹೊಸ ಯುಗದ ಆರಂಭ". ಹಿಂದೂ ಪುರಾಣಗಳ ಪ್ರಕಾರ ರಾಕ್ಷಸ ಸೋಮಕಾಸುರನು ಬ್ರಹ್ಮನಿಂದ ವೇದಗಳನ್ನು ಕದ್ದು ಸಮುದ್ರದಲ್ಲಿ ಬಚ್ಚಿಟ್ಟನೆಂದು ನಂಬಲಾಗಿದೆ. ರಾಕ್ಷಸನಿಂದ ವೇದಗಳನ್ನು ಹಿಂಪಡೆಯಲು ಭಗವಾನ್ ಬ್ರಹ್ಮನು ವಿಷ್ಣುವಿನ ಸಹಾಯವನ್ನು ಕೋರಿದನು. ಅವನು ಮತ್ಸ್ಯ (ಮತ್ಸ್ಯಾವತಾರ) ರೂಪವನ್ನು ತೆಗೆದುಕೊಂಡು ರಾಕ್ಷಸನನ್ನು ಕೊಂದ ನಂತರ ಬ್ರಹ್ಮನಿಗೆ ವೇದಗಳನ್ನು ಮರಳಿ ನೀಡಿದನು. ಯುಗಾದಿಯ ದಿನದಂದು ಬ್ರಹ್ಮನು ಬ್ರಹ್ಮಾಂಡವನ್ನು ಸೃಷ್ಟಿಸಿದನು. ಯುಗಾದಿಯು ಇಡೀ ವರ್ಷದ ಮೊದಲ ದಿನ ಮತ್ತು ನಮ್ಮ ಒಂದು ವರ್ಷವು ಬ್ರಹ್ಮ ದೇವರಿಗೆ ಅರ್ಪಿಸುವ ಒಂದು ದಿನಕ್ಕೆ ಸಮಾನವಾಗಿರುತ್ತದೆ. ಪ್ರತಿ ವರ್ಷ ಬ್ರಹ್ಮ ದೇವನು ಈ ಮಂಗಳಕರ ದಿನದಂದು ತನ್ನ ದಿನವನ್ನು ಪ್ರಾರಂಭಿಸುತ್ತಾನೆ ಮತ್ತು ಜನರ ಭವಿಷ್ಯವನ್ನು ಬರೆಯುತ್ತಾನೆ. ಪ್ರಸ್ತುತ – 2023 ರ ಯುಗಾದಿ ವರ್ಷವನ್ನು 'ಶೋಭಾನಾ ಸಂವತ್ಸರ' ಎಂದು ಕರೆಯಲಾಗುತ್ತದೆ.

## ಚೈತ್ರಮಾಸದ ಮೊದಲ ದಿನವಾದ ಯುಗಾದಿ

ಚೈತ್ರಮಾಸದ ಮೊದಲ ದಿನವಾದ ಯುಗಾದಿಯಂದು

ಮನೆಮಂದಿಯೆಲ್ಲಾ ನಸುಕಿನಲ್ಲಿ ಎದ್ದು ಎಣ್ಣೆ ಹಾಗೂ ಬೇವಿನೆಲೆಗಳನ್ನು ಸ್ನಾನದ ನೀರಿಗೆ ಹಾಕಿಕೊಂಡು ಅಭ್ಯಂಜನ ಮಾಡುವುದು ಅದೆಂತಹಾ ಸುಖಾನುಭವ ಅಂತೀರಿ!!. ಹಬ್ಬಕ್ಕೆಂದು ತಂದ ಹೊಸಬಟ್ಟೆ ತೊಟ್ಟು ಸೂರ್ಯನಮಸ್ಕಾರದೊಂದಿಗೆ ಇಷ್ಟ ದೇವರ ಪೂಜೆ ಪುನಸ್ಕಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಮೂಲಕ ನೂತನ ವರ್ಷಾಚರಣೆಯ ಸ್ವಾಗತವನ್ನು ಮಾಡಿಕೊಳ್ಳಲಾಗುತ್ತದೆ.

**ಯುಗಾದಿಯ ಮಹತ್ವ :**

ಯುಗಾದಿಯು ಹಿಂದೂಗಳ ಪ್ರಮುಖ ಹಬ್ಬವಾಗಿದೆ ಮತ್ತು ಇದು ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ಪ್ರದೇಶಗಳಲ್ಲಿ ಜನಪ್ರಿಯವಾಗಿದೆ. ನಾವು ಪ್ರತಿ ವರ್ಷ ಜನವರಿ 1 ರಂದು ಹೊಸ ವರ್ಷವನ್ನು ಆಚರಿಸಿದರೆ, ಈ ಪ್ರದೇಶಗಳ ಜನರು ತಮ್ಮ ಹಿಂದೂ ಕ್ಯಾಲೆಂಡರ್ ಅನ್ನು ಅವಲಂಬಿಸಿ ತಮ್ಮ ಹೊಸ ವರ್ಷವನ್ನು ಮಾರ್ಚ್ ಅಥವಾ ಏಪ್ರಿಲ್ನಲ್ಲಿ ಆಚರಿಸುತ್ತಾರೆ. ಚೈತ್ರ ಮಾಸದಲ್ಲಿ ಹೊಸ ವರ್ಷದ ಆರಂಭವನ್ನು ಗುರುತಿಸಲು ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ಸಮಯದಲ್ಲಿ ಪ್ರಕೃತಿಯು ತಾಜಾ ಹೂವುಗಳು ಮತ್ತು ಹಸಿರಿನಿಂದ ಕೂಡಿರುತ್ತದೆ. ವಸಂತಕಾಲದ ಆಗಮನದೊಂದಿಗೆ ಪ್ರಕೃತಿಯಲ್ಲಿ ಎಲ್ಲವೂ ಸಂತೋಷದಿಂದ ಕಾಣುತ್ತದೆ ಮತ್ತು ಹೊಸ ವರ್ಷವನ್ನು ಆಚರಿಸಲು ಇದಕ್ಕಿಂತ ಉತ್ತಮ ಸಮಯವಿಲ್ಲ ಎಂದು ಜನರು ನಂಬುತ್ತಾರೆ. ಮನೆ, ವಾಹನ ಅಥವಾ ಅಂಗಡಿ ಖರೀದಿಯಂತಹ ಹೊಸ ಉದ್ಯಮಗಳನ್ನು ಪ್ರಾರಂಭಿಸಲು ಈ ದಿನವನ್ನು ಪವಿತ್ರವೆಂದು ಪರಿಗಣಿಸಲಾಗುತ್ತದೆ. ಯುಗಾದಿ ಹಬ್ಬವು ನಮಗೆ ಬಂದದ್ದನ್ನೆಲ್ಲ ಸ್ವೀಕರಿಸಿ ಒಳ್ಳೆಯ ಮತ್ತು ಕೆಟ್ಟದ್ದನ್ನು ಸಕಾರಾತ್ಮಕ ಮನೋಭಾವದಿಂದ ಎದುರಿಸುವ ಸರಳ ಸಂದೇಶವನ್ನು ನೀಡುತ್ತದೆ. ಯುಗಾದಿಯಂದು ಜನರು ಉತ್ತಮ ಆರೋಗ್ಯ ಮತ್ತು ಸಮೃದ್ಧಿಗಾಗಿ ದೇವರನ್ನು ಪ್ರಾರ್ಥಿಸುತ್ತಾರೆ. ಇದಲ್ಲದೆ ಜನರು ಬೆಲ್ಲ ಮತ್ತು ಬೇವಿನ ಎಲೆಗಳನ್ನು ಸಮಾನ ಪ್ರಮಾಣದಲ್ಲಿ ಹಂಚುತ್ತಾರೆ, ಅಂದು ದೇವರು ಮತ್ತು ಕುಟುಂಬದ ಹಿರಿಯರಿಂದ ಆಶೀರ್ವಾದವನ್ನು ಪಡೆಯುತ್ತಾರೆ. ಬೆಲ್ಲ ಮತ್ತು ಬೇವಿನ ಎಲೆಗಳನ್ನು ಹಂಚಿಕೊಳ್ಳುವುದು ಜೀವನದ ಒಳ್ಳೆಯ ಮತ್ತು ಕೆಟ್ಟ ಹಂತಗಳನ್ನು ಸಮಾನವಾಗಿ ಸ್ವೀಕರಿಸುವ ಸಂಕೇತವಾಗಿದೆ. ಹಬ್ಬದ ದಿನದಂದು ಮಹಿಳೆಯರು ಹಸಿ ಮಾವು, ತೆಂಗಿನಕಾಯಿ, ಹುಣಸೆಹಣ್ಣು, ಬೆಲ್ಲ ಇತ್ಯಾದಿಗಳಿಂದ ವಿಶೇಷ ಭಕ್ಷ್ಯಗಳನ್ನು ಮಾಡುತ್ತಾರೆ. ಭಕ್ಷ್ಯಗಳು ಸಾಮಾನ್ಯವಾಗಿ ಸಿಹಿ, ಕಹಿ, ಉಪ್ಪು ಮತ್ತು ಸೋರ್ನಂತಹ ವಿಭಿನ್ನ ರುಚಿಗಳನ್ನು ಒಳಗೊಂಡಿರುತ್ತವೆ. ಇದು ಒಳ್ಳೆಯ ಮತ್ತು ಕೆಟ್ಟ ದಿನಗಳನ್ನು ಒಳಗೊಂಡಂತೆ ನಮ್ಮ ಜೀವನದ ವಿವಿಧ ಹಂತಗಳ ಸಂಕೇತವಾಗಿದೆ. ಅಲ್ಲದೆ ಜಾನಪದ ಸಮುದಾಯಗಳು ಸಾಹಿತ್ಯದ ಔತಣಕೂಟಗಳನ್ನು ನಡೆಸುತ್ತವೆ ಮತ್ತು ಅರ್ಥಪೂರ್ಣ ಕವಿತೆಗಳನ್ನು ಓದುತ್ತವೆ. ಮೂಲಭೂತವಾಗಿ ಯುಗಾದಿಯು ಪೂರ್ಣ ಸಂತೋಷದಿಂದ ಮತ್ತು ಧಾರ್ಮಿಕ ಮನೋಭಾವದಿಂದ ಆಚರಿಸಲಾಗುವ ಹಬ್ಬವಾಗಿದೆ.

ವೇದಗಳ ಪ್ರಕಾರ ಧರ್ಮಗ್ರಂಥಗಳ ಪ್ರಕಾರ ಯುಗಾದಿ ಹಬ್ಬವು ಹಲವು ಮಹತ್ತರಗಳಿಗೆ ಸಾಕ್ಷಿಯಾಗಿದೆ. ಬ್ರಹ್ಮ ದೇವ ಈ ಜಗತ್ತನ್ನು ಚೈತ್ರ ಶುಕ್ಲ ಪ್ರತಿಪದೆ ಅಂದ್ರೆ ಯಗಾದಿಯಂದು, ಸೂರ್ಯೋದಯ ಕಾಲಕ್ಕೆ ಸೃಷ್ಟಿಸಿದನಂತೆ. ಬ್ರಹ್ಮ ದೇವನು ಅಂದೇ ಗ್ರಹ, ನಕ್ಷತ್ರ, ಮಾಸ, ಋತು, ವರ್ಷಾಧಿಪತಿಯನ್ನ ಸೃಷ್ಟಿಸಿ ಕಾಲಗಣನೆಯನ್ನು ಆರಂಭಿಸಿದ. ನಂತರ ಜೀವರಾಶಿ, ಜಲರಾಶಿ, ಸಸ್ಯರಾಶಿ ಬೆಟ್ಟ ಗುಡ್ಡಗಳನ್ನ ಸೃಷ್ಟಿಸಲು ಆರಂಭಿಸಿದ ಎಂದು ಪುರಾಣಗಳಲ್ಲಿ ಹೇಳಲಾಗಿದೆ.

ಯುಗ ಯುಗಗಳಿಂದ ಆಚರಿಸಿಕೊಂಡು ಬರುತ್ತಿರುವ ಪ್ರಕೃತಿಯಲ್ಲಿ, ಜೀವ ಸಂಕುಲದಲ್ಲಿ ಬದಲಾವಣೆ ತರುವ ಯುಗಾದಿ ಹಬ್ಬದ ಆಚರಣೆಯನ್ನ ಯಾವ ರೀತಿ ಮಾಡಬೇಕು. ಆದಿಕಾಲದಿಂದಲೂ ಪಾಲಿಸಿಕೊಂಡು ಬರುತ್ತಿರುವ ನಿಯಮಗಳೇನು, ಆಚರಣೆಗಳೇನು, ಅವುಗಳನ್ನು ಹೇಗೆ ಆಚರಿಸಬೇಕೆಂಬುದರ ಬಗ್ಗೆ ಧರ್ಮಗ್ರಂಥಗಳಲ್ಲಿ, ಶಾಸ್ತ್ರಗಳಲ್ಲಿ ವಿವರಿಸಲಾಗಿದೆ.

**ನೂತನ ವರ್ಷದ ಪ್ರಾರಂಭ ಯುಗಾದಿ ಹಬ್ಬ**

ಯುಗಾದಿಯು ಬಾಲ್ಯದ ನಮ್ಮ ದಿನಗಳನ್ನು ಒಮ್ಮೆ ಮೆಲುಕು ಹಾಕಿ ನೋಡಿ, ಇಡೀ ಮನೆಯಲ್ಲಿ ಹಬ್ಬದ ಪೂರ್ವ ತಯಾರಿಗಳು, ಹಬ್ಬದ ದಿನ ಬಂಧುಬಾಂಧವರ ಸಮಾಗಮ, ಮುಂಜಾನೆಯಿಂದಲೇ ಹೊಸಬಟ್ಟೆ ತೊಟ್ಟು ಕುಣಿದು ಸಂಭ್ರಮಿಸುವ ಯುಗಾದಿ ಮರೆತೆನೆಂದರೂ ಮರೆಯಲಾಗದಂತದ್ದು. ಯುಗಾದಿ ದಿನವು ಬದಲಾವಣೆ ಮತ್ತು ಹೊಸತನದ ಸಂಕೇತ. ಅಂದು ಪ್ರಕೃತಿಯಲ್ಲಿ, ಸಂವತ್ಸರದಲ್ಲಿ, ಋತುವಿನಲ್ಲಿ ಮತ್ತು ಮಾಸದಲ್ಲಿ ಬದಲಾವಣೆ ಅಥವಾ ಹೊಸತನ ಕಾಣುತ್ತೇವೆ. ಬೇವು–ಬೆಲ್ಲಗಳನ್ನು ಹಂಚಿ ತಿನ್ನುವುದರ ಮುಖೇನ ಜೀವನ ಸಂದೇಶವನ್ನು ಹೊರಹಾಕುತ್ತೇವೆ. ಒಟ್ಟಾರೆ ಯುಗಾದಿಯು ಜೀವನದ ಅತ್ಯಮೂಲ್ಯವಾದ ಅದ್ಭುತ ಪಾಠವನ್ನೇ ನಮಗೆ ಮನದಟ್ಟು ಮಾಡಬಲ್ಲದು. ಜೀವನವೆಂದರೆ ಬರೀ ಸಂತೋಷ ,ಆನಂದ ,ನಲಿವುಗಳ ಕೂಟವಲ್ಲ. ಹಾಗೆಯೇ ನೋವು ದುಃಖಗಳ ಕೂಪವು ಅಲ್ಲ. ಅದು ಅವೆರಡರ ಸುಂದರ ರಸಪಾಕ. ಒಂದೇ ನಾಣ್ಯದ ಎರಡು ಮುಖಗಳಂತೆ ಪ್ರತಿಯೊಬ್ಬರ ಬದುಕಿನಲ್ಲಿ ಕಷ್ಟ–ಸುಖಗಳು, ನೋವು ನಲಿವುಗಳು, ಅಳುವು–ನಗುವುಗಳು ಸಾಮಾನ್ಯ ಎಂಬ ಅದ್ಭುತ ಸಂದೇಶ ಇದರಲ್ಲಡಗಿದೆ.

**ಉಪಸಂಹಾರ :**

ಈ ಸಂದೇಶವನ್ನು ಜೀವನದಲ್ಲಿ ನಾವು ಅಳವಡಿಸಿಕೊಂಡಾಗ ನಮ್ಮ ಜೀವನವೂ ಸುಮಭರಿತವೂ ಫಲಭರಿತವೂ ಆಗುತ್ತದೆ. ಸುಖ ದುಃಖಗಳ ಚಕ್ರ ಜೀವನಸಾರ್ಥಕತೆಗೆ ಒದಗಿದ ಪೂರಕ ಪರಿಭ್ರಮಣವೇ ಹೊರತು ಅವೇ ಶಾಶ್ವತವಲ್ಲ. ಸುಖ ದುಃಖಗಳನ್ನು ಹೀಗೆ ನಾವು ಸ್ವೀಕರಿಸಿದ್ದೇವೆ ಎಂದು ಆ ಪ್ರಕೃತಿಮಾತೆಯ ಮುಂದೆ ಸಿದ್ಧವಾಗುವುದರ ಸಾಂಕೇತಿಕತೆಯನ್ನು ಬೇವು ಬೆಲ್ಲಗಳ ಮಿಶ್ರಣವನ್ನು ತಿನ್ನುವುದರಲ್ಲಿ ಕಾಣಬಹುದಾಗಿದೆ. ಯುಗದ ಆದಿಯಲ್ಲಿಯೇ ಬದುಕನ್ನು ಧೈರ್ಯವಾಗಿಯೂ ಸಂತಸವಾಗಿಯೂ ಸ್ವೀಕರಿಸುವಂಥ ವಿವೇಕವೇ ಯುಗಾದಿಹಬ್ಬದ ಮೂಲತತ್ವ. ಸಮಸ್ತ ಸಹಕಾರಿ ಬಂಧುಗಳಿಗೆ ಯುಗಾದಿ ಹಬ್ಬದ ಶುಭಾಷಯಗಳು.

# ವಿಶ್ವದ ಸಹಕಾರ ಚಳುವಳಿಯ ಗಂಗೋತ್ರಿ ಇಂಗ್ಲೆಂಡ್ ದೇಶದ ರಾಕ್ ಡೇಲ್ ಎಂಬ ಪುಟ್ಟ ಗ್ರಾಮ.

– ಶ್ರೀ ಶಂಕರ ಹೆಗಡೆ, ಸಹಕಾರಿ ಸಲಹೆಗಾರರು, ತುಮಕೂರು

**ಪೀಠಿಕೆ :**

ಯುರೋಪ್ ಖಂಡದಲ್ಲಿ ಪ್ರಾರಂಭಗೊಂಡ ಔದ್ಯೋಗಿಕ ಕ್ರಾಂತಿಯಿಂದ ಉಂಟಾದ ಅಸಮತೋಲನ ಹಾಗೂ ಶೋಷಣೆಗಳಿಂದ ಜನ ವಿಶೇಷತವಾಗಿ ಕಾರ್ಮಿಕರು ಹಾಗೂ ಬಡವರು ಹೀನಾಯ ಸ್ಥಿತಿಗೆ ಹೋಗುತ್ತಿರುವುದನ್ನು ಕಂಡು ಹಲವು ಚಿಂತಕರು ಹಾಗೂ ಸಾಮಾಜಿಕ ಕಳಕಳಿ ಉಳ್ಳ ಆದರ್ಶವಾದಿಗಳು ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಹೊಸ ಮಾರ್ಗವನ್ನು ಶೋಧಿಸತೊಡಗಿದರು. ಅದೇ ಪರಸ್ಪರ ಸಹಕಾರ. ಶ್ರೀಮಂತ ವ್ಯಕ್ತಿಗಳಿಗೆ ಕೇವಲ ಹಣದಾಸೆಗಾಗಿ ಮಾನವೀಯ ಮೌಲ್ಯಗಳಿಗೆ ತಿಲಾಂಜಲಿ ಇಟ್ಟು ಶೋಷಣೆ ಕಾರ್ಯದಲ್ಲಿ ತೊಡಗಿದರು. ಹಣವೇ ಪ್ರಾಮುಖ್ಯವಾಗಿ ಸಾಮಾಜಿಕ ನ್ಯಾಯ ನಶಿಸಿ ಹೋಯಿತು. ಈ ಹಿನ್ನೆಲೆಯಲ್ಲಿ ರಾಬರ್ಟ್ ಓವೆನ್ ಎಂಬ ಚಿಂತಕ ಮತ್ತು ಡಾ// ವಿಲಿಯಂ ಕಿಂಗ್ ಎಂಬ ವೈದ್ಯ ಸಹಕಾರ ಚಳುವಳಿ ತತ್ವ ಪ್ರಣಾಳಿಕೆ ಮತ್ತು ವಿಚಾರಧಾರೆಯನ್ನು ಪ್ರಚಾರಗೊಳಿಸಿದರು. ಈ ಎಲ್ಲದರ ಪರಿಣಾಮವಾಗಿ ಲಂಡನ್ ಸಮೀಪದ ರಾಕ್ ಡೇಲ್ ಎಂಬ ಗ್ರಾಮದಲ್ಲಿ 28 ಶೋಷಿತ ನೇಕಾರರು, 28 ಪೌಂಡ್‌ಗಳ ಷೇರು ಧನವನ್ನು ಕ್ರೋಢೀಕರಿಸಿ ಆಗಸ್ಟ್ 15, 1844 ರಂದು ರಾಕ್ ಡೇಲ್ ಪಯನಿಯರ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಎಂಬ ಸಂಸ್ಥೆಯನ್ನು ಸ್ಥಾಪಿಸಲು ನಿರ್ಣಯಿಸಿದರು. ಪ್ರಪಂಚದಲ್ಲಿ ಅಮೂರ್ತ ಆದಂತಹ ಈ ಸಹಕಾರಿ ಸಂಸ್ಥೆಯ ಮುಖಾಂತರ ಮುಹೂರ್ತ ರೂಪವನ್ನು ತಾಳಿತು. ಈ ಸಂಸ್ಥೆಯಿಂದ ಕೂಲಿಕಾರರು ಪರಸ್ಪರ ಸಹಕಾರದಿಂದ ತಮಗೆ ಬೇಕಾದ ದೈನಂದಿಕ ಸಾಮಗ್ರಿಗಳನ್ನು ತಮ್ಮ ತಮ್ಮಲ್ಲಿಯೆ ಹಂಚಿಕೊಂಡು ವ್ಯಾಪಾರಿಗಳ ಶೋಷಣೆ ಮತ್ತು ಕಲಬೆರಕೆ ಮುಂತಾದ ಅನಿಷ್ಟಗಳಿಂದ ಪಾರಾಗಲು ಪ್ರಾಮಾಣಿಕ ಪ್ರಯತ್ನ ನಡೆಸಿದರು. ಈ ಅಗ್ರಗಾಮಿಗಳು ಪ್ರಾರಂಭಿಸಿದ ಸಂಸ್ಥೆಗೆ Miles Ashworth ರವರು ಪ್ರಥಮ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಹೀಗೆ 21 ಡಿಸೆಂಬರ್ 1844ರಲ್ಲಿ ವಿಶ್ವದ ಪ್ರಥಮ ಸಹಕಾರ ಸಂಘ ಜನ್ಮ ತಾಳಿತು.

**ರಾಕ್ ಡೇಲ್ ಅಗ್ರಗಾಮಿಗಳ ವಸ್ತು ಸಂಗ್ರಹಾಲಯ ;**

ರಾಕ್ ಡೇಲ್ ಗ್ರಾಮದ ಟೋಡ್‌ಲೇನ್ ಎಂಬ ಸ್ಥಳದಲ್ಲಿ ಪ್ರಥಮ ಗ್ರಾಹಕ ಮಳಿಗೆ ಪ್ರಾರಂಭಗೊಂಡಿತು. ಪ್ರವರ್ತಕರು ಕಟ್ಟಡದ ನೆಲಮಾಳಿಗೆಯನ್ನು ಬಾಡಿಗೆಗೆ ನೀಡಿ ಮುಂಭಾಗದ. ಕಟ್ಟಡದ ಮೇಲ್ಭಾಗವು ಸಭೆ ಸಮಾರಂಭ ಮತ್ತು ಸಭೆಗಳಿಗೆ ಮೀಸಲಾಗಿಟ್ಟರು. ಈಗಲೂ ಸಹ ಕಟ್ಟಡದಲ್ಲಿ ವಸ್ತು ಸಂಗ್ರಹಲಾಯವಿದ್ದು ಕುರ್ಚಿಗಳು ಹಾಗೂ ತಕ್ಕಡಿ ಮುಂತಾದ ವಸ್ತುಗಳನ್ನು ಸಂದರ್ಶಕರು ನೋಡಬಹುದು. ಒಟ್ಟಾರೆ ಈ ಕಟ್ಟಡವು ವಿಶ್ವದ ಎಲ್ಲಾ ಸಹಕಾರಿಗಳಿಗೆ ಯಾತ್ರಾ ಸ್ಥಳವಾಗಿ, ಪವಿತ್ರ ಕ್ಷೇತ್ರವಾಗಿರುವುದು ಉಲ್ಲೇಖನೀಯ.

**ರಾಕ್ ಡೇಲು ಅಗ್ರಗಾಮಿಗಳ ಪ್ರಶಸ್ತಿ :**

ಪ್ರಥಮ ಸಹಕಾರಿಗಳ ಹೆಸರಿನಲ್ಲಿರುವ ಈ ಪುರಸ್ಕಾರವು ವಿಶ್ವದ ಸಹಕಾರ ಚಳುವಳಿಗೆ ಗಣನೀಯ ಸೇವೆ ಸಲ್ಲಿಸಿ ಅಪ್ರತಿಮ ಕೊಡುಗೆಯನ್ನು ನೀಡಿ ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಸಹಾಯ ಮಾಡುತ್ತಿರುವ ವ್ಯಕ್ತಿಗಳಿಗೆ ನೀಡಲಾಗುತ್ತಿದ್ದು ಈ ಪುರಸ್ಕಾರಕ್ಕೆ ಪ್ರಥಮವಾಗಿ ಭಾಜನರಾಗಿರುವವರು ಭಾರತ ದೇಶದ ಕ್ಷೀರ ಕ್ರಾಂತಿಯ ಹರಿಕಾರರಾಗಿರುವ ಡಾ// ವರ್ಗೀಸ್ ಕುರಿಯನ್ ಆಗಿರುತ್ತಾರೆಂದು ಆಗಿರುವುದು ಭಾರತೀಯರೆಲ್ಲ ಹೆಮ್ಮೆ ಪಡುವ ವಿಷಯ. 2001 ರಲ್ಲಿ ಸಿಯಾಲ್‌ನಲ್ಲಿ ನಡೆದಿರುವ ಸಾಮಾನ್ಯ ಸಭೆಯಲ್ಲಿ ಡಾ// ವರ್ಗೀಸ್ ಕುರಿಯನ್ ರವರು ಈ ಪ್ರಶಸ್ತಿಯನ್ನು ಸ್ವೀಕರಿಸಿರುವುದು ಒಂದು ಮೈಲಿಗಲ್ಲು.

**ರಾಕ್ ಡೇಲ್ ಸಹಕಾರಿ ತತ್ವಗಳ ಅರ್ಪಣೆ :**

ದಿ ಫ್ರೆಂಡ್ಲಿ ಸೊಸೈಟೀಸ್ ಆಕ್ಟ್ ನ ಅಡಿಯಲ್ಲಿ ನೋಂದಾಯಿತಗೊಂಡ ವಿಶ್ವದ ಪ್ರಥಮ ಸಹಕಾರ ಸಂಘ ಗ್ರಾಹಕ ಸಂಘವಾಗಿ ಕಾರ್ಯ ನಿರ್ವಹಿಸಿದ್ದು ಯುರೋಪಿನ ಇತರ ದೇಶಗಳಲ್ಲಿ ಸಹಕಾರ ಚಳುವಳಿ ವಿಸ್ತಾರಗೊಂಡಿದ್ದು ರಾಬರ್ಟ್ ಓವೆನ್ ರವರ ತತ್ವ ಪ್ರಣಾಳಿಕೆ ಮತ್ತು ವಿಲಿಯಂ ಕಿಂಗ್ ಎಂಬ ಬ್ರಿಟಿಷ್ ವೈದ್ಯರ ಸಹಕಾರ ಚಳುವಳಿಗೆ ಪ್ರೋತ್ಸಾಹಗಳೇ ಕಾರಣವಾಯಿತು. ಇಂದು ಬ್ರಿಟನ್ ದೇಶ ಜಗತ್ತಿನಲ್ಲಿಯೇ ಅತಿ ಹೆಚ್ಚಿನ ಗ್ರಾಹಕ ಸಹಕಾರ ಸಂಘಗಳನ್ನು ಹೊಂದಿದ್ದು ಜಪಾನ್ ದೇಶ 2ನೇ ಸ್ಥಾನದಲ್ಲಿದೆ. ಡೆನ್ಮಾರ್ಕ್ ದೇಶವು ವಿಶೇಷತವಾಗಿ ಸರ್ಕಾರಿ ಡೈರಿ ಸಾಧನೆಗೆ ಪ್ರಖ್ಯಾತವಾಗಿದೆ.

**ವಿಶ್ವ ಮಟ್ಟದ ಸಹಕಾರ ಸಂಸ್ಥೆಯ ಉಗಮ :**

ಜಗತ್ತಿನಲ್ಲಿ ಸಹಕಾರ ಚಳುವಳಿ ಬೆಳೆಯಲು ತೊಡಗಿದಾಗ ಮಾರ್ಗದರ್ಶನ ನೀಡಲು ವಿಶ್ವ ಮಟ್ಟದ ಸಂಸ್ಥೆಯು ಲಂಡನ್ ನಲ್ಲಿ ಐಸಿಎ ( ಅಂತರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ ) ಎಂಬ ಹೆಸರಿನಿಂದ ಜನ್ಮ ತಾಳಿತು. ಇತ್ತೀಚೆಗೆ ಇದರ ಕೇಂದ್ರ ಸ್ಥಾನವನ್ನು ಬೆಲ್ಜಿಯಂನ ಬ್ರಿಸೆಲ್ಸ್ ಎಂಬ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಹಾಗೂ 1923 ರಿಂದಲೂ ಪ್ರತಿ ವರ್ಷ ಜುಲೈ ತಿಂಗಳ ಮೊದಲ ಶನಿವಾರದಂದು ಅಂತರಾಷ್ಟ್ರೀಯ ಸಹಕಾರ ದಿನವನ್ನು ಆಚರಿಸಲಾಗುತ್ತಿದೆ.

**ಉಪ ಸಂಹಾರ :**

ಒಟ್ಟಿನಲ್ಲಿ 1844 ನೇ ಇಸವಿಯಲ್ಲಿ ಪ್ರಾರಂಭಗೊಂಡ ವಿಶ್ವದ ಸಹಕಾರ ಚಳುವಳಿ ಜಗತ್ತಿನ ನೂರಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ವ್ಯಾಪಿಸಿ ರಾಜಕೀಯೇತರ ಚಳುವಳಿಯಾಗಿ ಬೆಳೆಯುತ್ತಿರುವುದು ಸಹಕಾರ ತತ್ವ ಪ್ರಣಾಳಿಕೆಯ ಸುಭದ್ರತೆಯನ್ನು ಎತ್ತಿ ತೋರಿಸುತ್ತದೆ. ನಮ್ಮ ದೇಶದಲ್ಲಿ ಗದಗ ಜಿಲ್ಲೆಯ ಕಣಗಿನಹಾಳ ಎಂಬ ಗ್ರಾಮದಲ್ಲಿ 08/05/1905 ರಂದು ದಿವಂಗತ ಸಿದ್ದನಗೌಡ ಪಾಟೀಲ್ ಇವರ ನೇತೃತ್ವದಲ್ಲಿ ಕೃಷಿ ಸಹಕಾರ ಸಂಘ ಜನ್ಮ ತಾಳಿತು. ಇಂದು ಸಹಕಾರ ಚಳುವಳಿ, ಕೃಷಿ ಮಾರಾಟ, ಗ್ರಾಹಕ, ಔದ್ಯೋಗಿಕ, ಕೈಗಾರಿಕೆ, ಗೃಹನಿರ್ಮಾಣ, ಗೊಬ್ಬರ ತಯಾರಿಕೆ ಮುಂತಾದ ಹಲವು ಹತ್ತು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿ ಮುನ್ನಡೆಯುತ್ತಿದ್ದು, ಈ ಸಹಕಾರ ಚಳುವಳಿಯ ಏಳು ಬೀಳುಗಳಿಗೆ ಸಂಘದ ಸದಸ್ಯರುಗಳೇ ಹೊಣೆಗಾರರಾಗಿರುತ್ತಾರೆ. ಸಂಘದ ಲಾಭನಷ್ಟಗಳಿಗೆ ಸದಸ್ಯರೇ ಹೊಣೆಗಾರರು ಮತ್ತು ಸಹಕಾರ ಶಿಕ್ಷಣ ತರಬೇತಿ ಚಳುವಳಿಯ ಉನ್ನತಿಗೆ ಅಡಿಪಾಯವಾಗಿದ್ದು ಶಿಕ್ಷಣವಿಲ್ಲದ ಸಹಕಾರವಿಲ್ಲ ಎಂಬ ಮ್ಯಾಕ್ಲಗನ್ ಸಮಿತಿಯ ಘೋಷಣೆ ಮತ್ತು ಪಾಲನೆ ಚಳುವಳಿಯ ಯಶಸ್ಸಿನ ಬುನಾದಿ ಎಂದು ಬೇರೆ ಹೇಳಬೇಕಾಗಿಲ್ಲ.

**ಸಹಕಾರ ಚಿರಾಯುವಾಗಲಿ**

# "DigitALL: ಲಿಂಗ ಸಮಾನತೆಗಾಗಿ ನಾವೀನ್ಯತೆ ಮತ್ತು ತಂತ್ರಜ್ಞಾನ"-2023
# "DigitALL: Innovation and technology for gender equality"

– ಶ್ರೀಮತಿ ಸವಿತ ಎನ್. ಇ. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.




**ಬದುಕಿನ ಪ್ರತಿ ಹೆಜ್ಜೆಯಲ್ಲೂ ಒಲಿದು ಜೀವ ಹಾಗೂ ಜೀವನದ ಉದ್ಧಾರಕ್ಕೆ ಕಾರಣರಾದ ಪ್ರತಿ ಹೆಣ್ಣಿಗೂ, ಹೆಣ್ಣು ಜೀವಕ್ಕೂ, ಹೆಂಗರುಳಿಗೂ, ವಿಶ್ವ ಮಹಿಳಾ ದಿನಾಚರಣೆಯ ಶುಭಾಶಯಗಳು....**

ಹೆಣ್ಣು ಸಮಾಜದ ಕಣ್ಣು, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನುಡಿಮುತ್ತುಗಳನ್ನು ನಾವೆಲ್ಲಾ ಕೇಳಿರುತ್ತೇವೆ. ಆದರೆ ಸಮಾಜದಲ್ಲಿ ಮಹಿಳೆಗೆ ಸಲ್ಲಬೇಕಾದ ಗೌರವ ಸಿಗುತ್ತಿದೆಯಾ ? ಆಕೆಗೂ ಒಂದು ಪ್ರಶಂಸನಾ ದಿನವಿದೆಯೇ ಎಂದಾಗ ಹೌದು ಎನ್ನುವುದು ಸಂತಸದ ಸಂಗತಿ. ಹಗಲು ರಾತ್ರಿ ಎನ್ನದೇ ಪಾದರಸದಂತೆ ತನ್ನ ಜೀವನವನ್ನೆಲ್ಲಾ ತನ್ನವರಿಗಾಗಿ ಮೀಸಲಿಡುವ ಮಹಿಳೆಯರಿಗೆ ಗೌರವ ಸಲ್ಲಿಸುವ ಹಿನ್ನೆಲೆಯಲ್ಲಿ ಪ್ರತಿ ವರ್ಷ ಅಂತರರಾಷ್ಟ್ರೀಯ ಮಹಿಳಾ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. 2023 ರ ಸಾಲಿನಲ್ಲಿ ಮಹಿಳೆಯರ ಸ್ಥಿತಿಗತಿ (CSW-67) ಆಯೋಗದ ಮುಂಬರುವ 67ನೇ ಅಧಿವೇಶನದ ಆದ್ಯತೆಯ ಥೀಮ್‌ನೊಂದಿಗೆ ಹೊಂದಿಸಲಾಗಿದೆ, "ಆವಿಷ್ಕಾರ ಮತ್ತು ತಾಂತ್ರಿಕ ಬದಲಾವಣೆ ಮತ್ತು ಲಿಂಗ ಸಮಾನತೆ ಮತ್ತು ಎಲ್ಲಾ ಮಹಿಳೆಯರ ಸಬಲೀಕರಣವನ್ನು ಸಾಧಿಸಲು ಡಿಜಿಟಲ್ ಯುಗದಲ್ಲಿ ಮಹಿಳೆಯರು ಹಾಗೂ ಯುವತಿಯರು" ಶಿಕ್ಷಣ ಅತಿ ಮುಖ್ಯ. ಖಘಾಇ ಯ ಯುನೈಟೆಡ್ ನೇಷನ್ಸ್ ಅಬ್ಸರ್ವೆನ್ಸ್ ಪರಿವರ್ತಕ ತಂತ್ರಜ್ಞಾನ ಮತ್ತು ಡಿಜಿಟಲ್ ಶಿಕ್ಷಣದ ಪ್ರಗತಿಯನ್ನು ಸಾಧಿಸುವ ಮಹಿಳೆಯರು ಮತ್ತು ಹುಡುಗಿಯರನ್ನು ಗುರುತಿಸುತ್ತದೆ ಮತ್ತು ಆಚ–ರಿಸುತ್ತದೆ. IWD 2023 ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳ ಮೇಲೆ ಡಿಜಿಟಲ್ ಲಿಂಗ ಅಂತರದ ಪ್ರಭಾವವನ್ನು ಅನ್ವೇಷಿಸುತ್ತದೆ. ಈವೆಂಟ್ ಡಿಜಿಟಲ್ ಸ್ಥಳಗಳಲ್ಲಿ ಮಹಿಳೆಯರು ಮತ್ತು ಯುವತಿಯರ ಹಕ್ಕುಗಳನ್ನು ರಕ್ಷಿಸುವ ಪ್ರಾಮುಖ್ಯತೆಯನ್ನು ಮತ್ತು ಆನ್‌ಲೈನ್ ಮತ್ತು ಐಸಿಟಿ–ಸುಲಭಗೊಳಿಸಿದ ಲಿಂಗ ಆಧಾರಿತ ಹಿಂಸಾಚಾರವನ್ನು ತಿಳಿಸುತ್ತದೆ.

**ಮಹಿಳಾ ದಿನದ ಆಚರಣೆಯ ದಿನದ ನಾಂದಿ**

ಪ್ರತಿ ವರ್ಷ ಮಾರ್ಚ್ 8 ರಂದು ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಪ್ರಪಂಚದಾದ್ಯಂತ ಮಹಿಳೆಯರು ತಮ್ಮ ಜೀವನವನ್ನು ಸುಧಾರಿಸಲು ಪಟ್ಟಂತಹ ಶ್ರಮವನ್ನು ಗುರುತಿಸುವ ಮತ್ತು ಗೌರವಿಸುವ ಉದ್ದೇಶವನ್ನು ಹೊಂದಿದೆ. ಮಹಿಳೆಯು ಬಹಳಷ್ಟು ಸಾಧಿಸಿದ್ದರೂ ಕೂಡ ಆಕೆಯ ಪ್ರಯಾಣ ದೀರ್ಘವಾಗಿದೆ ಮತ್ತು ಆಕೆ ಇನ್ನೂ ಹೆಚ್ಚಿನದನ್ನು ಸಾಧಿಸಬೇಕಿದೆ ಎಂಬುದನ್ನು ಈ ದಿನ ನೆನಪಿಸುತ್ತದೆ. ಮಾರ್ಚ್ 8, 1917 ರಂದು, ಪೆಟ್ರೋಗ್ರಾಡ್‌ನಲ್ಲಿ (ಫೆಬ್ರವರಿ 23, 1917, ಜೂಲಿಯನ್ ಕ್ಯಾಲೆಂಡರ್‌ನಲ್ಲಿ), ಮಹಿಳಾ ಜವಳಿ ಕೆಲಸಗಾರರು ಪ್ರದರ್ಶನವನ್ನು ಪ್ರಾರಂಭಿಸಿದರು, ಅದು ಅಂತಿಮವಾಗಿ ಇಡೀ ನಗರವನ್ನು ಆವರಿಸಿತು, "ಬ್ರೆಡ್ ಮತ್ತು ಶಾಂತಿ" ("Bread and Peace")–ಒಂದು ವಿಶ್ವ ಸಮರವನ್ನು ಕೊನೆಗೊಳಿಸುವಂತೆ ಒತ್ತಾಯಿಸಿತು. ಇದರ ಪರಿಣಾಮವಾಗಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂದಿನಿಂದ ಆರಂಭವಾಗಿ ಇಂದು "DigitALL: ಲಿಂಗ ಸಮಾನತೆಗಾಗಿ ನಾವೀನ್ಯತೆ ಮತ್ತು ತಂತ್ರಜ್ಞಾನ" ಎಂಬ ಥೀಮ್‌ನೊಂದಿಗೆ ಆಚರಿಸಲು ನಾಂದಿಯಾಗಿದೆ.

**ಅಂತರಾಷ್ಟ್ರೀಯ ಮಹಿಳಾ ದಿನದ ಘನತೆಯ ಬಣ್ಣ**

ಅಂತರಾಷ್ಟ್ರೀಯ ಮಹಿಳಾ ದಿನದಂದು ಐತಿಹಾಸಿಕವಾಗಿ, ನೇರಳೆ ಬಣ್ಣವು ನ್ಯಾಯ ಮತ್ತು ಘನತೆಯನ್ನು ಸೂಚಿಸುವ ಬಣ್ಣವಾಗಿದೆ ಮತ್ತು ಈಗ ಇದನ್ನು ಮಹಿಳೆಯರನ್ನು ಪ್ರತಿನಿಧಿಸಲು ಬಳಸಲಾಗುತ್ತದೆ. ಹಸಿರು ಭರವಸೆಯ ಸಂಕೇತವಾಗಿದೆ. ಇಂದು, ನೇರಳೆ ಬಣ್ಣವು ಅಂತರಾಷ್ಟ್ರೀಯ ಮಹಿಳಾ ದಿನದ ಬಣ್ಣವಾಗಿದೆ ಮತ್ತು ಹಸಿರು ಬಣ್ಣವು ಸ್ತ್ರೀವಾದಿ ಚಳುವಳಿಯನ್ನು ಪ್ರತಿನಿಧಿಸುತ್ತದೆ.

**ಸಂಕೇತ**

ಶುಕ್ರ ಸ್ತ್ರೀ ಚಿಹ್ನೆ (ಕ್ರಾಸ್ ಹ್ಯಾಂಡಲ್ ಹೊಂದಿರುವ ವೃತ್ತ) ಅಂತರಾಷ್ಟ್ರೀಯ ಮಹಿಳಾ ದಿನದ ಅತ್ಯಂತ ಹೆಚ್ಚು ಬಳಸುವ ಸಂಕೇತವಾಗಿದೆ. ಇದನ್ನು ಹೆಚ್ಚಾಗಿ ಎತ್ತಿದ ಮುಷ್ಟಿ, ಸಂಖ್ಯೆ 8, ಗ್ಲೋಬ್, ಹೂವು ಮತ್ತು ಹೃದಯದಂತಹ ಇತರ ಚಿಹ್ನೆಗಳೊಂದಿಗೆ ಸಂಯೋಜಿಸಲಾಗುತ್ತದೆ.

**ಉದ್ದೇಶ :** ಮಹಿಳೆಯರು ಮತ್ತು ಇತರೆ ಗುಂಪುಗಳನ್ನು ತಂತ್ರಜ್ಞಾನಕ್ಕೆ ತರುವುದು ಹೆಚ್ಚು ಸೃಜನಶೀಲ ಪರಿಹಾರಗಳನ್ನು ನೀಡುತ್ತದೆ. ಮಹಿಳೆಯರ ಅಗತ್ಯಗಳನ್ನು ಪೂರೈಸುವ ಮತ್ತು ಲಿಂಗ ಸಮಾನತೆಯನ್ನು ಉತ್ತೇಜಿಸುವ ಆವಿಷ್ಕಾರಗಳಿಗೆ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿದೆ. ಇದಕ್ಕೆ ವ್ಯತಿರಿಕ್ತವಾಗಿ ಅವರ ಸೇರ್ಪಡೆಯ ಕೊರತೆಯು ಭಾರಿ ವೆಚ್ಚದೊಂದಿಗೆ ಬರುತ್ತದೆ. ಈ ಪ್ರವೃತ್ತಿಯನ್ನು ಹಿಮ್ಮೆಟ್ಟಿಸಲು ಆನ್‌ಲೈನ್ ಹಿಂಸಾಚಾರದ ಸಮಸ್ಯೆಯನ್ನು ನಿಭಾಯಿಸುವ ಅಗತ್ಯವಿರುತ್ತದೆ, 51 ದೇಶಗಳ ಅಧ್ಯಯನವು 38% ಮಹಿಳೆಯರು ವೈಯಕ್ತಿಕವಾಗಿ ಅನುಭವಿಸಿದ್ದಾರೆಂದು ಬಹಿರಂಗಪಡಿಸಿದೆ. ಮಹಿಳೆಯರು ಮತ್ತು ಹುಡುಗಿಯರಲ್ಲಿ ನಾವೀನ್ಯತೆ, ತಂತ್ರಜ್ಞಾನ ಮತ್ತು ಡಿಜಿಟಲ್ ಶಿಕ್ಷಣಕ್ಕೆ ಲಿಂಗ–ಪ್ರತಿಕ್ರಿಯಾತ್ಮಕ ವಿಧಾನವು ಅವರ ಹಕ್ಕುಗಳು ಮತ್ತು ನಾಗರಿಕತೆ ಬಗ್ಗೆ ಜಾಗೃತಿಯನ್ನು ಹೆಚ್ಚಿಸಬಹುದು. 2030 ರ ಕಾರ್ಯಸೂಚಿಯು ಡಿಜಿಟಲ್ ತಂತ್ರಜ್ಞಾನದಲ್ಲಿನ ಪ್ರಗತಿಗಳು ಅಭಿವೃದ್ಧಿ

ಮತ್ತು ಮಾನವೀಯ ಸವಾಲುಗಳನ್ನು ಎದುರಿಸಲು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಅಪಾರ ಅವಕಾಶಗಳನ್ನು ನೀಡುತ್ತವೆ. ದುರದೃಷ್ಟವಶಾತ್, ಡಿಜಿಟಲ್ ಕ್ರಾಂತಿಯ ಅವಕಾಶಗಳು ಲಿಂಗ ಅಸಮಾನತೆಯ ಅಸ್ತಿತ್ವದಲ್ಲಿರುವ ಮಾದರಿಗಳನ್ನು ಶಾಶ್ವತಗೊಳಿಸುವ ಅಪಾಯವನ್ನು ಸಹ ಪ್ರಸ್ತುತಪಡಿಸುತ್ತವೆ. ಡಿಜಿಟಲ್ ಕೌಶಲ್ಯಗಳು ಮತ್ತು ತಂತ್ರಜ್ಞಾನಗಳ ಪ್ರವೇಶದ ಸಂದರ್ಭದಲ್ಲಿ ಬೆಳೆಯುತ್ತಿರುವ ಅಸಮಾನತೆಗಳು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿವೆ, ಈ ಡಿಜಿಟಲ್ ಲಿಂಗ ವಿಭಜನೆಯ ಪರಿಣಾಮವಾಗಿ ಮಹಿಳೆಯರು ಹಿಂದುಳಿದಿದ್ದಾರೆ. Inclusive and transformative ತಂತ್ರಜ್ಞಾನ ಮತ್ತು ಡಿಜಿಟಲ್ ಶಿಕ್ಷಣದ ಅಗತ್ಯವು ಸುಸ್ಥಿರ ಭವಿಷ್ಯಕ್ಕಾಗಿ ಈ "DigitALL: ಲಿಂಗ ಸಮಾನತೆಗಾಗಿ ನಾವೀನ್ಯತೆ ಮತ್ತು ತಂತ್ರಜ್ಞಾನ" ಎಂಬ ವಿಷಯದ ಅಡಿಯಲ್ಲಿ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಆಚರಣೆಯನ್ನು 8 ಮಾರ್ಚ್ 2023 ರಂದು ಬುಧವಾರ ರಂದು ಉನ್ನತ ಮಟ್ಟದ ಈವೆಂಟ್‌ನಿಂದ ಗುರುತಿಸಲಾಗುತ್ತದೆ.

### ಸಂಯುಕ್ತ ರಾಷ್ಟ್ರಗಳು ಮತ್ತು ಲಿಂಗ ಸಮಾನತೆ – ಮಹಿಳಾಭಿವೃದ್ಧಿ ಕಾರ್ಯಕ್ರಮ

ಸಂಯುಕ್ತ ರಾಷ್ಟ್ರಗಳು 1945 ರಲ್ಲಿ ಸಹಿ ಮಾಡಿದ ಸಂಯುಕ್ತ ರಾಷ್ಟ್ರಗಳ ಅಂತಾರಾಷ್ಟ್ರೀಯ "ಲಿಂಗ ಸಮಾನತಾ ತತ್ವ" ಅಂಗೀಕಾರಕ್ಕೆ ಬಂತು. ಅಲ್ಲಿಯ ನಂತರ ವಿಶ್ವವ್ಯಾಪ್ತ ಒಪ್ಪಂದ ನೀತಿ, ನಿರ್ದಿಷ್ಟಮಾನ, ಮಹಿಳಾಭಿವೃದ್ಧಿ ಕಾರ್ಯಕ್ರಮ ಹಾಗೂ ಯೋಜನೆಗಳು ಕಾರ್ಯರೂಪಕ್ಕೆ ಬಂದವು. ಕೆಲ ವರ್ಷಗಳ ನಂತರ ಸಂಯುಕ್ತ ರಾಷ್ಟ್ರಗಳು ಮತ್ತು ಅದರ ತಾಂತ್ರಿಕ ಏಜೆನ್ಸಿಗಳು ಮಾನವ ಹಕ್ಕುಗಳನ್ನ ಅಭಿನಂದಿಸಿ ಮಹಿಳೆಯರು ಭಾಗವಹಿಸುವುದನ್ನು ಪ್ರೋತ್ಸಾಹಿಸಿದವು. ಮಹಿಳೆಯರನ್ನು ಪ್ರಬಲಗೊಳಿಸುವ ಸಂಯುಕ್ತ ರಾಷ್ಟ್ರಗಳ ಕಾರ್ಯ ವಿಶ್ವದಾದ್ಯಂತ ಮುಂದುವರೆಯಿತು.

### ಆವಿಷ್ಕಾರ/ನಾವೀನ್ಯತೆ ವೇದಿಕೆ

ಆರ್ಥಿಕತೆಯ ಎಲ್ಲ ವಲಯಗಳಲ್ಲೂ ನಾವಿನ್ಯತೆ ವ್ಯಾಪಿಸುತ್ತಿದ್ದು, ಹಿಂದೆಂದೂ ಕಂಡಿರದ ರೀತಿಯಲ್ಲಿ ನಮ್ಮ ಜೀವನದ ಮೇಲೆ ಪರಿಣಾಮ ಬೀರುತ್ತಿದೆ. ಮತ್ತೊಂದು ರೀತಿಯಲ್ಲಿ ಉಲ್ಲೇಖಿಸುವುದಾದರೆ, ನಾವಿನ್ಯತೆಯು ನವೀನ, ಸೃಜನಾತ್ಮಕ ಪರಿಣಾಮ, ವಹಿವಾಟುಗಳಲ್ಲಿ ಹೊಸತನ ಮತ್ತು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಸಾಮರ್ಥ್ಯಗಳನ್ನು ಹೆಚ್ಚಿಸುವುದಾಗಿದೆ. ಭಾರತೀಯ ಸನ್ನಿವೇಶದಲ್ಲಿ ಮಾನವ ಸಂಪನ್ಮೂಲ, ಹೂಡಿಕೆ, ಜ್ಞಾನಾಧಾರಿತ ಉದ್ಯೋಗ, ವ್ಯಾಪಾರ, ಸುರಕ್ಷತೆ ಮತ್ತು ಕಾನೂನು ಪರಿಸರ ಆವಿಷ್ಕಾರ/ನಾವಿನ್ಯತೆಯನ್ನು ಅರ್ಥೈಸುವ ಅಂಶಗಳಾಗಿವೆ. ಇವುಗಳೆಲ್ಲದರಲ್ಲೂ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದೆ. ಸಾಂಸ್ಥಿಕ ಮತ್ತು ವೈಯಕ್ತಿಕ ಆವಿಷ್ಕಾರ/ನಾವಿನ್ಯತೆಗಳ ಮಾಹಿತಿ ಕಲೆ ಹಾಕಲು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಒಂದು ಆವಿಷ್ಕಾರ ವೇದಿಕೆಯನ್ನು ಸ್ಥಾಪಿಸಿದೆ. ಅದರ ಉದ್ದೇಶಗಳು ಮಹಿಳಾ ಪ್ರಪಂಚಕ್ಕೆ ಅತಿ ನೀಡಿದ ಕೊಡಿಗೆಯಾಗಿವೆ.

### ಉದ್ದೇಶಗಳು

- ವಿವಿಧ ಕ್ಷೇತ್ರಗಳಲ್ಲಿ ಅನ್ವೇಷಣೆ/ನಾವೀನ್ಯತೆಗಳನ್ನು ಪರಿಶೋಧಿಸುವುದು ಮತ್ತು ದಾಖಲಿಸುವುದು ಬೌದ್ಧಿಕ ಆಸ್ತಿ ಹಕ್ಕುಗಳ ರಕ್ಷಣೆ, ಮಾನ್ಯತೆ ಮತ್ತು ಉನ್ನತೀಕರಣಕ್ಕಾಗಿ ಸಂಶೋಧಕರಿಗೆ/ಅನ್ವೇಷಕರಿಗೆ ಒಂದು ವೇದಿಕೆಯನ್ನು ಒದಗಿಸುವುದು
- ನಾವೀನ್ಯತೆಗಳ ಮತ್ತಷ್ಟು ಪರಿಷ್ಕರಣೆ ಮತ್ತು ಅದರ ಅನ್ವಯಿಕೆಗಳಿಗೆ ಮಾರ್ಗದರ್ಶಕ ಆವಿಷ್ಕಾರ–ಉದ್ಯಮ–ವ್ಯಾಪಾರ/ವ್ಯವಹಾರ ಸಂಪರ್ಕಗಳನ್ನು ಕಲ್ಪಿಸುವುದು
- ಆವಿಷ್ಕಾರ/ನಾವೀನ್ಯತೆಗಳನ್ನು ಒಳಗೊಂಡ ಸಮುದಾಯ ಕಾರ್ಯಾಗಾರಗಳು ಮತ್ತು ಪ್ರದರ್ಶನಗಳನ್ನು ಆಯೋಜಿಸುವುದು
- ಪ್ರಕಟಣೆ ಮತ್ತು ಪ್ರಶಸ್ತಿಗಳ ಮೂಲಕ, ಜನಸಾಮಾನ್ಯರಲ್ಲಿ ನಾವೀನ್ಯತೆ/ಆವಿಷ್ಕಾರಕ ಮನೋಭಾವವನ್ನು ಬೆಳಸುವುದು.
- ಕೃಷಿ, ಎಂಜಿನಿಯರಿಂಗ್, ಇಂಧನ, ಕೈಗಾರಿಕೆ, ಸೇವಾ ವಲಯ, ಇತ್ಯಾದಿ ವಿವಿಧ ವಿಭಾಗಗಳಲ್ಲಿ ಆವಿಷ್ಕಾರಕರು/ನಾವಿನ್ಯತೆಕಾರರ ಒಕ್ಕೂಟ ಸ್ಥಾಪಿಸುವುದು
- ಸಾಮರ್ಥ್ಯವರ್ಧನೆಗಾಗಿ ಮುಂಚೂಣಿ ನಾವೀನ್ಯತೆಗಳ ಬಗ್ಗೆ ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ಪರಿಕಲ್ಪನೆಗಳು, ಪ್ರಕ್ರಿಯೆಗಳು ಮತ್ತು ಉತ್ಪನ್ನಗಳನ್ನು ಆಹ್ವಾನಿಸುವುದು
- ವಾಣಿಜ್ಯ ಅನ್ವಯಕಗಳಿಗೆ ಆವಿಷ್ಕಾರ/ನಾವಿನ್ಯತೆಗಳ ಸಂಸ್ಕರಣೆ ಮತ್ತು ಮಾನ್ಯತೆಗೆ ಅಗತ್ಯಗಳಿಗನುಗುಣವಾಗಿ ಸೀಮಿತ ಆರ್ಥಿಕ ನೆರವನ್ನು ಒದಗಿಸುವುದು
- ಉನ್ನತೀಕರಣಕ್ಕಾಗಿ ಬೌದ್ಧಿಕ ಆಸ್ತಿ ನಿರ್ವಹಣೆ ಕಾರ್ಯವಿಧಾನಗಳನ್ನು ಕ್ರಿಯಾತ್ಮಕಗೊಳಿಸುವುದು; ಬೇಡಿಕೆ ಮೌಲ್ಯಮಾಪನ ಮತ್ತು ಆವಿಷ್ಕಾರಕರು ಮತ್ತು ಅನ್ವಯಿಕ ಸಂಸ್ಥೆಗಳ ನಡುವೆ ಹೊಂದಾಣಿಕೆ ಏರ್ಪಡಿಸುವುದು
- ಜ್ಞಾನಾಧಾರಿತ ಉದ್ಯೋಗಕ್ಕಾಗಿ ಆರಂಭಿಕ ಉದ್ಯಮ ಮತ್ತು ಉದ್ಯಮದಾರರಿಗೆ ಮಾದರಿಗಳು
- ವಾರ್ಷಿಕ ಪ್ರಶಸ್ತಿಗಳ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಆವಿಷ್ಕಾರಕರ ಸಾಧನೆಯನ್ನು ಗುರುತಿಸುವುದು.

### ಉಪಸಂಹಾರ :

ನಾವು ಯಾವುದೇ ಒಂದು ಕೆಲಸ ನಿರ್ವಹಿಸಬೇಕಾದರೆ ಒಂದು ಉತ್ತಮವಾದ ಉದೇಶ ಹಾಗೂ ಗುರಿಯನ್ನು ಹೊಂದಿರಬೇಕು ಅಂತಹ ಗುರಿ ಮತ್ತು ಉದ್ದೇಶವನ್ನು ಮಹಿಳಾ ದಿನಾಚರಣೆಯ ಹಮ್ಮಿಕೊಂಡಿದೆ. ತನ್ನ ಆಸೆ ಆಕಾಂಕ್ಷೆ, ಸುಖ ಸಂತೋಷಗಳನ್ನೆಲ್ಲಾ ಬದಿಗಿಟ್ಟು ಸಂಸಾರವನ್ನು ನೀಗಿಸುತ್ತಾ, ಮರು ಅಪೇಕ್ಷೆ ಪಡದೇ ಬದುಕನ್ನು ನಡೆಸುವ ಕಲೆಗತಿಯೇ ಸ್ತ್ರೀ. ಮಹಿಳೆಗೆ ಇಣತಹ ಇಂದು ಸ್ಥಾನ ಇಂದು ಈ ಗುರಿ ಹಾಗೂ ಉದ್ದೇಶದಿಂದ ಇಂದು ಈಡೇರುತ್ತಿದೆ ಎಂಬುದೇ ಸಂತಸದ ವಿಷಯ. ಹೆಣ್ಣು ಅಂದರೆ, ಪ್ರೀತಿ, ಉದಾರತೆ, ತಾಳ್ಮೆ, ಮಾಯೆ, ಸೋಜಿಗ, ಕರುಣೆ, ಅಂತಃಕರಣ, ಹೀಗೆ ವರ್ಣಿಸಲಾಗದ ಗಟ್ಟಿ ಪದಪುಂಜ ಹೆಣ್ಣು.. ಎಲ್ಲ ಮಹಿಳೆಯರಿಗೆ ಮಹಿಳಾ ದಿನದ ಶುಭಾಷಯಗಳು.

# ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಶೇಷತೆ ಹಾಗೂ ಆಚರಣೆ ಹಾಗೂ ಶುಭಾಶಯಗಳು

– ಶ್ರೀಮತಿ ಶಮಂತ ಲಕ್ಷ್ಮಿ ಎಂ, ಮೈಸೂರು

ಪ್ರತಿ ವರ್ಷವು ಮಾರ್ಚ್ 08 ರಂದು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯೆಂದು ಆಚರಿಸಲಾಗುವುದು. ನಮ್ಮ ದೇಶದಲ್ಲಿ ಮಹಿಳೆಯರಿಗೆ ಸ್ಥಾನ ಮಾನ ಅತ್ಯಂತ ಮಹತ್ವದಾಗಿದೆ. ಹೆಣ್ಣಿಗೆ ಗೌರವದಿಂದ ಅಕ್ಕ ತಂಗಿಯರ ಸಮಾನದಲ್ಲಿ ಮತ್ತು ಹೆಣ್ಣು ಮನೆಯಲ್ಲಿ ಇದ್ದರೆ ಅದು ಲಕ್ಷ್ಮಿ ಸ್ವರೂಪವೆಂದು ಭಾವನೆ ಇದೆ. ಮಹಿಳೆಯರಿಗೆ ಪುರುಷರಷ್ಟೇ ಸಮಾನ ಅವಕಾಶಗಳನ್ನು ನೀಡಬೇಕು, ಆಕೆಯ ಸಾಧನೆಗಳನ್ನು ಗುರುತಿಸಬೇಕು ಎಂಬ ಉದ್ದೇಶದಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುವುದು.ಈ ಮೂಲಕ ಮಹಿಳೆಯರಿಗೆ ಗೌರವ ಸಲ್ಲಿಸಲಾಗುತ್ತದೆ. ಮಹಿಳೆಯರನ್ನು ನಮ್ಮ ದೇಶದಲ್ಲಿ ಅಮ್ಮ, ಸೋದರಿ, ಮಡದಿ, ಪುತ್ರಿ, ಸೊಸೆ, ಅತ್ತಿಗೆ, ಶಿಕ್ಷಕಿ, ಹೀಗೆ ಅನೇಕ ರೀತಿಯಲ್ಲಿ ಗೌರವದಿಂದ ಕರೆಯುತ್ತಾರೆ. ಹೀಗೆ ಪ್ರತಿಯೊಬ್ಬರ ಬದುಕಿನಲ್ಲೂ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಸ್ತ್ರೀ ಎಂಬುದೇ ಮಹಾಶಕ್ತಿ. ಮತ್ತೊಂದು ಉಸಿರಿಗೆ ಜೀವ ನೀಡುವವರು ಮಹಿಳೆ. ಮಹಿಳೆ ಇಲ್ಲದ ಈ ಜಗತ್ತು ಊಹಿಸುವುದಕ್ಕೆ ಸಾದ್ಯವಿಲ್ಲ. ಪ್ರತಿಯೊಬ್ಬರ ಬದುಕಿನಲ್ಲೂ ಮಹಿಳೆಯ ಕೊಡುಗೆ ಅಪಾರ. ಬದುಕಿಗೊಂದು ಶಕ್ತಿ, ಧೈರ್ಯ,ಚೈತನ್ಯ, ಬಲ, ಸ್ಫೂರ್ತಿ, ತುಂಬುವವರು ಮಹಿಳೆ. ಪ್ರತಿದಿನ ಮಹಿಳೆ ತೋರುವ ಅಕ್ಕರೆ, ನಿಬಾಹಿಸುವ ಜವಾಬ್ದಾರಿ, ಕುಟುಂಬಕ್ಕಾಗಿ ವಹಿಸುವ ಶ್ರಮ, ತೋರಿಸುವ ಕಾಳಜಿ ಪ್ರತಿಯೊಬ್ಬರಿಗೂ ಗೊತ್ತಿದೆ. ಹೀಗೆ ಎಲ್ಲರ ಜೀವನಕ್ಕೂ ಬಲವಾಗಿರುವ ಮಹಿಳೆಯರಿಗೆ ಗೌರವ ಸಲ್ಲಿಸಲು, ಅವರ ತ್ಯಾಗ, ಕೊಡುಗೆಗೆ ಧನ್ಯವಾದ ರೂಪಿಸಲು ಅವರ ಸಾಧನೆಯನ್ನು ಕೊಂಡಾಡಲು ಇರುವ ಅವಕಾಶ ಮಾರ್ಚ್ 08. ಪ್ರತಿ ವರ್ಷ ಮಾರ್ಚ್ 08 ರಂದು ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಗುತ್ತದೆ. ಮಹಿಳಾ ಸಮಾನತೆಯ ಬಗ್ಗೆ ಜಾಗೃತಿ ಮೂಡಿಸಲು, ಲಿಂಗ ತಾರತಮ್ಯವನ್ನು ಹೋಗಲಾಡಿಸುವ ಸಲುವಾಗಿಯೂ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತದೆ. ಅಮ್ಮನಿಂದ ಹಿಡಿದು, ಮಡದಿಯವರೆಗೂ, ಸೋದರಿಯಿಂದ ಹಿಡಿದು ಪುತ್ರಿಯವರೆಗೂ ಪ್ರತಿಯೊಂದು ಹಂತದಲ್ಲೂ ಮಹಿಳೆ ಎಂಬ ಬಲ ಇಲ್ಲದೇ ಹೋದರೆ ಯಾರ ಜೀವನಕ್ಕೂ ಅಸ್ತಿತ್ವವೇ ಇರದು. ಪ್ರತಿಯೊಬ್ಬರ ಬದುಕಿನಲ್ಲಿ ಮಹಿಳೆಯರ ಪಾತ್ರ ಅತ್ಯಂತ ದೊಡ್ಡದು. ಆಕೆಗಿರುವ ಸ್ಥೈರ್ಯ ಧೈರ್ಯಕ್ಕೆ ಸರಿಸಾಟಿಯಿಲ್ಲ. ಒಬ್ಬ ಮಗಳಾಗಿ, ಮಡದಿಯಾಗಿ, ತಾಯಿಯಾಗಿ, ಮನೆಗೆ ಆಳಾಗಿ, ಹೊರಗಡೆ ದುಡಿಯುವ ಮಹಿಳೆಯಾಗಿ ಹೀಗೆ ಮಹಿಳೆ ಹತ್ತು ಹಲವು ಪಾತ್ರಗಳನ್ನು ಒಟ್ಟಿಗೆ ಮಾಡುತ್ತಾಳೆ. ಆಕೆಯ ಸಾಮರ್ಥ್ಯಕ್ಕೆ ಆಕೆನೇ ಸರಿಸಾಟಿ. ನಿಮ್ಮ ಬದುಕಿನಲ್ಲಿ ಆಕೆಯ ಪಾತ್ರ ಮಹತ್ವದಾಗಿರುತ್ತದೆ. ಆಕೆ ಗೃಹಿಣಿಯಾಗಿರಬಹುದು ಅಥವಾ ಹೊರಗಡೆ ದುಡಿಯುವ ಮಹಿಳೆಯಾಗಿರಬಹುದು, ಇಬ್ಬರಲ್ಲಿ ಯಾರು ಮೇಲಲ್ಲ, ಯಾರೂ ಕೀಳಿಲ್ಲ, ಇಬ್ಬರ ಪಾತ್ರಗಳು ನಿಮ್ಮ ಸಂಸಾರ ತೂಗಿಸಲು ಬಹುಮುಖ್ಯ. ಆಕೆ ನಿಮಗಾಗಿ ದುಡಿಯುತ್ತಾಳೆ, ಇಡೀ ಬದುಕನ್ನು ನಿಮಗಾಗಿ ಮೀಸಲಿಡುತ್ತಾಳೆ. ಆ ಹೆಣ್ಣಿಗೆ ಮಹಿಳಾ ದಿನಾಚರಣೆಯಂದು ಶುಭ ಕೋರಿದರೆ ಅವಳು ತುಂಬಾ ಖುಷಿಯನ್ನು ಪಡುತ್ತಾಳೆ. ಶುಭ ಕೋರಲು ಕೆಲವೊಂದು ಸಂದೇಶಗಳು.

- ಓ ನನ್ನ ಜೀವನ ಸಂಗಾತಿ, ಮಡದಿಯಾಗಿ ತೋರಿದ ಪ್ರೀತಿಗೆ, ಕಾಳಜಿಗೆ, ಅಕ್ಕರೆಗೆ ನಾನು ಸದಾ ಚಿರಋಣಿಯಾಗಿರುತ್ತೇನೆ. ನಿನಗೆ ನನ್ನ ಒಂದು ಸಂದೇಶದಿಂದ ನಮ್ಮಿಬ್ಬರಲ್ಲಿ ತೋರುವ ಪ್ರೀತಿಗೆ ಯಾವುದೂ ಸಾಟಿಯಿಲ್ಲ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.
- ನನ್ನ ಜೀವನಕ್ಕೊಂದು ರಥ ಸ್ವರೂಪ ಕೊಟ್ಟ ಶಿಲ್ಪಿ ನೀವು ನಿಮ್ಮೆಲ್ಲಾ ಪ್ರೀತಿ, ತ್ಯಾಗ, ಶ್ರಮಕ್ಕೆ ನಾನು ನನ್ನ ಕೊನೆಯ ಉಸಿರಿರುವರೆಗೂ ಚಿರಋಣಿಯಾಗಿರುತ್ತೇನೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.
- ನಿನ್ನಂತಹ ಸಹೋದರಿಯನ್ನು ಪಡೆದಿರುವ ನಾನೇ ಧನ್ಯ, ಇದಕ್ಕಾಗಿ ನಾನು ಸದಾ ಹೆಮ್ಮೆಪಡುತ್ತೇನೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.
- ಅಮ್ಮಾ ನಾನಿಂದೂ ನನ್ನ ಬದುಕು ಕಟ್ಟಿಕೊಂಡಿದ್ದೇನೆ ಎಂದರೆ ಅದು ನೀವು ನೀಡಿದ ಕೊಡುಗೆ. ನೀವು ನ್ನನ ಸ್ಫೂರ್ತಿ ನಿಮಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.
- ನೀವು ನನಗೆ ಸ್ಫೂರ್ತಿ ಮಾತ್ರವಲ್ಲ, ಆತ್ಮೀಯ ಗೆಳತಿ ಕೂಡ ಹೌದು. ದೇವರು ನನಗೆ ಕೊಟ್ಟ ದೊಡ್ಡ ಉಡುಗೊರೆ ನೀವು. ನಿಮಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.
- ಮಹಿಳೆ ಎಂದರೆ ಭವಿಷ್ಯ ಮಹಿಳೆ ಬದುಕಿಗೆ ಬಲತುಂಬುವವಳು, ನಮ್ಮ ಬದುಕನ್ನು ರೂಪಿಸಿದ, ಜೀವನಕ್ಕೆ ಶಕ್ತಿ ತುಂಬಿದ ಎಲ್ಲಾ ಮಹಿಳೆಯರನ್ನು ಗೌರವಿಸೋಣ. ಅವರ ಮಮತೆ ತ್ಯಾಗ, ಶ್ರಮಕ್ಕೆ ಧನ್ಯವಾದ ಹೇಳೋಣ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.

# ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಒಂದು ನೋಟ

– ಶ್ರೀಮತಿ ದಿವ್ಯ ಟಿ. ಹಿರಿಯ ಸಹಾಯಕಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಪ್ರತಿ ವರ್ಷ ಮಾರ್ಚ್ 08ರಂದು ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಪ್ರಪಂಚದಾದ್ಯಂತ ಅನೇಕ ದೇಶಗಳಲ್ಲಿ ಆಚರಿಸಲಾಗುತ್ತದೆ. ರಾಷ್ಟ್ರೀಯ, ಜನಾಂಗೀಯ, ಭಾಷಿಕ, ಸಾಂಸ್ಕೃತಿಕ, ಆರ್ಥಿಕ ಅಥವಾ ರಾಜಕೀಯ ಎಂಬ ಕ್ಷೇತ್ರಗಳನ್ನು ಲೆಕ್ಕಿಸದೇ ಮಹಿಳೆಯರು ತಮ್ಮ ಸಾಧನೆಗಳಿಗಾಗಿ ಗುರುತಿಸಲ್ಪಡುವ ದಿನವಾಗಿದೆ ಹಾಗೂ ಸಾಧನೆಗಳನ್ನು ಸಂಭ್ರಮಿಸಿ ಆಚರಿಸುವ ಜಾಗತಿಕ ದಿನವಾಗಿದೆ.

ವಿಶ್ವದಾದ್ಯಂತ ಮಾರ್ಚ್ 08ರಂದು ಮಹಿಳಾ ಸಮಾನತೆಯ ಬದ್ಧತೆಯನ್ನು ಬಲಪಡಿಸಲು ಮಹತ್ವದ ಚಟುವಟಿಕೆಗಳ ಮೂಲಕ ಮಹಿಳೆಯರ ಸಾಧನೆಗಳನ್ನು ಆಚರಿಸುವಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನವು ಸಾಕ್ಷಿಯಾಗಿದೆ. ಹಾಗೆಯೇ, ಈ ದಿನವು ಮಹಿಳೆಯರ ಸಮಾನತೆಯನ್ನು ಸಾಧಿಸಲು ವೇಗಗೊಳಿಸಲು ಅಗತ್ಯವಿರುವ ಕ್ರಮಗಳ ಕರೆಯನ್ನು ಸಹ ಸೂಚಿಸುತ್ತದೆ.

**ಇತಿಹಾಸ :** ಅಂತರ ರಾಷ್ಟ್ರೀಯ ಮಹಿಳಾ ದಿನಕ್ಕೆ ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲದ ಇತಿಹಾಸವಿದ್ದು, ಮೊದಲ ಬಾರಿಗೆ ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು 1911ರಲ್ಲಿ ಆಸ್ಟ್ರಿಯಾ, ಡೆನ್ಮಾರ್ಕ್, ಜರ್ಮನಿ ಮತ್ತು ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ಒಂದು ದಶಲಕ್ಷಕ್ಕಿಂತಲೂ ಹೆಚ್ಚಿನ ಜನರನ್ನೊಳಗೊಂಡಂತೆ ಆಚರಿಸಲಾಯಿತು. ಇಂದು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಎಲ್ಲೆಡೆ ಸಾಮೂಹಿಕವಾಗಿ ಒಟ್ಟಾಗಿ ಆಚರಿಸಲಾಗುತ್ತಿದೆ.

**ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಸಂಕೇತಿಸುವ ಬಣ್ಣಗಳು :** ನೇರಳೆ, ಹಸಿರು ಮತ್ತು ಬಿಳಿ ಬಣ್ಣಗಳು ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಸಂಕೇತಿಸುವ ಬಣ್ಣಗಳಾಗಿವೆ. ನೇರಳೆ ಬಣ್ಣವು ನ್ಯಾಯ ಮತ್ತು ಘನತೆಯನ್ನು ಸೂಚಿಸುತ್ತದೆ. ಹಸಿರು ಬಣ್ಣವು ಭರವಸೆಯನ್ನು ಸಂಕೇತಿಸುತ್ತದೆ. ಬಿಳಿ ಬಣ್ಣವು ಶುದ್ಧತೆಯನ್ನು ಪ್ರತಿನಿಧಿಸುತ್ತದೆ. ಈ ಬಣ್ಣಗಳು 1908ರಲ್ಲಿ ಯುಕೆನಲ್ಲಿ ಮಹಿಳೆಯರ ಸಾಮಾಜಿಕ ಮತ್ತು ರಾಜಕೀಯ ಒಕ್ಕೂಟದಿಂದ (WSPU) ಹುಟ್ಟಿಕೊಂಡಿವೆ.

**ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಗತ್ಯತೆ ಇದೆಯೇ? :** ವರ್ಲ್ಡ್ ಎಕನಾಮಿಕ್ ಫೋರಮ್ ಪ್ರಕಾರ, "ನಮ್ಮಲ್ಲಿ ಯಾರೂ ಸಹ ನಮ್ಮ ಜೀವಿತಾವಧಿಯಲ್ಲಿ ಲಿಂಗ ಸಮಾನತೆಯನ್ನು ಕಾಣುವುದಿಲ್ಲ ಮತ್ತು ನಮ್ಮ ಅನೇಕ ಸಂತತಿಗಳು ಸಹ ಕಾಣುವುದಿಲ್ಲ. ಇನ್ನೂ ಒಂದು ಶತಮಾನದವರೆಗೂ ಲಿಂಗ ಸಮಾನತೆಯನ್ನು ಸಾಧಿಸಲಾಗುವುದಿಲ್ಲ" ಎಂದು ತಿಳಿಸಿದ್ದು, ಇದು ಬೇಸರದ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಲಿಂಗ ಸಮಾನತೆಯ ಕುರಿತು ಜಾಗೃತಿಯನ್ನು ಮೂಡಿಸಿ, ಸಮಾನ ಅವಕಾಶ ಹಾಗೂ ಪ್ರತಿಫಲಗಳನ್ನು ಸಾಧಿಸಲು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯು ಅಗತ್ಯವಾಗಿದೆ.

**ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಉದ್ದೇಶಗಳು :** ಮಹಿಳೆಯರ ಸಾಧನೆಗಳನ್ನು ಎತ್ತಿ ಹಿಡಿಯುವುದು, ಸವಾಲುಗಳನ್ನು ಗುರುತಿಸಿ, ಪರಿಹಾರ ಮಾರ್ಗಗಳನ್ನು ಕಂಡು ಹಿಡಿಯುವುದು ಮತ್ತು ಮಹಿಳೆಯರ ಹಕ್ಕುಗಳ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸುವುದು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಉದ್ದೇಶವಾಗಿದೆ.

**ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯಿಂದಾಗುವ ಫಲಿತಾಂಶಗಳು :**

1) ಮಹಿಳೆಯರ ಸಾಧನೆಗಳನ್ನು ಗುರುತಿಸಿ, ಆಚರಿಸುವುದರ ಮೂಲಕ ಮತ್ತು ಸಾಧನೆಗಳ ಪ್ರಚಾರತೆಯನ್ನು ಹೆಚ್ಚಿಸುವುದರ ಮೂಲಕ ಲಿಂಗ ಸಮಾನತೆಯನ್ನು ಸಾಧಿಸಲು ಸಹಾಯ ಮಾಡುತ್ತದೆ; 2) ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಮನೋಭಾವವನ್ನು ಬೆಳೆಸುವುದರ ಮೂಲಕ ಮಹಿಳೆಯರಲ್ಲಿ ಧನಾತ್ಮಕ ಬದಲಾವಣೆಯನ್ನುಂಟು ಮಾಡಲು ಸಹಾಯಕವಾಗುತ್ತದೆ; 3) ಅರ್ಥಪೂರ್ಣ ನಿರೂಪಣೆಗಳು, ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಚಟುವಟಿಕೆಗಳ ಮೂಲಕ ಲಿಂಗ ಸಮಾನತೆ ಸಾಧನೆಯ ಕುರಿತು ವಿಶ್ವದಾದ್ಯಂತ ಜಾಗೃತಿ ಮೂಡಿಸಲು ಸಹಾಯ ಮಾಡುತ್ತದೆ, 4) ಲಿಂಗ ಸಮಾನತೆ ಸಾಧನೆಯನ್ನು ವೇಗಗೊಳಿಸಲು ಸಹಾಯ ಮಾಡುತ್ತದೆ, 5) ಲಿಂಗ ಪಕ್ಷಪಾತ ಮತ್ತು ಲಿಂಗ ತಾರತಮ್ಯವನ್ನು ಎದುರಿಸಲು ಸಹಾಯ ಮಾಡುತ್ತದೆ.

**ಅಂತರ ರಾಷ್ಟ್ರೀಯ ಮಹಿಳಾ ದಿನದಂದು ಕೆಲವು ಸ್ಥಳಗಳಲ್ಲಿ ರಜೆ ಘೋಷಿಸುವುದರ ಮೂಲಕ ಆಚರಣೆ :** ಅಫ್ಘಾನಿಸ್ತಾನ್, ಅರ್ಮೇನಿಯಾ, ಅಜೆರ್ಬೈಜಾನ್, ಬೆಲಾರಸ್, ಬುರ್ಕಿನಾ ಫಾಸೊ, ಕಾಂಬೋಡಿಯಾ, ಚೀನಾ (ಮಹಿಳೆಯರಿಗೆ ಮಾತ್ರ), ಕ್ಯೂಬಾ, ಜಾರ್ಜಿಯಾ, ಗಿನಿಯಾ–ಬಿಸ್ಸೌ, ಎರಿಟ್ರಿಯಾ, ಕಝಾಕಿಸ್ತಾನ್, ಕಿರ್ಗಿಸ್ತಾನ್, ಲಾವೋಸ್, ಮಡಗಾಸ್ಕರ್ (ಮಹಿಳೆಯರಿಗೆ ಮಾತ್ರ), ಮಾಲ್ಡೋವಾ, ಮಂಗೋಲಿಯಾ, ಮಾಂಟೆನೆಗ್ರೊ, ನೇಪಾಳ (ಮಹಿಳೆಯರಿಗೆ ಮಾತ್ರ), ರಷ್ಯಾ, ತಜಕಿಸ್ತಾನ್, ತುರ್ಕಮೆನಿಸ್ತಾನ್, ಉಗಾಂಡಾ, ಉಕ್ರೇನ್, ಉಜ್ಬೇಕಿಸ್ತಾನ್, ವಿಯೆಟ್ನಾಂ ಮತ್ತು ಜಾಂಬಿಯಾ ಸೇರಿದಂತೆ ಹಲವಾರು ಸ್ಥಳಗಳಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನವು ಅಧಿಕೃತ ರಜಾ ದಿನವಾಗಿದೆ. ಜರ್ಮನಿಯಲ್ಲಿ, 2019ರಲ್ಲಿ ಬರ್ಲಿನ್‌ನ ಸಂಸತ್ತು ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಸಾರ್ವಜನಿಕ ರಜಾ ದಿನವನ್ನಾಗಿ ಮಸೂದೆಯನ್ನು ಅನುಮೋದಿಸಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 28
Licensed to post without Prepayment License No. PMG BG/WPP-384/2023-2025.



**2023ರ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಷಯ :** ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಪ್ರತಿ ವರ್ಷವು ಒಂದೊಂದು ವಿಷಯದೊಂದಿಗೆ ಆಚರಿಸಲಾಗುತ್ತಿದ್ದು, ಪ್ರಸ್ತುತ 2023ರ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಷಯವು DigitALL : ಲಿಂಗ ಸಮಾನತೆಗಾಗಿ ಆವಿಷ್ಕಾರ ಮತ್ತು ತಂತ್ರಜ್ಞಾನ (DigitALL : Innovation and technology for gender equality) ಆಗಿದೆ.

**ಲಿಂಗ ಸಮಾನತೆಗಾಗಿ ಆವಿಷ್ಕಾರ ಮತ್ತು ತಂತ್ರಜ್ಞಾನದ ಅಗತ್ಯತೆ :** ಇಂದು ಡಿಜಿಟಲ್ ತಂತ್ರಜ್ಞಾನವು ನಮ್ಮ ಜೀವನಕ್ಕೆ ಅತ್ಯಗತ್ಯವಾಗಿದ್ದು, ನಿರ್ಣಾಯಕವಾಗಿದೆ. ಆನ್‌ಲೈನ್ ಶಿಕ್ಷಣ, ಔಪಚಾರಿಕ ಮತ್ತು ಅನೌಪಚಾರಿಕ ಕಲಿಕೆಗೆ ಪ್ರವೇಶ; ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಸಂಬಂಧಿಸಿದ ಮಾಹಿತಿ; ತಮ್ಮದೇ ಆದ ಸೃಜನಶೀಲ ಮತ್ತು ಸಾಂಸ್ಕೃತಿಕ ಅಭ್ಯಾಸಗಳೊಂದಿಗೆ ತೊಡಗಿಸಿಕೊಳ್ಳಲು; ಆಲೋಚನೆಗಳು ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು; ವಿರಾಮಕ್ಕಾಗಿ, ಆಟವಾಡಲು ಮತ್ತು ಗೆಳೆಯರೊಂದಿಗೆ ಸಂಪರ್ಕ ಸಾಧಿಸಲು; ಉದ್ಯೋಗ, ವೃತ್ತಿ ಮಾಹಿತಿ, ಉದ್ಯಮಶೀಲತೆಯ ಅವಕಾಶಗಳನ್ನು ಹುಡುಕುವುದು ಸೇರಿದಂತೆ ಆನ್‌ಲೈನ್ ಅನುಭವಗಳು ಮತ್ತು ಅವಕಾಶಗಳು ಮಕ್ಕಳ ಹಾಗೂ ಯುವಜನರ ಅಭಿವೃದ್ಧಿಗೆ ಪೂರಕವಾದ ಕ್ಷೇತ್ರಗಳಲ್ಲಿ ಪ್ರಮುಖವಾಗಿದೆ.

ಆದಾಗ್ಯೂ, ಡಿಜಿಟಲ್ ಕ್ಷೇತ್ರದಲ್ಲಿ ಲಿಂಗ ಅಸಮಾನತೆ ಇದೆ. ಡಿಜಿಟಲ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ವಿಷಯಕ್ಕೆ ಬಂದಾಗ ಹೆಣ್ಣು ಮಕ್ಕಳು ಗಂಡು ಮಕ್ಕಳಿಗಿಂತ ಕಡಿಮೆ ಮಟ್ಟದಲ್ಲಿ ಡಿಜಿಟಲ್ ತಂತ್ರಜ್ಞಾನಕ್ಕೆ ಪ್ರವೇಶ ಹಾಗೂ ಕಡಿಮೆ ಡಿಜಿಟಲ್ ತಂತ್ರಜ್ಞಾನದ ಬಳಕೆಯನ್ನು ಹೊಂದಿರುತ್ತಾರೆ ಮತ್ತು ಆಗಿಂದಾಗ್ಗೆ ಡಿಜಿಟಲ್ ತಂತ್ರಜ್ಞಾನದಿಂದ ಪ್ರಯೋಜನವನ್ನು ಪಡೆಯುವುದಿಲ್ಲ. ಹಾಗೆಯೇ, ಡಿಜಿಟಲ್ ತಂತ್ರಜ್ಞಾನವನ್ನು ಹೆಚ್ಚಾಗಿ ಪುರುಷ ಬಳಕೆದಾರರಿಗಾಗಿ ವಿನ್ಯಾಸಗೊಳಿಸಲಾಗುತ್ತಿದೆ. ಇದರಿಂದಾಗಿ ಹೆಣ್ಣು ಮಕ್ಕಳು ಹೊರಗುಳಿಯುತ್ತಾರೆ. ಪರಿಣಾಮವಾಗಿ, ಮಹಿಳಾ ಬಳಕೆದಾರರಿಗೆ ಈ ಡಿಜಿಟಲ್ ಸೌಲಭ್ಯಗಳಿಗೆ ಮತ್ತು ಸೇವೆಗಳಿಗೆ ಪ್ರವೇಶಿಸಲು ಸಾಧ್ಯವಾಗುವುದಿಲ್ಲ ಅಥವಾ ಅವುಗಳನ್ನು ಉಪಯೋಗಿಸಿಕೊಳ್ಳಲು ಯಾವುದೇ ಕಾರಣ ಇರುವುದಿಲ್ಲ, ಅಂದರೆ ಹೆಣ್ಣು ಮಕ್ಕಳು ಡಿಜಿಟಲ್ ತಂತ್ರಜ್ಞಾನದಲ್ಲಿ ಕಡಿಮೆ ಪ್ರಮಾಣದಲ್ಲಿ ತೊಡಗಿಸಿಕೊಳ್ಳುತ್ತಾರೆ. ಇದರಿಂದ ಡಿಜಿಟಲ್ ಲಿಂಗ ಅಸಮಾನತೆಯನ್ನುಂಟು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಆರುಣಂಐಐ ಎಂಬ ಧ್ಯೇಯ ವಾಕ್ಯದೊಂದಿಗೆ ಡಿಜಿಟಲ್ ತಂತ್ರಜ್ಞಾನದಲ್ಲಿ "ಲಿಂಗ ಸಮಾನತೆಗಾಗಿ ಆವಿಷ್ಕಾರ ಮತ್ತು ತಂತ್ರಜ್ಞಾನ (DigitALL : Innovation and technology for gender equality)" ಎಂಬ ವಿಷಯೊಂದಿಗೆ 2023ರ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಮೂಲಕ ಡಿಜಿಟಲ್ ಕ್ಷೇತ್ರದಲ್ಲಿ ಆವಿಷ್ಕಾರಗಳನ್ನು ನಡೆಸಿ, ತಂತ್ರಜ್ಞಾನಗಳ ಸಮಾನ ಬಳಕೆಗೆ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಸಮಾನ ಅವಕಾಶಗಳನ್ನು ಒದಗಿಸುವುದಕ್ಕೆ ವೇಗವನ್ನು ನೀಡಿ, ಡಿಜಿಟಲ್ ತಂತ್ರಜ್ಞಾನದಲ್ಲಿ ಲಿಂಗ ಅಸಮಾನತೆಯನ್ನು ನಿವಾರಿಸಲು ಸಹಕಾರಿಯಾಗಲಿದೆ.

**ಸಹಕಾರಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳುವುದರ ಮೂಲಕ ಲಿಂಗ ಸಮಾನತೆ ಸಾಧನೆ :** ಭಾರತವು ದೊಡ್ಡ ಮಟ್ಟದಲ್ಲಿ ಡಿಜಿಟಲ್ ಆವಿಷ್ಕಾರ, ಉತ್ತಮ ಗುಣಮಟ್ಟದ ತಾಂತ್ರಿಕ ಸಂಪನ್ಮೂಲಗಳು ಹಾಗೂ ಸುಶಿಕ್ಷಿತ ಜನರನ್ನು ಹೊಂದಿದೆ. ಸಹಕಾರ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರ ಮೂಲಕ ಸಹಕಾರಿ ಸಂಸ್ಥೆಗಳು/ ಬ್ಯಾಂಕುಗಳು ತಮ್ಮ ಮಹಿಳಾ ಸದಸ್ಯರ ಅಗತ್ಯತೆಗಳನ್ನು ಉತ್ತಮವಾಗಿ ಪೂರೈಸಲು ಸಹಾಯ ಮಾಡುತ್ತಿದೆ. ಗಣಕೀಕರಣ ವ್ಯವಸ್ಥೆ, ಕೋರ್ ಬ್ಯಾಂಕಿಂಗ್ ವ್ಯವಸ್ಥೆ, ಎಟಿಎಂ ವ್ಯವಸ್ಥೆ, ಡೆಬಿಟ್ ಕಾರ್ಡ್‌ಗಳು, ಮೊಬೈಲ್ ಮೂಲಕ ಪಾವತಿ, ಇ–ಮೇಲ್, ಮೊಬೈಲ್ ಬ್ಯಾಂಕಿಂಗ್, ಆನ್‌ಲೈನ್ ಬ್ಯಾಂಕಿಂಗ್, ಫೋನ್ ಬ್ಯಾಂಕಿಂಗ್, ಚೆಕ್‌ಗಳು, ಡಿಮ್ಯಾಂಡ್ ಡ್ರಾಫ್ಟ್‌ಗಳು, ಇಸಿಎಸ್, ನೆಫ್ಟ್, ಆರ್‌ಟಿಜಿಎಸ್ ಸೇರಿದಂತೆ ಇತರ ಹಲವು ಡಿಜಿಟಲ್ ಮಾಧ್ಯಮಗಳನ್ನು ಬಳಕೆ ಮಾಡಿಕೊಳ್ಳುತ್ತಿದೆ. ಆದಾಗ್ಯೂ ಸಹ, ಸಹಕಾರಿ ಸಂಸ್ಥೆಗಳು ಮಹಿಳೆಯರು ಹಾಗೂ ಹೆಣ್ಣು ಮಕ್ಕಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಕರ್ಷಿಸಲು ಮತ್ತು ದುರ್ಬಲ ವರ್ಗಗಳ ಹಾಗೂ ಹಿಂದುಳಿದ ಪ್ರದೇಶಗಳ ಮಹಿಳೆಯರನ್ನು ತಲುಪಲು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಡಿಜಿಟಲ್ ತಂತ್ರಜ್ಞಾನಗಳನ್ನು ಮತ್ತು ಗಣಕೀಕರಣವನ್ನು ಅಳವಡಿಸಿಕೊಳ್ಳಬೇಕಿದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003